ಅಧ್ಯಾಯ 9

# ಐದನೆಯ ಮತ್ತು ಆರನೆಯ ತುತೂರಿಗಳು

ಬಹಳ ಕಾಲದ ಹಿಂದೆ, "ಪಾಪವು ಕೊಡುವ ಸಂಬಳ ಮರಣ" (ರೋಮಾ 6:23) ಎಂದು ಪೌಲನು ಘೋಷಿಸಿದನು. ಹೇಗೂ, ಇಂದು "ಪಾಪ" ಎಂಬ ಪದವು ಅನೇಕರಿಗೆ ಯಾವ ಅರ್ಥವನ್ನೇ ಹೊಂದಿರುವದಿಲ್ಲ. *Whatever Happened to Sin?*[1] ಎಂಬ ಪುಸ್ತಕದಲ್ಲಿ ವಿಶ್ವ-ವಿಖ್ಯಾತ ಮನೋಶಾಸ್ತ್ರಜ್ಞನಾದ Karl Menningerನು ಬರೆಯುವದೇನೆಂದರೆ ಕಳೆದ ಐದು ದಶಕಗಳಲ್ಲಿ ಜನರು ಯಾವದನ್ನು ಗಂಭೀರ ಪಾಪಗಳೆಂದು ಪರಿಗಣಿಸಿಕೊಳ್ಳುತ್ತಿದ್ದರೋ ಅವುಗಳು "ಅಪರಾಧಗಳು" ಅಥವಾ "ರೋಗಳು" ಎಂದು ಪರಿಗಣಿಸಲ್ಪಟ್ಟಿದ್ದರೆ, ಕಡಿಮೆ ಗಂಭೀರವೆಂದು ತಿಳಿದುಕೊಂಡಿದ್ದ ಪಾಪಗಳು ಈಗ ಕೇವಲ "ದುರ್ಗುಣಗಳು," "ನೈತಿಕವಾಗಿ ಅಂಗೀಕರಿಸಿಕೊಳ್ಳಲಾಗದ ನಡವಳಿಕೆಗಳು," "ಸಮಾಜವಿರೋಧಿ ಪ್ರವೃತ್ತಿಗಳು," "ತಪ್ಪುಗಳು," "ಹೊಂದಿಕೊಂಡು ಹೋಗಲು ಅಸಾಮರ್ಥ್ಯಗಳು," ಅಥವಾ "ಪರ್ಯಾಯ ಜೀವನಶೈಲಿಗಳು" ಎಂದು ಪರಿಗಣಿಸಲ್ಪಡುತ್ತಿವೆ - "ಪಾಪ" ಎಂಬುದನ್ನು ಬಿಟ್ಟು ಬೇರೆ ಏನೆಲ್ಲಾ ಬೇಕಾದರೂ ಹೆಸರುಗಳಿಂದ ಕರೆಯುತ್ತಾರೆ.

ಪಾಪದ ಭಾವನೆಯು ಕಟಾಕ್ಷವನ್ನು ಕಳೆದುಕೊಂಡಿರುವದಾದರೆ, ಪಾಪಭರಿತ ನಡವಳಿಕೆಯು ಅಸಂತೋಷಕರವಾದ ಪರಿಣಾಮಗಳನ್ನು ತರುತ್ತದೆ ಎಂಬ ವಿಚಾರವನ್ನು ಲೋಕವು ಇನ್ನೆಷ್ಟರ ಮಟ್ಟಿಗೆ ತಿರಸ್ಕರಿಸಿರುತ್ತದೆ. ಮನುಷ್ಯರು ಒಪ್ಪಿದರೂ ಸರಿಯೇ ಅಥವಾ ಒಪ್ಪದಿದ್ದರೂ ಸರಿಯೇ, ಪಾಪಿಯು ತನ್ನ ಸಂಬಳವನ್ನು ಪಡೆದುಕೊಳ್ಳುವನು - ನಿರ್ದಾಕ್ಷಿಣ್ಯ, ಕಠಿಣ ಮರಣವೆಂದ ನಾಣ್ಯಗಳಲ್ಲಿ ಪಡೆಯುತ್ತಾನೆ (ರೋಮಾ 6:23) ಎಂದು ದೇವರು ಈಗಲೂ ಘೋಷಿಸುತ್ತಾನೆ. ಈ ಸತ್ಯವು ಪ್ರಕಟನೆ 9ನೇ ಅಧ್ಯಾಯದಲ್ಲಿ ಕಣ್ಣಿಗೆ ಕಟ್ಟುವಂತೆ ಸಾರಲ್ಪಟ್ಟಿರುವ ಪ್ರಕಾರ ಬೇರೆ ಎಲ್ಲಿಯೂ ಸಾರಲ್ಪಟ್ಟಿರುವದಿಲ್ಲ.

ಮೊಲದ ನಾಲ್ಕು ತುತೂರಿಗಳು ನೈಸರ್ಗಿಕ ಜಗತ್ತಿನ ಮೇಲೆ ಪಾಪದ ಪರಿಣಾಮಗಳನ್ನು ಒತ್ತಿ ಹೇಳುತ್ತವೆ. ಐದನೆಯ ತುತೂರಿಯು ಸ್ವತಃ ಪಾಪಿಯ ಮೇಲಾಗುವ ಪಾಪದ ಪರಿಣಾಮವನ್ನು ತೋರಿಸಿ ಕೊಡುತ್ತದೆ. ಆರನೆಯ ತುತೂರಿಯು (9:13–21) ಇತರರ ಮೇಲಾಗುವ ಪಾಪದ ಪರಿಣಾಮಗಳನ್ನು ಎತ್ತಿ ತೋರಿಸುತ್ತದೆ.

"ಪಾಪ ಹೇಗೆ ನೋವುಂಟು ಮಾಡುತ್ತದೆ" ಎಂಬ ಶಿರ್ಷಿಕೆಯ ಒಂದು ಪ್ರಸಂಗದಲ್ಲಿ Jimmy Allenನು ಪಾಪವು ಶಾರೀರಿಕವಾಗಿ ನೋವುಂಟು ಮಾಡುತ್ತದೆ, ಪಾಪವು ಮಾನಸಿಕವಾಗಿ ನೋವುಂಟು ಮಾಡುತ್ತದೆ, ಪಾಪವು ಮನಸ್ಸಾಕ್ಷಿಯ ಮೇಲೆ ನೋವುಂಟು ಮಾಡುತ್ತದೆ, ಮತ್ತು ಪಾಪವು ಆತ್ಮೀಕವಾಗಿ ನೋವುಂಟು ಮಾಡುತ್ತದೆ ಎಂಬುದನ್ನು ಗಮನಕ್ಕೆ

ತರುತ್ತಾನೆ.[2] ಇನ್ನು ಕೆಲವರು ಅದನ್ನು ಈ ವಿಧದಲ್ಲಿ ಹೇಳುತ್ತಾರೆ: ಪಾಪವು ಬಾಹ್ಯದಲ್ಲಿ, ಆಂತರಿಕವಾಗಿ, ಮತ್ತು ನಿತ್ಯವಾಗಿ ನೋವುಂಟು ಮಾಡುತ್ತದೆ. ಪಾಪದ ಈ ಎಲ್ಲಾ ಪರಿಣಾಮಗಳು ಪ್ರಕಟನೆ 9ರಲ್ಲಿ ಕಂಡು ಬರುತ್ತವೆ - ಅಲ್ಲಿ ವ್ಯಕ್ತಪಡಿಸಲ್ಪಟ್ಟಿರುತ್ತವೆ ಅಥವಾ ಸೂಚ್ಯಾರ್ಥವಾಗಿ ಹೇಳಲ್ಪಟ್ಟಿರುತ್ತವೆ.

## ಐದನೆಯ ತುತೂರಿ ಊದಲ್ಪಡುತ್ತದೆ (9:1-6)

**1ಐದನೆಯ ದೇವದೂತನು ತುತೂರಿಯನ್ನೂದಿದಾಗ ಆಕಾಶದಿಂದ ಭೂಮಿಗೆ ಬಿದ್ದ ಒಂದು ನಕ್ಷತ್ರವನ್ನು ಕಂಡೆನು. ಅವನಿಗೆ ಅಧೋಲೋಕಕ್ಕೆ ಹೋಗುವ ಕೂಪದ ಬೀಗದಕೈ ಕೊಡಲ್ಪಟ್ಟಿತು. 2ಅವನು ಅಧೋಲೋಕದ ಕೂಪವನ್ನು ತೆರೆಯಲು ಕೂಪದಿಂದ ಬಂದ ಹೊಗೆ ದೊಡ್ಡ ಕುಲುಮೆಯ ಹೊಗೆಯಂತೆ ಏರಿತು; ಕೂಪದ ಹೊಗೆಯಿಂದ ಸೂರ್ಯನೂ ಆಕಾಶವೂ ಕತ್ತಲಾದವು. 3ಹೊಗೆಯೊಳಗಿಂದ ಮಿಡಿತೆಗಳು ಭೂಮಿಯ ಮೇಲೆ ಹೊರಟುಬಂದವು. ಭೂಮಿಯಲ್ಲಿರುವ ಚೇಳುಗಳಿಗೆ ಸಾಮರ್ಥ್ಯವಿರುವ ಪ್ರಕಾರ ಅವುಗಳಿಗೆ ಸಾಮರ್ಥ್ಯಕೊಡಲ್ಪಟ್ಟಿತು. 4ಭೂಮಿಯ ಮೇಲಿರುವ ಹುಲ್ಲನ್ನಾಗಲಿ ಯಾವ ಪಲ್ಯವನ್ನಾಗಲಿ ಮರವನ್ನಾಗಲಿ ಕೆಡಿಸದೆ ಹಣೆಯ ಮೇಲೆ ದೇವರ ಮುದ್ರೆಯಿಲ್ಲದವರಾದ ಮನುಷ್ಯರನ್ನು ಮಾತ್ರ ಕೆಡಿಸಬಹುದೆಂದು ಅವುಗಳಿಗೆ ಅಪ್ಪಣೆಯಾಯಿತು. 5ಇವರನ್ನು ಕೊಲ್ಲದೆ ಐದು ತಿಂಗಳುಗಳ ವರೆಗೂ ಪೀಡಿಸುವದಕ್ಕೆ ಅಪ್ಪಣೆಯಾಯಿತು. ಅವರಿಗುಂಟಾದ ಪೀಡೆಯು ಚೇಳು ಮನುಷ್ಯನನ್ನು ಹೊಡೆಯುವದರಿಂದುಂಟಾಗುವ ಪೀಡೆಗೆ ಸಮಾನವಾಗಿತ್ತು. 6ಆ ಕಾಲದಲ್ಲಿ ಮನುಷ್ಯರು ಮರಣವನ್ನು ಬಯಸುವರು, ಆದರೆ ಅದು ಪ್ರಾಪ್ತವಾಗುವದಿಲ್ಲ; ಸಾಯಬೇಕೆಂದು ಕೋರುವರು, ಆದರೆ ಮೃತ್ಯುವು ಅವರ ಬಳಿಯಿಂದ ಓಡಿಹೋಗುವದು.**

ಪ್ರಕಟನೆ 9:1-12 ವಾಕ್ಯಭಾಗವು ಇಡೀ ಪುಸ್ತಕದಲ್ಲಿಯೇ ಅತ್ಯಂಥ ವಿಶಿಷ್ಟ ಹಾಗೂ ಭಯಾನಕವಾದ ದೃಶ್ಯಗಳಲ್ಲೊಂದಾಗಿದೆ. Robert Mounceನು ಈ ವಾಕ್ಯಭಾಗದಲ್ಲಿನ ಮಿಡತೆಗಳನ್ನು "ಅಂತ್ಯಕಾಲಿಕದಲ್ಲಿರುವ ಅತಿ ವಿಲಕ್ಷಣವಾದ ಜೀವಿಗಳಾಗಿವೆ"[3] ಎಂದು ಬಣ್ಣಿಸುತ್ತಾನೆ.

ಈ ವಾಕ್ಯಭಾಗದ ಅದ್ಭುತ ವಿವರಗಳ ಚರ್ಚೆ ಮಾಡುವದಾದರೆ ಅನೇಕ ಪುಟಗಳನ್ನು ತುಂಬಿಸಬಹುದಾಗಿದೆ: ಬಿದ್ದ ನಕ್ಷತ್ರವು ಯಾರನ್ನು ಪ್ರತಿನಿಧಿಸುವದಾಗಿದೆ? ಅಧೋಲೋಕ ಎಂದರೇನು? ಅಬದ್ದೋನ್/ಅಪೊಲ್ಲಿಯೊನ್ ಯಾರು? ನಾವು ಈ ರೀತಿಯ ಪ್ರಶ್ನೆಗಳಿಂದ ತೊಳಲಾಡುತ್ತೇವೆ, ಆದರೆ ದರ್ಶನದ *ಸಂಪೂರ್ಣವಾದ ಪರಿಣಾಮವೇ* ಇಲ್ಲಿ ಪ್ರಾಮುಖ್ಯವಾಗಿರುತ್ತದೆಂಬುದನ್ನು ಪುನಃ ಒತ್ತಿ ಹೇಳತಕ್ಕದ್ದಾಗಿದೆ. Jim McGuigganನು ಹೀಗೆ ಹೇಳಿದನು, ಜನರು ಚಿತ್ರಗಳನ್ನು ನೋಡಬೇಕಾಗಿರುವಲ್ಲಿ ಅನೇಕ ಸಾರಿ ಕೇವಲ ಕುಂಚದ ಎಳೆಗಳನ್ನು ಕಾಣುತ್ತಾರೆ.[4]

ಮೊದಲು ಸಂಪೂರ್ಣ ದೃಶ್ಯವನ್ನು ಊಹಿಸಿಕೊಳ್ಳುವದು ಪ್ರಾಮುಖ್ಯವಾಗಿರುತ್ತದೆ. ಅಧೋಲೋಕದ ಕೂಪದಿಂದ ಭಯಾನಕವಾದ ಜೀವಿಗಳು ಹೊರ ಬರುತ್ತವೆ; ಅವುಗಳ ಉದ್ದೇಶವು ಮನುಷ್ಯರನ್ನು ಪೀಡಿಸುವದೇ ಆಗಿತ್ತು (ವಚನಗಳು 4-6, 10). ದೇವರ ನಂಬಿಗಸ್ತರಿಗೆ ಅವುಗಳು ಕೇಡು ಮಾಡುವದಿಲ್ಲ; ಅವುಗಳು ಅವಿಶ್ವಾಸಿಗಳಿಗೆ ಮಾತ್ರವೇ ಪೀಡೆಯನ್ನು ಕೊಡುತ್ತವೆ (ವ. 4). ಈ ದೃಶ್ಯವು ಅಂತಿಮ ನ್ಯಾಯತೀರ್ಪುಗಳಲ್ಲಿ ಒಂದಾಗಿರುವದಿಲ್ಲ: ಈ ಪೀಡೆಯು ಸ್ವಲ್ಪ ಕಾಲದ ವರೆಗೆ ಇರುವದು (ವಚನಗಳು 5, 10) ಮತ್ತು

ಮರಣದಲ್ಲಿ ಅಂತ್ಯಗೊಳ್ಳುವದಿಲ್ಲ (ವಚನಗಳು 5, 6). ಚಿತ್ರಣವು ಅಕ್ಷರಶಃ ಆಗಿರುವದಿಲ್ಲ: ನಿಜವಾದ ಮಿಡತೆಗಳು ಗಿಡಮರಗಳಿಗೆ ಹಾನಿಯುಂಟು ಮಾಡುತ್ತವೆ, ಆದರೆ ಈ ದುಸ್ವಪ್ನವನ್ನುಂಟು ಮಾಡುವ ಜೀವಿಗಳು ಹಾಗೆ ಮಾಡುವದಿಲ್ಲ (ವ. 4). ಈ ಅಧ್ಯಾಯವು ಒಂದೊಂದು ಸಂಕೇತದ ಕುರಿತು ಚರ್ಚೆಯನ್ನು ಮಾಡುವ ವೇಳೆ ಈ ಯೋಚನೆಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಿರಿ. ಕುಂಚದ ಗುರುತುಗಳನ್ನು ಪರೀಕ್ಷಿಸುತ್ತಿರುವ ವೇಳೆ ಒಟ್ಟಾರೆ ಚಿತ್ರಣದ ಮೇಲಿಂದ ದೃಷ್ಟಿಯನ್ನು ಕಳೆದುಕೊಳ್ಳದಿರಿ.

**ವಚನ 1.** ಒಂಭತ್ತನೆಯ ಅಧ್ಯಾಯವು ಐದನೆಯ ತುತೂರಿಯು ಊದಲ್ಪಡುವ ಮೂಲಕ ಆರಂಭಗೊಳ್ಳುತ್ತದೆ: **ಐದನೆಯ ದೇವದೂತನು ತುತೂರಿಯನ್ನೂದಿದಾಗ ಆಕಾಶದಿಂದ ಭೂಮಿಗೆ ಬಿದ್ದ ಒಂದು ನಕ್ಷತ್ರವನ್ನು ಕಂಡೆನು. ಅವನಿಗೆ ಅಧೋಲೋಕಕ್ಕೆ ಹೋಗುವ ಕೂಪದ ಬೀಗದಕ್ಕೈ ಕೊಡಲ್ಪಟ್ಟಿತು.** ಮುಂಚಿನ ಅಧ್ಯಾಯದಲ್ಲಿ, ಆಕಾಶದಿಂದ ಬಿದ್ದ ನಕ್ಷತ್ರವು (8:10) ಬಹುಶಃ ಕೇವಲ ಒಂದು ಕರಗಿದ ಪುಂಜ ಆಗಿತ್ತು. ಹೇಗೂ, ಈ ವಚನದಲ್ಲಿರುವ ನಕ್ಷತ್ರವು ಒಂದು ವ್ಯಕ್ತಿಯಾಗಿತ್ತೆಂದು ಸ್ಪಷ್ಟವಾಗುತ್ತದೆ, ಯಾಕೆಂದರೆ ಅವನಿಗೆ ಒಂದು ಬೀಗದಕ್ಕೈ ಕೊಡಲ್ಪಟ್ಟಿತು. ಪ್ರಕಟನೆ ಪುಸ್ತಕದಲ್ಲಿನ ಮೊದಲನೆಯ ದರ್ಶನದಲ್ಲಿ, ಯೇಸು ಯೋಹಾನನಿಗೆ ತನ್ನ ಕೈಯಲ್ಲಿರುವ ಏಳು ನಕ್ಷತ್ರಗಳು "ಏಳು ಸಭೆಗಳ ದೂತರು" (1:20) ಎಂದು ಹೇಳಿದನು. ಒಬ್ಬನು 9ನೇ ಅಧ್ಯಾಯದಲ್ಲಿನ ಈ ನಕ್ಷತ್ರವನ್ನು ಒಬ್ಬ ದೇವದೂತನಾಗಿದ್ದನೆಂದು ಸಹ ಭಾವಿಸಿಕೊಳ್ಳಬಹುದಾಗಿದೆ.

ಈ ನಕ್ಷತ್ರ/ದೇವದೂತನು ಹಾಗೂ 11ನೇ ವಚನದಲ್ಲಿರುವ "ಅಧೋಲೋಕದ ಅಧಿಕಾರಿಯಾದ ದೂತನು" ಒಂದೇ ಆಗಿದ್ದಾರೋ? ಸಾಧ್ಯವಿರುತ್ತದೆ. ಪ್ರಕಟನೆ 9ರಲ್ಲಿನ ನಕ್ಷತ್ರ ಮತ್ತು ದೇವದೂತ ಹಾಗೂ 20ನೇ ಅಧ್ಯಾದಲ್ಲಿರುವ ಅದೋಲೋಕದ ಬೀಗದಕ್ಕೈ ಹೊಂದಿರುವ ದೇವದೂತನ ನಡುವೆ ಸಹ ಕೆಲವೊಂದು ಸಂಬಂಧಗಳು ಇರಬಹುದಾಗಿದೆ (20:1ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಹೇಗೂ, 1ನೇ ವಚನದಲ್ಲಿನ ದೇವದೂತನು ಹಾಗೂ ಪ್ರಕಟನೆ ಪುಸ್ತಕದಲ್ಲಿ ಬೇರೆ ಬೇರೆ ಕೆಲಸಗಳನ್ನು ವಹಿಸಲಾದ ದೇವದೂತರ ನಡುವೆ ಯಾವದೇ ವ್ಯತ್ಯಾಸವು ಇಲ್ಲದಿರುವ ಸಾಧ್ಯತೆಯು ಅಧಿಕವಾಗಿರುತ್ತದೆ.

"ಆದರೆ ಈತನು *ಬಿದ್ದ* ದೇವದೂತನಾಗಿದ್ದನು, ಆದ್ದರಿಂದ ಆತನು ಸೈತಾನನು ಅಥವಾ ಅವನ ದೂತರಲ್ಲೊಬ್ಬನು ಆಗಿರ*ತಕ್ಕದ್ದು*" ಎಂದು ಒಬ್ಬರು ಆಕ್ಷೇಪಣೆ ಎತ್ತಬಹುದು. ಪ್ರಕಟನೆ 12:9ನೇ ವಚನವು ಸೈತಾನನ ದೂತರ ಕುರಿತಾಗಿ ಮಾತಾಡುತ್ತದೆ ಎಂಬುದು ಸತ್ಯವೇ ಆಗಿದೆ. ಎರಡನೆಯ ಪೇತ್ರ 2:4ನೇ ವಚನವು ಪಾಪ ಮಾಡಿದ ದೇವದೂತರ ಕುರಿತು ತಿಳಿಸುತ್ತದೆ, ಮತ್ತು ಪ್ರೇರಿತವಲ್ಲದ ಬರಹಗಳು 2 ಪೇತ್ರ 2:4ರಲ್ಲಿನ ದೇವದೂತರು ದೇವರ ವಿರುದ್ಧ ಬಂಡಾಯವೇಳುವಂತೆ ಸೈತಾನನಿಂದ ನಡಿಸಲ್ಪಟ್ಟರು ಎಂದು ಹೇಳುತ್ತದೆ. ಹೇಗೂ, ಈತನು "ಒಬ್ಬ ಬಿದ್ದುಹೋದ ದೇವದೂತನು" ಎಂಬುದಾಗಿ ಪ್ರಕಟನೆ 9:1 ಹೇಳುವದಿಲ್ಲ. ಇಲ್ಲಿ ಚಿತ್ರಣವು ಒಂದು *ನಕ್ಷತ್ರ* ಬೀಳುವದರ ಕುರಿತಾಗಿರುತ್ತದೆ. ನಕ್ಷತ್ರಗಳು ಭೂಮಿಯನ್ನು ತಲುಪುವ ಕುರಿತು ಬಣ್ಣಿಸುವ ಸಹಜವಾದ ರೀತಿಯು ಅದಾಗಿರುತ್ತದೆ (6:13; 8:10). ಒಬ್ಬನು 9:1ನ್ನು ಓದುವಾಗ, ಆತನು ಬಹುಶಃ ಕೇವಲ ಒಂದು ಉರಿಯುತ್ತಿರುವ ಆಕಾರವು ಆಕಾಶದಿಂದ ರಭಸವಾಗಿ ಬೀಳುತ್ತಿರುವದನ್ನು ಯೋಚಿಸತಕ್ಕದ್ದು. ಕಣ್ಣು ಕುಕ್ಕುವಂಥ ಬೆಳಕು ಮಂದವಾದಂತೆ, ಒಬ್ಬ ದೇವದೂತನಂಥ ಜೀವಿಯು ಭೂಮಿಯ ಮೇಲೆ ನಿಂತುಕೊಂಡಿರುತ್ತಾನೆ.

**ಅಧೋಲೋಕಕ್ಕೆ ಹೋಗುವ ಕೂಪದ ಬೀಗದಕ್ಕೈ** ನಕ್ಷತ್ರ/ದೇವದೂತನಿಗೆ ಕೊಡಲ್ಪಟ್ಟಿತು.

KJVಯೊಳಗೆ 9:1, 2, ಮತ್ತು 11ರಲ್ಲಿ "ಅಧೋಲೋಕ" (ತಳವಿಲ್ಲದ ತಗ್ಗು) ಎಂದು ಇರುತ್ತದೆ, NASBಯು ಬಹುಶಃ ಆ ಪದಗುಚ್ಛವು ಪರಿಚಿತವಾಗಿರುವದರಿಂದ ಮತ್ತು ಅದು ವರ್ಣನಾತ್ಮಕತೆಯಿಂದ ಕೂಡಿರುವದರಿಂದ, ಆ ಪದವನ್ನೇ ಉಳಿಸಿಕೊಂಡಿರುತ್ತದೆ. "ಅಧೋಲೋಕದ ಕೂಪ" ಎಂಬ ಪದಗಳು ವಿಲಕ್ಷಣಗುಣದ ನಿಗೂಢತೆಯನ್ನು ಹೊಂದಿದ್ದು ಉಳಿದ ವಾಕ್ಯಭಾಗದಲ್ಲೆಲ್ಲಾ ಚೆನ್ನಾಗಿ ಹೊಂದಿಕೆಯಾಗುತ್ತದೆ. ಹೇಗೂ, τοῦ φρέατος τῆς ἀβύσσου (*tou phreatos tēs abussou*) ಎಂಬ ಗ್ರೀಕ್ ಪದಗುಚ್ಛದ ಉತ್ತಮವಾದ ಅನುವಾದವು ಎಂದರೆ "ಅಧೋಲೋಕದ ಸುರಂಗದ್ವಾರ" ಎಂಬುದಾಗಿರುತ್ತದೆ. 11ನೇ ವಚನದಲ್ಲಿ, NASBಯು "ಅಧೋಲೋಕ" ಎಂದು ಹೇಳುತ್ತದೆ. ಇಲ್ಲಿ ಚಿತ್ರಣವು "ಅಧೋಲೋಕ" ಎಂದು ಕರೆಯಲ್ಪಡುವ ಭೂಮಿ ಕೆಳಗಿನ ಗುಹೆಯಾಗಿದ್ದು, ಅದರ ಸುರಂಗದ್ವಾರವು ಮೇಲ್ಭಾಗದ ತನಕ ಕಾಣಿಸುವದು ಎಂದಾಗಿರುತ್ತದೆ. ಸುರಂಗದ್ವಾರದ ಮೇಲ್ಭಾಗವು ಮುಚ್ಚಲ್ಪಟ್ಟಿದೆ ಮತ್ತು ಬೀಗ ಹಾಕಲ್ಪಟ್ಟಿದೆ, ಹಾಗೂ ಅಧೋಲೋಕದ ನಿವಾಸಿಗಳು ಬಿಡುಗಡೆಗೊಳಿಸಲ್ಪಡುವ ಹಾಗೆ ಆ ಸುರಂಗದ್ವಾರದ ಬೀಗದಕೈ ನಕ್ಷತ್ರ/ದೇವದೂತನಿಗೆ ಕೊಡಲ್ಪಡುತ್ತದೆ.

"ಅಧೋಲೋಕ" (Abyss) ಎಂಬುದು ಗ್ರೀಕ್ ಭಾಷೆಯ ἄβυσσος (*abussos*) ಎಂಬ ಪದದ ಲಿಪ್ಯಂತರಣವಾಗಿರುತ್ತದೆ. ಈ ಪದವು ಮುಖ್ಯವಾಗಿ ಸೆಪ್ಟುಜಿಯಂಟ್ (ಗ್ರೀಕ್ ಹಳೆಯ ಒಡಂಬಡಿಕೆ) ಯೊಳಗೆ ಸಮುದ್ರದ ಆಳಗಳನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿದೆ (ನೋಡಿರಿ ಕೀರ್ತನೆ 71:20). ಸೆಪ್ಟುಜಿಯಂಟ್ ತರ್ಜುಮೆಯು תְּהוֹם (*tehōm*) ಎಂಬ ಇಬ್ರಿಯ ಪದವನ್ನು "ಅಧೋಲೋಕ" ಎಂದು ಅನುವಾದಿಸಿರುತ್ತದೆ. ನಮ್ಮ ಆಂಗ್ಲ ಬೈಬಲ್‌ಗಳ ಹಳೆಯ ಒಡಂಬಡಿಕೆಯಲ್ಲಿ, *tehōm* ಎಂಬ ಪದವು ಸಾಮಾನ್ಯವಾಗಿ "ಆಳ" ಅಥವಾ "ತಟ್ಟತಳ" ಎಂದು ಅನುವಾದಿಸಲ್ಪಟ್ಟಿರುತ್ತದೆ. ಹೊಸ ಒಡಂಬಡಿಕೆಯಲ್ಲಿ, ಪೌಲನು ಪಾತಾಳಲೋಕದ ಕುರಿತು ಮಾತಾಡುವದಕ್ಕೆ "ಅಧೋಲೋಕ" ಎಂಬುದನ್ನು ಬಳಸುತ್ತಾನೆ (ರೋಮಾ 10:7). ಲೂಕ 8:31ರಲ್ಲಿ, "ಅಧೋಲೋಕ" ಎಂಬ ಪದವು ದುಷ್ಟ ಆತ್ಮಗಳು ನ್ಯಾಯತೀರ್ಪಿಗಾಗಿ ಕಾಯುತ್ತಿರುವ ವೇಳೆ ಬಂಧಿಸಲ್ಪಡುವ ಪಾತಾಳ ಲೋಕದ ಒಂದು ನಿರ್ದಿಷ್ಟವಾದ ಭಾಗವನ್ನು ಸೂಚಿಸುತ್ತದೆ (ನೋಡಿರಿ ಲೂಕ 16:22, 23; 2 ಪೇತ್ರ 2:4). ಸ್ಪಷ್ಟವಾಗಿ ತೋರುವ ಪ್ರಕಾರ, ಪ್ರಕಟನೆ ಪುಸ್ತಕದಲ್ಲಿ, "ಅಧೋಲೋಕ" ಆ ಕಡೆಯದಾಗಿ ಹೇಳಲ್ಪಟ್ಟ ಅರ್ಥದಲ್ಲಿ ಬಳಸಲ್ಪಟ್ಟಿರುತ್ತದೆ (1:18ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ): ಸಮುದ್ರದಿಂದ ಬಂದ ಮೃಗವು (13:1) ಅನಂತರದಲ್ಲಿ "ಅಧೋಲೋಕದೊಳಗಿಂದ ಬರುವ ಮೃಗ" ಎಂದು ಕರೆಯಲ್ಪಡುತ್ತದೆ (11:7; ನೋಡಿರಿ 7:8). ಕೆಂಪು ಬಣ್ಣದ ಮಹಾ ಘಟಸರ್ಪವು ಸಾವಿರ ವರ್ಷಗಳ ತನಕ ಬಂಧಿಸಡಲ್ಪಡುವಾಗ, ಅದನ್ನು ಅಧೋಲೋಕದಲ್ಲಿ ದೊಬ್ಬಿ ಮುಚ್ಚಿ ಅದಕ್ಕೆ ಮುದ್ರೆಹಾಕಲಾಗುತ್ತದೆ (20:1-3).

ಪ್ರಕಟನೆ ಪುಸ್ತಕದಲ್ಲಿನ ಅಧೋಲೋಕವು ಈ ದಿನದಲ್ಲಿರುವ ದುರಾತ್ಮಗಳ ನಿವಾಸಕ್ಕೆ *ಸಂಕೇತ* ಆಗಿರುತ್ತದೆ. ಅದು "ಪಿಶಾಚನಿಗೂ ಅವನ ದೂತರಿಗೂ ಸಿದ್ಧಮಾಡಿರುವ ನಿತ್ಯ ಬೆಂಕಿ" ಯ ಮಂಡಲ ಆಗಿರು*ವದಿಲ್ಲ* (ಮತ್ತಾಯ 25:41). ಇದು "ಅಗ್ನಿಗಂಧಕಗಳಿರುವ ಬೆಂಕಿಯ ಕೆರೆ" ಆಗಿರುವದಿಲ್ಲ (ಪ್ರಕಟನೆ 20:10; ನೋಡಿರಿ 20:14, 15; 21:8). ಇದು ದುಷ್ಟರ ನಿತ್ಯವಾದ ನಿವಾಸವು ಅಲ್ಲ.

ನಾವು ತಡಮಾಡದೆ ಇದಕ್ಕೆ ಸೇರ್ಪಡೆಗೊಳಿಸುವದೇನೆಂದರೆ ಪ್ರಕಟನೆ ಪುಸ್ತಕದಲ್ಲಿ ಉಲ್ಲೇಖವಾಗಿರುವ ಅಧೋಲೋಕ ಎಂಬುದು ಅವಿಧೇಯ ಆತ್ಮಗಳು ಭೂಗರ್ಭದೊಳಗೆ

ಎಲ್ಲೋ ಒಂದು ಕಡೆಯಲ್ಲಿ ಅಕ್ಷರಶಃ ಬಂಧಿಸಿಡಲ್ಪಟ್ಟಿರುತ್ತವೆ ಎಂದು ಅಥವಾ ಪೈಶಾಚಿಕ ಜೀವಿಗಳು ಪಾತಾಳ ಲೋಕದಿಂದ ಬರುವದಕ್ಕೆ ಮತ್ತು ತಿರಿಗಿ ಹೋಗುವದಕ್ಕೆ ಅನುಮತಿಸಲ್ಪಡುತ್ತವೆ ಎಂದು ಸೂಚಿಸುವದಿಲ್ಲ. ಇಲ್ಲಿ ಚಿತ್ರಣವು *ಸಾಂಕೇತಿಕ*ವಾಗಿರುತ್ತದೆ. ಪಾಪದ ಭಯಂಕರ ಸ್ವಭಾವ ಹಾಗೂ ವ್ಯಾಪಕವಾಗಿ ತಟ್ಟುವ ಪರಿಣಾಮವನ್ನು ತಿಳಿಯಪಡಿಸುವದಕ್ಕಾಗಿ, ಪವಿತ್ರಾತ್ಮನು ವಾಚಕರನ್ನು ಭೂಮಿಯ ಕೆಳಗಿನ ಗುಹೆಯಲ್ಲಿ ದುಸ್ವಪ್ನಕರವಾದ ಜೀವಿಗಳು ಹಿಂಡುಹಿಂಡಾಗಿ ಓಡಾಡುತ್ತಿರುತ್ತವೆ ಎಂದು ಊಹಿಸಿಕೊಳ್ಳುವಂತೆ - ಮತ್ತು ಬಳಿಕ ಅಂತಹ ಜೀವಿಗಳನ್ನು ಭೂಮಿಯ ಮೇಲೆ ಮುಕ್ತವಾಗಿ ಬಿಚ್ಚಿ ಬಿಡುವದಾದರೆ ಹೇಗಿರುತ್ತದೆಂಬುದನ್ನು ಊಹಿಸಿಕೊಳ್ಳುವಂತೆ ಕರೆ ಕೊಡುತ್ತಾನೆ.

**ವಚನ 2.** ದೇವದೂತನು **ಅಧೋಲೋಕದ ಕೂಪವನ್ನು ತೆರೆಯಲು ಕೂಪದಿಂದ ಬಂದ ಹೊಗೆ ದೊಡ್ಡ ಕುಲುಮೆಯ ಹೊಗೆಯಂತೆ ಏರಿತು; ಕೂಪದ ಹೊಗೆಯಿಂದ ಸೂರ್ಯನೂ ಆಕಾಶವೂ ಕತ್ತಲಾದವು.**

ಏಳು ಪಾತ್ರೆಗಳನ್ನು ಸ್ವಲ್ಪ ಮುಂದಾಗಿ ಗಮನಿಸುವದಾದರೆ, ಐದನೆಯ ಪಾತ್ರೆಯು ಸುರಿಯಲ್ಪಟ್ಟಾಗ, ಮೃಗದ ರಾಜ್ಯವು "ಕತ್ತಲಾಯಿತು" (16:10). ಐದನೆಯ ತುತೂರಿ ಹಾಗೂ ಐದನೆಯ ಪಾತ್ರೆ ನಡುವಿರುವ ಸಾಮ್ಯತೆಯೆಂದರೆ ಅದು ಕತ್ತಲೆ - ಇದು ಕತ್ತಲೆಗೆ ಕೇವಲ ನಾಟಕೀಯ ಪರಿಣಾಮ ಒದಗಿಸುವದಕ್ಕಿಂತಲೂ ಹೆಚ್ಚಾಗಿರುವ ಒಂದು ಮಹತ್ವವಿರುತ್ತದೆ ಎಂಬುದನ್ನು ಸೂಚಿಸುತ್ತದೆ. ಹೊಗೆಯು ಪಾಪದಿಂದ ಉಂಟು ಮಾಡಲ್ಪಡುವ ಹೃದಯದ ಕತ್ತಲೆಗೆ ಸಂಕೇತವಾಗಿರುತ್ತದೆಂಬುದನ್ನು ವ್ಯಾಖ್ಯಾನಕಾರರು ವ್ಯಾಪಕವಾಗಿ ಸಹಮತವನ್ನು ವ್ಯಕ್ತಪಡಿಸುತ್ತಾರೆ (ನೋಡಿರಿ 2 ಕೊರಿಂಥ 4:4; ಕೊಲೊಸ್ಸೆ 1:13):

> ವಂಚನೆ ಮತ್ತು ಭ್ರಮೆ ಹೊಗೆ, ಪಾಪ ಮತ್ತು ದುಃಖದ ಹೊಗೆ, ನೈತಿಕ ಕತ್ತಲೆ ಹಾಗೂ ಭ್ರಮೆ ಆಗಿರುತ್ತದೆ . . .[5]

> . . . ಬಹುಶಃ ಹೊಗೆಯನ್ನು ಸೈತಾನನ ದುಷ್ಟ ಹೊಗೆಯಾಗಿದ್ದು ಮನುಷ್ಯನ ಬುದ್ಧಿಯನ್ನು ಕತ್ತಲುಗೊಳಿಸುವಂಥದ್ದೆಂದು ಪರಿಗಣಿಸಿದರೆ ಉತ್ತಮವಾಗಿರುತ್ತದೆ . . .[6]

**ವಚನ 3.** ಕೂಪದೊಳಗಿಂದ ಹೊಗೆಯು ಕತ್ತಲೆಯ ಮೇಘಗಳನ್ನು ಹೊರ ಹಾಕುತ್ತಿರುವಂತೆ, ಆ ಮೊಬ್ಬಿನೊಳಗಿಂದ ಏನು ಹೊರ ಹೊಮ್ಮುವದೋ ಎಂದು ವಾಚಕನು ಚಕಿತನಾಗುತ್ತಾನೆ. **ಹೊಗೆಯೊಳಗಿಂದ ಮಿಡಿತೆಗಳು ಭೂಮಿಯ ಮೇಲೆ ಹೊರಟುಬಂದವು.** ಯಾರಾದರೊಬ್ಬರು "ಇದೇನು, ಇಷ್ಟೇನಾ! ಬರೀ ಒಂದಿಷ್ಟು ಕ್ರೀಮಿಗಳು ಮಾತ್ರವೋ!" ಎನ್ನಬೇಕೆಂದು ಒಲವು ತೋರಬಹುದು. ಹೇಗೂ, ಅರ್ಥಮಾಡಿಕೊಳ್ಳಬೇಕಾದದ್ದೇನೆಂದರೆ, ಪ್ರಾಚೀನ ಜಗತ್ತಿನಲ್ಲಿ "ಮಿಡತೆಗಳು ಬರುತ್ತಿವೆ!" ಎಂದು ಎಚ್ಚರಿಸುವದಕ್ಕಿಂತಲೂ ಅಧಿಕವಾದ ನಡುಕ ಹುಟ್ಟಿಸುವ ಘೋಷಣೆಯು ಮತ್ತೊಂದು ಇರಲಿಲ್ಲ. ಹಳೆಯ ಒಡಂಬಡಿಕೆಯುದ್ದಕ್ಕೂ, ಮಿಡತೆಗಳು ನಾಶನದ ಸಂಕೇತವಾಗಿರುತ್ತವೆ (ನೋಡಿರಿ ಧರ್ಮೋಪದೇಶಕಾಂಡ 28:42; KJV; 1 ಅರಸು 8:37; ಕೀರ್ತನೆ 78:46).

ಬೈಬಲಿನಲ್ಲಿರುವ ಪ್ರಸ್ತಾಪಿಸಲ್ಪಟ್ಟಿರುವ ಸಣ್ಣದಾದ ಸ್ಪರ್ಶತಂತುಗಳನ್ನು ಹೊಂದಿರುವ ಮಿಡತೆಗಳು ಮರುಭೂಮಿಯಲ್ಲಿ ಸಂತಾನವೃದ್ಧಿಯಾಗುತ್ತಿದ್ದವು, ಮತ್ತು, ಕೆಲವೊಂದು ಪರಿಸ್ಥಿತಿಗಳಡಿಯಲ್ಲಿ ಆಹಾರವನ್ನು ಹುಡುಕುತ್ತಾ ಹಸಿರು ಪರಿಸರ, ಕೃಷಿ ಮಾಡಲ್ಪಟ್ಟ ಹೊಲಗಳ ಮೇಲೆ ಮೇಲೆ ದಾಳಿ ಮಾಡುತ್ತಿದ್ದವು. ಅವುಗಳು ನೂರು ಅಡಿಗಳಷ್ಟು ಅಗಲ ಹಾಗೂ ಸುಮಾರು ನಾಲ್ಕು ಮೈಲುಗಳಷ್ಟು ಉದ್ದವಾಗಿರುತ್ತಿದ್ದ ದಂಡುಗಳಾಗಿ

ಪ್ರಯಾಣಿಸುತ್ತಿದ್ದು. ಮಿಡತೆಗಳು ಬಹು ದಟ್ಟವಾಗಿ ಮೇಘಗಳಲ್ಲಿ ಹಾರುತ್ತಿದ್ದರಿಂದ ಅವುಗಳು ಸೂರ್ಯನ ಬೆಳಕಿಗೆ ತಡೆಯನ್ನುಂಟು ಮಾಡುತ್ತಿದ್ದವು. ಅವುಗಳು ಭೂಮಿಯ ಮೇಲೆ ಇಳಿದುಕೊಳ್ಳುವಾಗ, ಅವುಗಳು ಭೂಮಿಯನ್ನು ತೆವಳುವ ಹಾಸಿಗೆಯಂತೆ ಆವರಿಸಿಕೊಂಡು ದಾರಿಯಲ್ಲಿ ಸಿಕ್ಕುವ ಗಿಡಮರಗಳನ್ನೆಲ್ಲಾ ತಿಂದು ಹಾಕುತ್ತಿದ್ದವು. ಅವುಗಳು ಮರದ ತೊಗಟೆಗಳನ್ನು, ಹೊಲಗಳಲ್ಲಿನ ಪೈರುಗಳನ್ನು, ಮತ್ತು ಬಟ್ಟೆ ಹಾಗೂ ಹಗ್ಗಗಳನ್ನು ಸಹ ತಿಂದು ಹಾಕುತ್ತಿದ್ದವು. ಅವುಗಳ ಹಸಿವು ತಣಿಸಲಿಕ್ಕೆ ಸಾಧ್ಯವಿಲ್ಲದ್ದು. ಅವುಗಳು ಯಾವದಾದರೂ ದೇಶದ ಮೇಲೆ ಲಗ್ಗೆಯಿಡುವದಾದರೆ, ಅದು ಶೀಘ್ರದಲ್ಲಿಯೇ ತನ್ನೆಲ್ಲಾ ಹಸುರನ್ನು ಕಳಕೊಳ್ಳುತ್ತಿತ್ತು.[7]

6ನೇ ವಚನದ ಮಿಡತೆಗಳು ಐಗುಪ್ತ ದೇಶದ ಮೇಲೆ ಬಂದ ಎಂಟನೆಯ ಉಪದ್ರವವನ್ನು ಜ್ಞಾಪಿಸುವದಾಗಿದೆ (ವಿಮೋಚನಕಾಂಡ 10:12-15). ಪ್ರಕಟನೆ 9ಕ್ಕೆ ಇನ್ನಷ್ಟು ಸಮನಾರ್ಥವುಳ್ಳ ಭಾಗವನ್ನು ಯೋವೇಲನ ಪುಸ್ತಕ, 1ನೇ ಮತ್ತು 2ನೇ ಅಧ್ಯಾಯಗಳಲ್ಲಿ ಕಾಣಬಹುದಾಗಿದೆ. ಬೈಬಲಿನಲ್ಲಿರುವ ಅಷ್ಟೊಂದು ಭಯಾನಕವಾದ ನೈಸರ್ಗಿಕ ಮಿಡತೆಗಳಂತೆಯೇ, ಪ್ರಕಟನೆ 9ರಲ್ಲಿನ ಮಿಡತೆಗಳು ಇನ್ನು ಹೆಚ್ಚು ಭಯ ಹುಟ್ಟಿಸುವಂಥವುಗಳಾಗಿವೆ. **ಭೂಮಿಯಲ್ಲಿರುವ ಚೇಳುಗಳಿಗೆ ಸಾಮರ್ಥ್ಯವಿರುವ ಪ್ರಕಾರ ಅವುಗಳಿಗೆ ಸಾಮರ್ಥ್ಯಕೊಡಲ್ಪಟ್ಟಿತು.** 10ನೇ ವಚನವು ಅವುಗಳಿಗೆ "ಚೇಳಿಗಿರುವಂತೆ ಬಾಲಗಳೂ ಕೊಂಡಿಗಳೂ ಉಂಟು" ಎಂದು ಬಣ್ಣಿಸುತ್ತದೆ.

**ವಚನ 4.** ಇವುಗಳು ಸಾಮಾನ್ಯವಾದ ಮಿಡತೆಗಳಾಗಿರಲಿಲ್ಲ: **ಭೂಮಿಯ ಮೇಲಿರುವ ಹುಲ್ಲನ್ನಾಗಲಿ ಪಲ್ಯವನ್ನಾಗಲಿ ಮರವನ್ನಾಗಲಿ ಕೆಡಿಸದೆ . . . ಅಪ್ಪಣೆಯಾಯಿತು.** ಆ ಆಜ್ಞೆಯನ್ನು ವಾಸ್ತವಿಕದಲ್ಲಿ ಅವುಗಳಿಗೆ ಯಾರು ಕೊಟ್ಟರೆಂಬುದನ್ನು ವಾಕ್ಯವು ತಿಳಿಸುವದಿಲ್ಲ, ಆದರೆ ಅದು ದೇವರಿಂದಲೇ ಬಂದಿತೆಂಬುದನ್ನು ವಾಚಕನು ಅರ್ಥಮಾಡಿಕೊಳ್ಳಬಹುದಾಗಿದೆ. ಹಸುರು ಮರಗಿಡಗಳು ಮಿಡತೆಗಳಿಗೆ ತಿಂಡಿಯಾಗಿತ್ತಾದರೂ, ಕರ್ತನು ಎಲೆಗಳನ್ನು ಅವುಗಳ ಆಹಾರ ಪಟ್ಟಿಯಿಂದ ತೆಗೆದು ಬಿಡುತ್ತಾನೆ. ಬದಲಾಗಿ, ಮನುಷ್ಯರನ್ನು ಗುರಿಯಾಗಿಟ್ಟುಕೊಳ್ಳುವಂತೆ ಅವುಗಳಿಗೆ ಹೇಳಲಾಯಿತು. ಹೇಗೂ, ಅವುಗಳು ಸಿಕ್ಕ ಸಿಕ್ಕ ಮನುಷ್ಯರ ಮೇಲೆ ಇಳಿಯಲಿಲ್ಲ; ಅವುಗಳು **ಹಣೆಯ ಮೇಲೆ ದೇವರ ಮುದ್ರೆಯಿಲ್ಲದವರಾದ ಮನುಷ್ಯರನ್ನು ಮಾತ್ರವೇ** ಹಾನಿ ಪಡಿಸಬೇಕಾಗಿತ್ತು.

144,000 ಮಂದಿಯನ್ನು 7ನೇ ಅಧ್ಯಾಯದಲ್ಲಿ ಮುದ್ರೆ ಹಾಕುವದರ ಪ್ರಾಥಮಿಕ ಉದ್ದೇಶವು ದೇವರ ಜನರನ್ನು ಸುರಕ್ಷಿತವಾಗಿ ಕಾಪಾಡುವದೇ ಆಗಿತ್ತು (7:4ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಪ್ರಕಟನೆ 9:4ನೇ ವಚನವು ಆ ಸುರಕ್ಷತೆಗೆ ಒಂದು ಉದಾಹರಣೆಯನ್ನು ಕೊಡುತ್ತದೆ. ಮಿಡತೆಗಳು ಅವಿಧೇಯಿಂದಾಗುವ ಪರಿಣಾಮಗಳನ್ನು ಪ್ರತಿನಿಧಿಸುತ್ತವಾದ್ದರಿಂದ, ವಿಧೇಯತೆಯುಳ್ಳವರು ಆ ಪರಿಣಾಮಗಳಿಂದ ತಪ್ಪಿಸಲ್ಪಟ್ಟಿರುತ್ತಾರೆ.

**ವಚನ 5.** ಮುದ್ರೆ ಹಾಕಲ್ಪಡದೆ ಇರುವವರಿಗೆ ಎಷ್ಟರ ಮಟ್ಟಿಗೆ "ಕೇಡು" ಮಾಡಬೇಕೆಂಬುದನ್ನು ಮುಂದಿನ ವಚನಗಳಲ್ಲಿ ತಿಳಿಸಲಾಗಿರುತ್ತದೆ. **ಮಿಡತೆಗಳಿಗೆ ಇವರನ್ನು ಕೊಲ್ಲದೆ ಐದು ತಿಂಗಳುಗಳ ವರೆಗೂ ಪೀಡಿಸುವದಕ್ಕೆ ಅಪ್ಪಣೆಯಾಯಿತು** (ನೋಡಿರಿ ವ. 10). ತರುವಾಯ, ಮನುಷ್ಯರಲ್ಲಿ ಒಂದು ಭಾಗದಷ್ಟು ಜನರು *ಕೊಲ್ಲಲ್ಪಡಲಿದ್ದರು* (ನೋಡಿರಿ ವ. 18); ಆದರೆ ಐದನೆಯ ತುತೂರಿಯ ಕಾಲದ ವರೆಗೂ ಭಕ್ತಿಹೀನರು ಕೊಲ್ಲಲ್ಪಡಲಿಲ್ಲ. ಬದಲಾಗಿ, ಅವರು ಐದು ತಿಂಗಳುಗಳ ವರೆಗೂ *ಪೀಡಿಸಲ್ಪಟ್ಟರು.*

"ಐದು" ಸಂಖ್ಯೆಯು ಮಿತಿಯಾದ ಬಲ ಅಥವಾ ಕಾಲಾವಧಿಯನ್ನು ಸೂಚಿಸುತ್ತದೆ. ಕೆಲವು ಲೇಖಕರು ಮಿಡತೆಗಳಲ್ಲಿನ ಕೆಲವೊಂದು ಜಾತಿಗಳಿಗೆ ಐದು ತಿಂಗಳುಗಳ ಜೀವನ

ಚಕ್ರವಿರುತ್ತಿತ್ತು, ಮತ್ತು ಮಿಡತೆಗಳ ಉಪದ್ರವಗಳು ಪ್ರತಿ ವರ್ಷ ಐದು ತಿಂಗಳ ಕಾಲ ಸಂಭವಿಸುತ್ತಿದ್ದವು ಎಂಬುದನ್ನು ಗಮನಕ್ಕೆ ತರುತ್ತಾರೆ. ಈ ವಾಕ್ಯಭಾಗದಲ್ಲಿ **ಐದು ತಿಂಗಳ ವರೆಗೂ** ಎಂಬ ಪದಗುಚ್ಛವು ಬಹುಶಃ ಆ ಮಿಡತೆಗಳ ಕ್ರಿಯೆಯನ್ನು ದೇವರು *ಮಿತಿಗೊಳಿಸಿದ್ದ*ನೆಂಬ ವಾಸ್ತವಾಂಶವನ್ನು ಪುನರ್ದೃಢೀಕರಿಸುತ್ತದೆ - ಆತನು ಹಾಗೆ ಮಾಡದೆ ಇದ್ದರೆ ಕ್ರೈಸ್ತೇತರರೊಳಗೆ ಪ್ರತಿಯೊಬ್ಬನೂ ಸತ್ತಿರುತ್ತಿದ್ದನು ಎಂಬುದು ಇದರಿಂದ ಸೂಚಿಸಲ್ಪಡುತ್ತದೆ. ಕೆಲವರು ಪಶ್ಚಾತ್ತಾಪ ಪಡುವದಕ್ಕೆ ಜನರಿಗೆ ಇರುವ - ದೇವರ ತಾಳ್ಮೆಯು ಮುಗಿದು ಹೋಗುವ ಮುನ್ನ - ಇರುವಂಥ ಮಿತಿಯಾದ ಸಮಯಾವಕಾಶವನ್ನು ಸೂಚಿಸುತ್ತದೆಂದು ಕಾಣುತ್ತಾರೆ.

ಮಿಡತೆಗಳಿಂದಾಗುವ ಪೀಡಿಸುವಿಕೆಯು **ಚೇಳು ಮನುಷ್ಯನನ್ನು ಹೊಡೆಯುವದರಿಂದುಂಟಾಗುವ ಪೀಡೆಗೆ ಸಮಾನವಾಗಿತ್ತು**. ಚೇಳು ಪ್ರಾಚೀನ ಜಗತ್ತಿನ ಘೋರ ಪೀಡೆಗಳಲ್ಲೊಂದಾಗಿತ್ತು (ನೋಡಿರಿ ಧರ್ಮೋಪದೇಶಕಾಂಡ 8:15; 1 ಅರಸು 12:11; ಯೆಹೆಜ್ಕೇಲ 2:6; ಲೂಕ 10:19; 11:12). ಚೇಳು ಬಂಡೆಗಳ ಕೆಳಗೆ ಮತ್ತು ಬಿರುಕುಗಳಲ್ಲಿ ಅಡಗಿಕೊಳ್ಳುತ್ತವೆ. ಅದರ ಅಡಗು ಸ್ಥಳದಿಂದ, ಆತನು ತನ್ನ ಕೊಂಡಿಗಳನ್ನು ಚಾಚಿ ತನ್ನ ಕಡಿತಕ್ಕೊಳಗಾಗುವವರನ್ನು ಚಲಿಸಲಾಗದಂತೆ ಮಾಡುತ್ತಾನೆ. ಕೊಂಡಿಯ ತುದಿಯನ್ನು ಹೊಂದಿರುವ ಬಾಲದಿಂದ ಮುಂದಕ್ಕೆ ಬೀಸಿ ತನ್ನ ಹಿಡಿತಲ್ಲಿರುವವನೊಳಗೆ ವಿಷವನ್ನು ಕಾರುತ್ತಾನೆ. ಚಿಕ್ಕ ಜೀವಿಗಳು ವಿಷದಿಂದ ಕೊಲ್ಲಲ್ಪಡುತ್ತವೆ ಅಥವಾ ನಿತ್ರಾಣಗೊಳಿಸಲ್ಪಡುತ್ತವೆ. ಕೊಂಡಿಯು ಮನುಷ್ಯರಿಗೆ ಮರಣಾಂತಿಕವಾಗುವದು ವಿರಳವಾಗಿರುತ್ತದೆ, ಕೇವಲ ಹಿರಿಯರು, ಬಹಳ ಚಿಕ್ಕ ವಯಸ್ಸಿನವರಿಗೆ, ಮತ್ತು ಹೃದಯ ಬೇನೆಗಳಿರುವವರಿಗೆ ಮಾತ್ರವೇ ಮರಣಾಂತಿಕವಾಗಿರುತ್ತದೆ, ಆದರೆ ಅತ್ಯಂಥ ವಿಪರೀತವಾಗಿ ನೋವಂತೂ ಎಲ್ಲರಿಗೂ ಇರುತ್ತದೆ.

**ವಚನ 6. ಆ ಕಾಲದಲ್ಲಿ ಮನುಷ್ಯರು ಮರಣವನ್ನು ಬಯಸುವರು, ಆದರೆ ಅದು ಪ್ರಾಪ್ತವಾಗುವದಿಲ್ಲ; ಸಾಯಬೇಕೆಂದು ಕೋರುವರು, ಆದರೆ ಮೃತ್ಯುವು ಅವರ ಬಳಿಯಿಂದ ಓಡಿಹೋಗುವದು** (ನೋಡಿರಿ ಯೋಬನು 3:21; ಯೆರೆಮೀಯ 8:3). ಈ ವ್ಯಕ್ತಿಗಳು ಏಕೆ ಮರಣವನ್ನು ಕಂಡುಕೊಳ್ಳಲಾಗಲಿಲ್ಲ, ಅವರು ಏಕೆ ಆತ್ಮಹತ್ಯೆಯನ್ನು ಮಾಡಿಕೊಳ್ಳಲಿಲ್ಲ ಎಂಬುದು ವ್ಯಾಖ್ಯಾನಕಾರರಿಗೆ ಒಂದು ಬಿಡಿಸಲಾಗದ ಒಗಟು ಆಗಿರುತ್ತದೆ. ಇದೊಂದು ಉತ್ಪ್ರೇಕ್ಷಿತವಾದ, ರೂಪಕ ಭಾಷೆಯಾಗಿರುತ್ತದೆಯೇ, ಹೊರತು ಅಕ್ಷರಶಃ ಅರ್ಥೈಸಿಕೊಳ್ಳಬಾರದು ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಒಂದು ಸಂದರ್ಭದಲ್ಲಿ, ಅನೇಕ ಜನರು ಅನಾರೋಗ್ಯಕ್ಕೀಡಾಗಿ ಮರಣವು ಒಂದು ಉಪಶಮನವಾಗುವದೆಂದು ಭಾವಿಸಿಕೊಂಡಿರುತ್ತಾರೆ; ಆದಾಗ್ಯೂ ಅವರು ಮರಣಿಸಿರುವದಿಲ್ಲ, ಆದರೆ ವೇದನೆಯನ್ನು ಅನುಭವಿಸಿರುತ್ತಾರೆ. 6ನೇ ವಚನವು ಅದನ್ನೇ ಹೇಳುತ್ತಿದೆ. ಭಕ್ತಿಹೀನರು ಪಶ್ಚಾತ್ತಾಪವಿಲ್ಲದ ಸ್ಥಿತಿಯಲ್ಲಿ ಇರುವಷ್ಟು ಕಾಲ ಅವರಿಗೆ ಮನಶ್ಶಾಂತಿಯು ದೊರಕುವದಿಲ್ಲ. ಅಷ್ಟುಮಾತ್ರವಲ್ಲದೆ, ಆತ್ಮೀಕ ಬಾಧೆಯು ಶಾರೀರಿಕ ಮರಣದ ಮೂಲಕವಾಗಿ ಉಪಶಮನಗೊಳ್ಳಲು ಸಾಧ್ಯವಿಲ್ಲ. ಮರಣದ ಬಳಿಕ, ಐಶ್ವರ್ಯವಂತನು "[ಪಾತಾಳ]ದೊಳಗೆ ಯಾತನೆಪಡುತ್ತಾ ಇರುವಲ್ಲಿ ಕಣ್ಣೆತ್ತಿ . . . ನೋಡಿದನು" (ಲೂಕ 16:23). ಕ್ರಿಸ್ತನ ಸೇರದವನಾಗಿ ಒಬ್ಬ ಮನುಷ್ಯನು ಸಾಯುವಾಗ, ಆತನು ಈ ಜೀವಿತದಲ್ಲಿ ಅನುಭವಿಸಿದ ಬಾಧೆಗಿಂತಲೂ ಅಲ್ಲಿನ ಪೀಡೆಯು ಅಪರಿಮಿತವಾಗಿ ಘೋರವಾಗಿರಲಿದೆ.

6ನೇ ವನಚದ ಮುಖ್ಯ ಒತ್ತು ಏನೆಂದರೆ ಪಾಪಿಯು ಯಾವ ಬದಲಾವಣೆಯೂ ಇಲ್ಲದೆ ಈ

ಜೀವಿತದಲ್ಲಿ ನೋವನ್ನು ಅನುಭವಿಸಬೇಕಾಗಿರುತ್ತದೆ - ಆತನು ಪಶ್ಚಾತ್ತಾಪದೊಂದಿಗೆ ದೇವರ ಕಡೆಗೆ ತಿರುಗಿಕೊಳ್ಳುವದನ್ನು ಬಿಟ್ಟರೆ ಆ ಬಾಧೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿರುವದಿಲ್ಲ. ಕೆಲವರಿಗಾದರೋ, ಈ ಬಾಧೆಯೊಳಗೆ ಮನಸ್ಸಾಕ್ಷಿಯ ಕಡುಸಂಕಟವೂ ಸೇರಿರುತ್ತದೆ. ಪೌಲನು ರೋಮಾ 7 ರಲ್ಲಿ ಮನಸ್ಸಾಕ್ಷಿಯ ವೇದನೆಯನ್ನು ವ್ಯಕ್ತಪಡಿಸುತ್ತಾನೆ: "ನನ್ನಲ್ಲಿ . . . ಒಳ್ಳೇದೇನೂ ವಾಸವಾಗಿಲ್ಲ" ಎಂದು ಹೇಳಿದ ಬಳಿಕ, ಆತನು ತನ್ನನ್ನು ಪಾಪಕ್ಕೆ "ಬಂಧಿ" ಆಗಿದ್ದೇನೆಂದು ಘೋಷಿಸಿಕೊಂಡನು, ಮತ್ತು ಅಂತಿಮವಾಗಿ "ಅಯ್ಯೋ, ನಾನು ಎಂಥ ದುರವಸ್ಥೆಯಲ್ಲಿ ಬಿದ್ದ ಮನುಷ್ಯನು! . . . ನನ್ನನ್ನು ಬಿಡಿಸುವವರು ಯಾರು?" ಎಂದು ಗೋಳಾಡುತ್ತಾನೆ (ರೋಮಾ 7:17-24). ಪೌಲನ ಈ ಗೋಳಾಟವು ಸರಿಯಾದದ್ದನ್ನು ಮಾಡುವದರಲ್ಲಿ ವಿಫಲನಾಗುವ ವ್ಯಕ್ತಿಯ ಗೋಳಾಟವಾಗಿದ್ದರೆ, ಇಂದು ಅನೇಕ ಪಾಪಿಗಳು ಸರಿಯಾದದ್ದನ್ನು ಮಾಡುವದಕ್ಕೆ ಪ್ರಯತ್ನವನ್ನು ಮಾಡು*ತ್ತಿಲ್ಲ*. ಹಾಗಿದ್ದರೂ, ಪೌಲನು ವ್ಯಕ್ತಪಡಿಸಿರುವ ಕಡುಸಂಕಟವನ್ನು ಬಹಳಷ್ಟು ಜನರು ಅನುಭವಿಸಿರುತ್ತಾರೆ.

ಒಂದು ಪಾಪಭರಿತ ಜೀವನಶೈಲಿಯನ್ನು ನಡಿಸುವದರಿಂದ ಸ್ವಾಭಾವಿಕವಾದ, ನೋವುಭರಿತ ಪರಿಣಾಮಗಳು ಸಹ ಉಂಟಾಗುತ್ತವೆ. ಪಾಪದಲ್ಲಿ ಅಂತರ್ಗತವಾಗಿರುವ ಪರಿಣಾಮಗಳೊಳಗೆ ನಾವು ಪ್ರೀತಿಸುವವರಿಂದ ಬೇರ್ಪಡುವಿಕೆ, ಮನಸ್ಸು ಹಾಗೂ ದೇಹಗಳು ಹದಗೆಡುವದು, ಜೀವನವು ಕೈ ಮೀರಿ ಹೋಗಿರುತ್ತದೆಂಬ ಹತಾಶೆಯ ಭಾವ, "ಇಷ್ಟೇ, ಇನ್ನೇನೂ ಉಳಿದಿಲ್ಲ" ಎಂಬ ಶೂನ್ಯ ಅನಿಸಿಕೆ, ಹೃದಯವನ್ನು ತುಂಬಿಕೊಳ್ಳುವ ಕಹಿಭಾವನೆ, ವಿವೇಚನೆಯನ್ನು ಆವರಿಸಿಕೊಳ್ಳುವ ಸಂಶಯ, ವಿನಾಶವು ಸಂಭವಿಸುವಾಗ ಆತ್ಮವನ್ನು ಕುಗ್ಗಿಸುವ ಹೆದರಿಕೆ, ಮತ್ತು ಜೀವನವನ್ನು ವ್ಯರ್ಥಮಾಡಿಕೊಂಡದ್ದರ ದುರಂತ ಇತ್ಯಾದಿಗಳು ಸೇರಿರುತ್ತವೆ. Jimmy Allenನು ಹೀಗೆ ಹೇಳಿದನು, "ಈ ಜೀವನದಲ್ಲಿ ಆವು ನಮ್ಮ ಪಾಪಗಳಿಂದ ದಂಡಿಸಲ್ಪಡುವಷ್ಟು ನಮ್ಮ ಪಾಪಗಳಿಗಾಗಿ ದಂಡಿಸಲ್ಪಡುವದಿಲ್ಲ."[8] Leon Morrisನು ಗಮನಕ್ಕೆ ತರುವದೇನೆಂದರೆ, "ದೇವರು ಮಾಡಬೇಕಾದ ಅಗತ್ಯವಿರುವದೆಲ್ಲಾ ಘಟನೆಗಳು ತಮ್ಮ ಗತಿಯಲ್ಲಿಯೇ ಸಂಭವಿಸುವಂತೆ ಬಿಡುವದಷ್ಟೆ ಮತ್ತು ಪಾಪಿಗಳು ತಪ್ಪದೆ ದಂಡನೆಯನ್ನು ಅನುಭವಿಸುವರು."[9] Bruce Metzgerನು ಹೀಗೆ ವ್ಯಾಖ್ಯಾನಿಸುತ್ತಾನೆ:

> ದೇವರು ಕ್ಷಾಮ ಮತ್ತು ಮರಣಗಳನ್ನು ಅನುಮೋದಿಸುವವನಲ್ಲ . . . ಆದರೆ ಜನರು ದೇವರನ್ನು ವಿರೋಧಿಸುವದಕ್ಕೆ ಮುಂದುವರೆಸುವದಾದರೆ ಅವುಗಳು ಸಂಭವಿಸಲೇ ಬೇಕಾಗಿರುತ್ತದೆ . . . ಒಂದು ಬೆಟ್ಟದ ತುದಿಯಿಂದ ಹೆಜ್ಜೆಯನ್ನು ಮುಂದಿಡುವಂತಹ ಶಾರೀರಿಕ ನಿಯಮಗಳನ್ನು ನಿರ್ಲಕ್ಷಿಸಿರಿ, ಆಗ ವಿನಾಶವು ಸಂಭವಿಸುತ್ತದೆ. ನೈತಿಕ ನಿಯಮಗಳನ್ನು ನಿರ್ಲಕ್ಷಿಸಿರಿ, ಮತ್ತು ಅಷ್ಟೇ ಖಚಿತವಾಗಿ ವಿನಾಶವು ಬರುವದು. ಬಣ್ಣಿಸಲ್ಪಟ್ಟಿರುವ ಅಯ್ಯೋಗಳು . . . ದೇವರ ಆಜ್ಞೆಯನ್ನು ಗಂಭೀರವಾಗಿ ತೆಗೆದುಕೊಳ್ಳದಿರುವದರ ಫಲಿತವಾಗಿದೆ . . . ದೇವರು ದುರ್ಗತಿಗಳನ್ನು ಚಿತ್ರೈಸುವದಿಲ್ಲ, ಆದರೆ ಎಲ್ಲಿಯ ತನಕ ನಾವು ಸ್ವತಂತ್ರ ಪ್ರತಿನಿಧಿಗಳಾಗಿರುತ್ತೇವೋ ದೇವರು ಅವುಗಳನ್ನು ಅನುಮತಿಸುತ್ತಾನೆ.[10]

## ಮಿಡತೆಗಳು ಬಣ್ಣಿಸಲ್ಪಟ್ಟಿರುತ್ತವೆ (9:7-12)

**7ಆ ಮಿಡಿತೆಗಳ ರೂಪವು ಯುದ್ಧಕ್ಕೆ ಸನ್ನದ್ಧವಾಗಿರುವ ಕುದುರೆಗಳ ರೂಪದಂತೆ ಇತ್ತು; ಅವುಗಳ ತಲೆಯ ಮೇಲೆ ಚಿನ್ನದ ಕಿರೀಟಗಳಂತೆ ಏನೋ ಇದ್ದವು; ಅವುಗಳ ಮುಖಗಳು ಮನುಷ್ಯರ ಮುಖಗಳ ಹಾಗೆ ಇದ್ದವು. 8ಸ್ತ್ರೀಯರ ಕೂದಲಿನಂತಿರುವ ಕೂದಲು ಅವುಗಳಿಗೆ ಇತ್ತು;**

**ಅವುಗಳ ಹಲ್ಲುಗಳು ಸಿಂಹದ ಹಲ್ಲುಗಳ ಹಾಗಿದ್ದವು. [9]ಅವುಗಳಿಗೆ ಉಕ್ಕಿನ ಕವಚಗಳಂತಿದ್ದ ಕವಚಗಳು ಇದ್ದವು; ಅವುಗಳ ರೆಕ್ಕೆಗಳ ಶಬ್ದವು ಯುದ್ಧಕ್ಕೆ ಓಡುವ ರಥಾಶ್ವಗಳ ಶಬ್ದದ ಹಾಗೆ ಇತ್ತು. [10]ಚೇಳಿಗಿರುವಂತೆ ಅವುಗಳಿಗೆ ಬಾಲಗಳೂ ಕೊಂಡಿಗಳೂ ಉಂಟು; ಮನುಷ್ಯರನ್ನು ಐದು ತಿಂಗಳುಗಳವರೆಗೂ ಪೀಡಿಸುವ ಸಾಮರ್ಥ್ಯವು ಅವುಗಳ ಬಾಲಗಳಲ್ಲಿಯೇ ಇರುವದು. [11]ಅಧೋಲೋಕದ ಅಧಿಕಾರಿಯಾದ ದೂತನು ಅವುಗಳನ್ನಾಳುವ ಅರಸನು; ಅವನಿಗೆ ಇಬ್ರಿಯ ಭಾಷೆಯಲ್ಲಿ ಅಬದ್ದೋನನೆಂತಲೂ ಗ್ರೀಕ್ ಭಾಷೆಯಲ್ಲಿ ಅಪೊಲ್ಲುವೋನನೆಂತಲೂ ಹೆಸರುಂಟು. [12]ಮೊದಲನೆಯ ವಿಪತ್ತು ಕಳೆದು ಹೋಯಿತು; ಇಗೋ, ಇನ್ನೂ ಎರಡು ವಿಪತ್ತುಗಳು ಬರಬೇಕು.**

ಈ ಹಂತದ ತನಕ, ಯೋಹಾನನು ಮಿಡಿತೆಗಳ ಬಣ್ಣನೆಯನ್ನು ಮಾಡಿರಲಿಲ್ಲ. ಆತನು ಆ ವಿಷಯಕ್ಕೆ 7ರಿಂದ 10 ವಚನಗಳಲ್ಲಿ ಪರಿಹಾರವನ್ನು ಮಾಡುತ್ತಾನೆ. ಮತ್ತೊಂದಾವರ್ತಿ, ಒಬ್ಬನು ಆ ದುಸ್ವಪ್ನಕರವಾದ ಆಕಾರಗಳ ಒಟ್ಟಾರೆಯಾದ ಪ್ರಭಾವವನ್ನು ತಪ್ಪಿಸಿಕೊಳ್ಳದಂತೆ ಈ ಚಿಕ್ಕ ವಿವರಗಳ ಮೇಲೆಯೇ ಒತ್ತು ಕೊಡದಿರುವಂತೆ ಜಾಗ್ರತೆಯನ್ನು ವಹಿಸಿಕೊಳ್ಳಬೇಕು. Charles Ryrieನು ಹೀಗೆ ವ್ಯಾಖ್ಯಾನ ನೀಡುತ್ತಾನೆ, "ಬೈಬಲಿನೊಳಗೆ ಬೇರೆ ಯಾವ ಅಧ್ಯಾಯಗಳಲ್ಲಿಯೂ ಇರದಷ್ಟು 'ಗಳಂತೆ' ಮತ್ತು ಹಾಗೆ' ಎಂಬ ಪದಗಳು ಈ ಅಧ್ಯಾಯದಲ್ಲಿ ಅಧಿಕವಾಗಿರುತ್ತವೆ, ಇದರಿಂದ ಯೋಹಾನನು ದರ್ಶನದಲ್ಲಿ ಕಂಡ ದೃಶ್ಯವನ್ನು ವಿವರಿಸುವದಕ್ಕೆ ಎಷ್ಟೊಂದು ಕಷ್ಟವಾಗಿರಬಹುದೆಂಬುದು ತೋರಿ ಬರುತ್ತದೆ."[11]

**ವಚನ 7.** ಯೋಹಾನನು ತನ್ನ ಬಣ್ಣನೆಯನ್ನು ಆರಂಭಿಸುತ್ತಾ ಹೀಗೆ ಹೇಳುತ್ತಾನೆ, **ಆ ಮಿಡಿತೆಗಳ ರೂಪವು ಯುದ್ಧಕ್ಕೆ ಸನ್ನದ್ಧವಾಗಿರುವ ಕುದುರೆಗಳ ರೂಪದಂತೆ ಇತ್ತು.** ಪ್ರಕಟನೆ 9ರಲ್ಲಿನ ಮಿಡಿತೆಗಳು ಯೋವೇಲ 1 ಮತ್ತು 2 ರಲ್ಲಿನ ಮಿಡಿತೆಗಳೊಂದಿಗೆ ಹೋಲಿಕೆ ಮಾಡಲ್ಪಡುವಾಗ, ಬಣ್ಣಿಸುವ ಕೆಲವೊಂದು ಪದಗಳು ಒಂದೇ ರೀತಿಯಾಗಿವೆ ಮತ್ತು ಇನ್ನು ಕೆಲವು ವ್ಯತ್ಯಾಸವಾಗಿವೆ ಎಂಬುದನ್ನು ಒಬ್ಬನು ಕಾಣಬಹುದು. ವ್ಯತ್ಯಾಸದ ಒಂದು ಅಂಶವೆಂದರೆ ಯೋವೇಲನ ಪ್ರವಾದನೆಯಲ್ಲಿ, ಮಿಡಿತೆಗಳು ಕಾರ್ಮುಗಿಲು *ಆಗಿದ್ದವು* (ಯೋವೇಲ 2:2), ಆದರೆ ಪ್ರಕಟನೆ ಪುಸ್ತಕದಲ್ಲಿ, ಮಿಡಿತೆಗಳು ಮೇಘಗಳೊಳಗಿಂದ *ಹೊರಟು ಬಂದವು* (ಪ್ರಕಟನೆ 9:3). ಒಂದು ಹೋಲಿಕೆಯಿರುವ ಅಂಶವೆಂದರೆ ಎರಡೂ ಸಹ ಕುದುರೆಗಳಿಗೆ ಹೋಲಿಸಲ್ಪಟ್ಟಿರುತ್ತವೆ (ಯೋವೇಲ 2:4; ಪ್ರಕಟನೆ 9:7). ಒಂದು ಸ್ವಾಭಾವಿಕ ಮಿಡಿತೆ ಹಾಗೂ ಒಂದು ಕುದುರೆಯ ತಲೆಗಳಲ್ಲಿ ಕೆಲವೊಂದು ಸಾಮ್ಯತೆಯಿರುತ್ತದೆ. ಜರ್ಮನ್ ಭಾಷೆಯಲ್ಲಿ ಮಿಡಿತೆಯನ್ನು *heupferd* ಅಥವಾ "ಹುಲ್ಲು-ಕುದುರೆ" ಎಂದು ಕರೆಯಲಾಗುತ್ತದೆ. ಇಟಲಿ ಭಾಷೆಯಲ್ಲಿ, ಅದು *cavalletta* ಎಂದು ಕರೆಯಲ್ಪಡುತ್ತದೆ, ಅದರರ್ಥವು "ಚಿಕ್ಕ ಕುದುರೆ." ನಿರ್ದಿಷ್ಟವಾಗಿ, ಯೋಹಾನನು **ಯುದ್ಧಕ್ಕೆ ಸನ್ನದ್ಧವಾಗಿರುವ** ಕುದುರೆಗಳ ರೂಪದಲ್ಲಿದ್ದವು ಎಂದು ಹೇಳಿದನು. ಈ ವರ್ಣನೆಯು ಮಿಡಿತೆಗಳ ಎದೆಕವಚಗಳನ್ನು ಸೂಚಿಸಬಹುದಾಗಿದೆ (ವ. 9) ಅಥವಾ ಅವುಗಳು ಯುದ್ಧ ಮಾಡುವದಕ್ಕೆ ಕಾತುರಗೊಂಡಿದ್ದವು ಎಂದಷ್ಟೇ ಅರ್ಥವಾಗಬಹುದು.

ಬಳಿಕ ಯೋಹಾನನು ಮುಂದುವರೆಸಿ **ಅವುಗಳ ತಲೆಯ ಮೇಲೆ ಚಿನ್ನದ ಕಿರೀಟಗಳಂತೆ** ಏನೋ ಇದ್ದವು ಎಂದು ವಿವರವನ್ನು ಕೊಡುತ್ತಾನೆ. **ಕಿರೀಟಗಳಂತೆ** ಎಂಬುದನ್ನು ಅನುವಾದಿಸಿರುವ ಗ್ರೀಕ್ ಭಾಷೆಯ ಪದವು στέφανος (*stephanos*), ಇದು "ಜಯಮಾಲೆ" ಎಂಬುದಕ್ಕಿರುವ ಪದವಾಗಿದೆ (2:10; 4:4ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಈ ಮಿಡಿತೆಗಳು ತಮಗೆ ವಹಿಸಲಾಗಿರುವ ಪೀಡಿಸುವ ಕೆಲಸದಲ್ಲಿ ಯಶಸ್ವಿಗೊಳ್ಳುವವು - ಇದೊಂದು ಮಂಕುಗೊಳಿಸುವ ವಿಚಾರವಾಗಿದೆ. ಖಂಡಿತವಾಗಿಯೂ, ಅವುಗಳು ಆನಂದಿಸುವ

ಜಯವು ಏನೇ ಆಗಿದ್ದರೂ, ಅದು ಕೇವಲ ತಾತ್ಕಾಲಿಕವಾಗುವದು; ಇವುಗಳು ವಾಸ್ತವಿಕವಾದ ಜಯದ ಕಿರೀಟಗಳಾಗಿರಲಿಲ್ಲ, ಆದರೆ ಕೇವಲ "ಚಿನ್ನದ ಕಿರೀಟಗಳ ರೀತಿಯಲ್ಲಿ ಇದ್ದವು ಏನೋ" (NIV; ಒತ್ತಿ ಹೇಳಿದ್ದು ನನ್ನದು).

ಮುಂದಿನ ಗುಣಸ್ವಭಾವವು ಅತ್ಯಂಥ ಮಹತ್ವಪೂರ್ಣವಾಗಿರಬಹುದಾಗಿದೆ: **ಅವುಗಳ ಮುಖಗಳು ಮನುಷ್ಯರ ಮುಖಗಳ ಹಾಗೆ ಇದ್ದವು.** 4ನೇ ಅಧ್ಯಾಯದಲ್ಲಿ, ನಾಲ್ಕು ಜೀವಿಗಳೊಳಗೆ ಮೂರನೆಯ ಮುಖವು "ಮನುಷ್ಯನ ಮುಖದಂತೆ ಇತ್ತು" (4:7), ಬಹುಶಃ ಬುದ್ಧಿಯನ್ನು ಅಥವಾ ಚಾಣಕ್ಯತನವನ್ನು ಸೂಚಿಸುತ್ತಿರಬಹುದಾಗಿದೆ. ಅದೇ ರೀತಿಯ ಒಂದು ವಿಚಾರವು ಇಲ್ಲಿ ವ್ಯಕ್ತಪಡಿಸಲ್ಪಟ್ಟಿರಬಹುದು. "ಯೋಹಾನನು ಬರುತ್ತಿರುವ ದಂಡುಗಳ ಮುಖಗಳನ್ನು ನೇರವಾಗಿ ದಿಟ್ಟಿಸಿ ನೋಡಿದಾಗ, ಆತನಿಗೆ ಪ್ರಾಣಿಗಳ ಜಗತ್ತಿನ ಜೋಮುಗಟ್ಟಿದ ಆಕಾರವು ಕಾಣಿಸಲಿಲ್ಲ, ಆದರೆ ಆತನು ಕಂಡಿದ್ದು ಪೈಶಾಚಿಕ [ಮಾನವ] ಜೀವಿಗಳ ಅತ್ಯಂಥ ಬುದ್ಧಿಯುಳ್ಳ ರಕ್ತತೆ ಹಾಗೂ ಕ್ರೂರತೆಗಳೇ ಆಗಿದ್ದವು."[12] "ಅಸ್ವಾಭಾವಿಕ ಮತ್ತು ಪೈಶಾಚಿಕ ಎರಡೂ ಆಗಿರುವ ಒಂದು ಆಕಾರದಲ್ಲಿ ಮನುಷ್ಯ ಮತ್ತು ಮೃಗಗಳು ಒಂದುಗೂಡಿಸಲ್ಪಟ್ಟಿರುತ್ತವೆ"[13] ಎಂಬುದು ಮಹತ್ವಪೂರ್ಣವಾಗಿ ಕಾಣಿಸುತ್ತದೆ. G. B. Cairdನು ಹೀಗೆ ಬರೆಯುತ್ತಾನೆ, "ದುಷ್ಟತನವು ಅನೇಕ ಅನಿಷ್ಟ ರೂಪಗಳನ್ನು ತೆಗೆದುಕೊಳ್ಳಬಹುದು . . . ಆದರೆ ಕೊನೆಯ ಪರಿಶೀಲನೆಯಲ್ಲಿ ಅದಕ್ಕೊಂದು ಮಾನವ ಮುಖವಿರುತ್ತದೆ . . ."[14]

**ವಚನ 8.** ಈ ಜೀವಿಗಳಿಗೆ **ಸ್ತ್ರೀಯರ ಕೂದಲಿನಂತಿರುವ ಕೂದಲು** ಸಹ ಇದ್ದವು. ಬಹುಶಃ ಈ ಕೂದಲು ಅವುಗಳ ತಲೆಯ ಮೇಲಿದ್ದಿರಬಹುದು; ಬಹುಶಃ ಅವುಗಳ ದೇಹವೆಲ್ಲಾ ಆವರಿಸಲ್ಪಟ್ಟಿರಬಹುದು. ಈ ವಿವರಣೆಯು ಮತ್ತೊಂದು ಅಸಹಜತೆಯನ್ನು ಸೇರ್ಪಡೆಗೊಳಿಸುತ್ತದೆ. ಮಿಡಿತೆಗಳಿಗೆ ಸ್ತ್ರೀಯ ರೀತಿಯಲ್ಲಿ ಕೂದಲುಗಳಿದ್ದವು ಎಂಬುದರಲ್ಲಿ ಇಂದ್ರಿಯಾಸಕ್ತಿಯನ್ನು ಕಾಣುತ್ತಾರೆ, ಆದರೆ ಅಂಥ ಜೀವಿಯ ಮೇಲೆ ಉದ್ದವಾದ, ಹರಿದಾಡುವ ಕೂದಲುಗಳಿರುವದು ವಿಕಟತೆಯಾಗಿರುತ್ತದೆ, ಹೊರತು ಇಂದ್ರಿಯಾಸಕ್ತಿ ಅಲ್ಲ. ಒಬ್ಬ ಮನುಷ್ಯನು "ಪಾಪದಷ್ಟು ಕುರೂಪ" ಆಗಿರುವದನ್ನು ಯೋಚಿಸಿರಿ - ಉದ್ದವಾದ, ಹರಿದಾಡುವ ಕೂದಲುಳ್ಳವನು. ಆ ಬಣ್ಣನೆಯಲ್ಲಿ ಯಾವದೂ ಆಕರ್ಷಕವಾಗಿರುವದಿಲ್ಲ.

ಇವುಗಳ **ಹಲ್ಲುಗಳು ಸಿಂಹದ ಹಲ್ಲುಗಳ ಹಾಗಿದ್ದವು**. ಈ ಪ್ರಕರಣದಲ್ಲಿ, ಹಲ್ಲುಗಳನ್ನು ಸೀಳಿ ಹಾಕುವದಕ್ಕೆ ಬಳಸಲ್ಪಡುವದಿಲ್ಲ, ಯಾಕೆಂದರೆ ಈ ಜೀವಿಯ ಆಯುಧವು ಚೇಳಿನ ಕೊಂಡಿಯಾಗಿತ್ತೇ, ಹೊರತು ಸಿಂಹದ ಹಲ್ಲುಗಳಲ್ಲ. ಬದಲಾಗಿ, ಈ ರೂಪವು ರಾಕ್ಷಸಿ ಜೀವಿಯ ರಕ್ತಪಿಪಾಸು ಸ್ವಭಾವವನ್ನು ಕುರಿತು ಒತ್ತಿ ಹೇಳುತ್ತದೆ.

**ವಚನ 9. ಅವುಗಳಿಗೆ ಉಕ್ಕಿನ ಕವಚಗಳಂತಿದ್ದ ಕವಚಗಳು ಇದ್ದವು.** ಈ ವಿವರಣೆಯು ಮಿಡಿತೆಗಳ ದೇಹವನ್ನು ಮುಚ್ಚಿಕೊಂಡಿರುವ ಸ್ವಾಭಾವಿಕವಾದ ಪೊರೆಗಳನ್ನು ಸೂಚಿಸಬಹುದಾಗಿದೆ, ಅಥವಾ ಯುದ್ಧ ಕುದುರೆಗಳ ರೀತಿಯಲ್ಲಿ ಮಿಡಿತೆಗಳು ವಿಶೇಷ ಯುದ್ಧಾಯುಧವನ್ನು ಹೊಂದಿರಬಹುದಾಗಿದೆ. ಯಾವ ರೀತಿಯಲ್ಲಿ ನೋಡಿದರೂ, ಮಿಡಿತೆಗಳು ಅಪರಾಜಿತವಾಗಿ ಕಂಡವು.

**ಅವುಗಳ ರೆಕ್ಕೆಗಳ ಶಬ್ದವು ಯುದ್ಧಕ್ಕೆ ಓಡುವ ರಥಾಶ್ವಗಳ ಶಬ್ದದ ಹಾಗೆ ಇತ್ತು.** ಮಿಡಿತೆಗಳ ಉಪದ್ರವವನ್ನು ಅನುಭವ ಮಾಡಿರುವವರು ಅವುಗಳ ಶಬ್ದವನ್ನು ಒಂದು ಬಲಿಷ್ಠ ನೀರಿನ ಜಲಪಾತದ ಘೋಷದಂತೆ, ಹುಲ್ಲುಗಾವಲಿನ ಪಟಪಟನೆ ಶಬ್ದಮಾಡುವ ಬೆಂಕಿಯಂತೆ, ಮರಗಳ ಮೇಲೆ ರಭಸವಾದ ಮಳೆಯು ಬೀಳುತ್ತಿರುವಂತೆ ಇರುತ್ತದೆಂದು ಹೋಲಿಕೆ ಮಾಡುತ್ತಾರೆ. ಯೋಹಾನು ಆ ಶಬ್ದವನ್ನು ಮುನ್ನುಗ್ಗಿ ಬರುತ್ತಿರುವ ಯುದ್ಧ ಸೈನ್ಯಕ್ಕೆ ಹೋಲಿಕೆ

ಮಾಡುತ್ತಾನೆ. ಆತನ ವರ್ಣನಾತ್ಮಕ ಪದಗಳು ಮಿಡಿತೆಗಳ ಮರಣಾಂತಿಕ ಉದ್ದೇಶವನ್ನು ತಿಳಿಯಪಡಿಸುತ್ತವೆ.

**ವಚನ 10. ಚೇಳಿಗಿರುವಂತೆ ಅವುಗಳಿಗೆ ಬಾಳಗಳೂ ಕೊಂಡಿಗಳೂ ಇದ್ದವು.** ಸ್ವಾಭಾವಿಕ ಮಿಡಿತೆಗಳು ಅಸಂಖ್ಯಾತವಾದ ಸಮೂಹದ ಕಾರಣದಿಂದಾಗಿ ಭಯವನ್ನುಂಟು ಮಾಡುತ್ತವೆ, ಆದರೆ ವೈಯಕ್ತಿಕವಾಗಿ ಅವುಗಳು ಹಾನಿಕಾರಕವಲ್ಲ ಮತ್ತು ನಿಜವಾದ ಹಾನಿಯನ್ನು ಮಾಡುವದಕ್ಕೆ ಅಸಮರ್ಥವಾಗಿವೆ. ಈ ಹಾನಿಕಾರಕವಲ್ಲದ ಜೀವಿಗಳಿಗೆ ಬದಲಾಗಿ, ಉದ್ದವಾದ, ಹೊಡೆಯುವಂಥ, ವಿಷ ತುಂಬಿದ ಚೇಳುಗಳಂಥ ಬಾಲವನ್ನು ಹೊಂದಿರುವ ಕೀಟಗಳನ್ನು ಊಹಿಸಿಕೊಳ್ಳಿರಿ. **ಮನುಷ್ಯರನ್ನು ಐದು ತಿಂಗಳುಗಳವರೆಗೂ ಪೀಡಿಸುವ ಸಾಮರ್ಥ್ಯವು ಅವುಗಳ ಬಾಲಗಳಲ್ಲಿಯೇ ಇರುವದು** (ವ. 5ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

**ವಚನ 11.** ಯೋಹಾನನು ಮಿಡಿತೆಗಳ ಕುರಿತು ಇನ್ನೊಂದು ಹೇಳಿಕೆಯನ್ನು ಹೊಂದಿದ್ದನು - ಅದರ ಸೂಚ್ಯಾರ್ಥದಲ್ಲಿ ನಡುಕಹುಟ್ಟಿಸುವಂಥ ಮಾಹಿತಿ: **ಅಧೋಲೋಕದ ಅಧಿಕಾರಿಯಾದ ದೂತನು ಅವುಗಳನ್ನಾಳುವ ಅರಸನು.** ಸ್ವಾಭಾವಿಕವಾದ "ಮಿಡತೆಗಳಿಗೆ ಅರಸನಿಲ್ಲ" (ಜ್ಞಾನೋಕ್ತಿ 30:27), ಆದರೆ ಪ್ರಕಟನೆ 9 ರಲ್ಲಿನ ಮಿಡತೆಗಳಿಗೆ ಅರಸನಿದ್ದನು. ಹೀಗೆ ಅವುಗಳು ಆಕ್ರಮಣ ಮಾಡುವಿಕೆ ಸಂಘಟಿತ ಹಾಗೂ ಮಾರ್ಗದರ್ಶನವುಳ್ಳದ್ದು ಆಗಿರಬಹುದಾಗಿದೆ. ಈ ಕಾರಣಕ್ಕಾಗಿ, ಅವುಗಳ ಪೀಡೆಯು ವಿಶೇಷವಾದ ರೀತಿಯಲ್ಲಿ ಪರಿಣಾಮಕಾರಿ ಮತ್ತು ವಿನಾಶಕಾರಿ ಆಗಿರುವದು.

ಅವರ ಅರಸನು **ಅಧೋಲೋಕದ ಅಧಿಕಾರಿಯಾದ ದೂತನು**. ಈ ಮುಂಚೆ ಹೇಳಿದ ರೀತಿಯಲ್ಲಿ, ಈ ದೂತನು ಆಕಾಶದಿಂದ ಬಿದ್ದ ನಕ್ಷತ್ರವಾಗಿರಬಲ್ಲನು; ಅಥವಾ ಬಹುಶಃ ಆತನು ಮತ್ತೊಬ್ಬ ಜೀವಿಯಾಗಿರಬಹುದು. ಈ ವ್ಯಕ್ತಿಯ *ಹೆಸರು* ಇಲ್ಲಿ ಮಹತ್ವಪೂರ್ಣವಾಗಿದೆ: **ಇಬ್ರಿಯ ಭಾಷೆಯಲ್ಲಿ ಅಬದ್ದೋನನೆಂತಲೂ ಗ್ರೀಕ್ ಭಾಷೆಯಲ್ಲಿ ಅಪೊಲ್ಲುವೋನನೆಂತಲೂ ಹೆಸರುಂಟು.** "ಅಂದಾಜಾಗಿ ಎರಡೂ ಪದಗಳ ಅರ್ಥವು ಒಂದೇ ಆಗಿರುತ್ತದೆ, ಆದಾಗ್ಯೂ ಕಟ್ಟುನಿಟ್ಟಿನಿಂದ ಹೇಳುವದಾದರೆ, 'ಅಬದ್ದೋನ' ಎಂದರೆ 'ನಾಶನ' ಮತ್ತು 'ಅಪೊಲ್ಲುವೋನ' ಎಂದರೆ 'ವಿನಾಶಕ.'"[15]

ಬಹಳಷ್ಟು ಜನರು ಇದು ಸೈತಾನನೇ ಎಂದು ಭಾವಿಸಿಕೊಳ್ಳುತ್ತಾರೆ, ಮತ್ತು ಅದು ಇರಲೂ ಬಹುದು. ಯೇಸುವು "ಕಳ್ಳನು ಕದ್ದುಕೊಳ್ಳುವದಕ್ಕೂ ಕೊಲ್ಲುವದಕ್ಕೂ *ನಾಶಮಾಡುವದಕ್ಕೂ* ಬರುತ್ತಾನೆ" ಎಂದು ಹೇಳುವಾಗ ಸೈತಾನನ್ನು (ಅಥವಾ ಆತನ ಜೊತೆಗೆಲಸದವರನ್ನು) ಸೂಚಿಸಿ ಹೇಳಿದನು (ಯೋಹಾನ 10:10; ಒತ್ತಿ ಹೇಳಿದ್ದು ನನ್ನದು). ಹೇಗೂ, ಪ್ರಕಟನೆ 2 ಮತ್ತು 3 ಅಧ್ಯಾಯಗಳಲ್ಲಿ, ಯೋಹಾನನು ಸೈತಾನನನ್ನು ಸೂಚಿಸಿ ಹೇಳುವಾಗ, ಆತನು ಅದನ್ನು ಸ್ಪಷ್ಟವಾದ ಮಾತುಗಳಲ್ಲಿ ತಿಳಿಸಿದನು (2:9, 10, 13, 24; 3:9). ಪುಸ್ತಕದೊಳಗೆ ನಂತರದಲ್ಲಿ, ಅಪೊಸ್ತಲನು ಸೈತಾನನಿಗೆ ಸಂಕೇತವನ್ನು ಬಳಸುವ ವೇಳೆ, ಆತನು ವಾಚಕನಿಗೋಸ್ಕರ ಆ ಸಂಕೇತದ ಅರ್ಥವನ್ನು ವಿವರಿಸುತ್ತಾನೆ (12:9, 12; 20:2, 7, 10).

ಹೇಗೂ, ಅಬದ್ದೋನ/ಅಪೊಲ್ಲುವೋನನನ್ನು ಗುರುತಿನ ವಿಷಯದಲ್ಲಿ ಅನೇಕ ಸಾಧ್ಯತೆಗಳಿರುತ್ತವೆ. ಉದಾಹರಣೆಗೆ, **ಅಬದ್ದೋನ** ಎಂಬುದು "ಹಳೆಯ ಒಡಂಬಡಿಕೆಯಲ್ಲಿ ಆರು ಸಾರಿ ಜಾಗತಿಕ ಸಮಾಧಿ, ಮರಣ, ಕತ್ತಲು, ನಿಶ್ಶಬ್ದ ಮತ್ತು ಮರೆವುಗಳ ದೇಶ, ಜೀವ ಮತ್ತು ನಿರೀಕ್ಷೆಗಳ ನಾಶಕ ಆಗಿರುವ ನರಕ ಅಥವಾ ಪಾತಾಳಕ್ಕೆ ಸಮನಾರ್ಥಕ ಹೆಸರಾಗಿ

ಬಳಸಲ್ಪಟ್ಟಿರುತ್ತದೆ."[16] ಬಹುಶಃ, 11ನೇ ವಚನದಲ್ಲಿ "ಅಬದ್ದೋನ" ಎಂಬುದು ನಾಲ್ಕನೆಯ ಕುದುರೆ ಸವಾರ ಹಾಗೂ ಆತನ ಸಂಗಡಿನನ್ನು ಸೂಚಿಸುವ ಇನ್ನೊಂದು ರೀತಿಯಾಗಿರುತ್ತದೆ: ಮರಣ ಮತ್ತು ಪಾತಾಳ (6:8).

ಅಬದ್ದೋನ ಎಂಬವನು ದೇವರ ಸೇವೆಗಾಗಿ ನಿಯೋಜಿಸಲ್ಪಟ್ಟಿರುವ ಮತ್ತೊಬ್ಬ ದೂತನು ಆಗಿರಬಹುದಷ್ಟೇ, ಆತನು ಒಳ್ಳೇವನು ಅಥವಾ ಕೆಟ್ಟ ದೂತನು ಇರಬಹುದಾಗಿದೆ. ಪ್ರತಿಯೊಂದು ದರ್ಶನದ ವಿಷಯದಲ್ಲಿರುವ ಪ್ರಕಾರವೇ, ಈ ಅಧ್ಯಯನದಲ್ಲಿರುವ ವಾಕ್ಯಭಾಗವು ದೇವರು ಅಧಿಕಾರದಲ್ಲಿದ್ದಾನೆಂಬುದನ್ನು ಒತ್ತಿ ಹೇಳುವದಾಗಿದೆ.

ಕೆಲವು ಬರಹಗಾರರು **ಅಪೊಲ್ಲುವೋನ** ಮತ್ತು "ಅಪೊಲ್ಲೊ" ಎಂಬ ಹೆಸರುಗಳ ನಡುವೆ ಸಾಮ್ಯತೆಗಳಿರುತ್ತವೆ ಎಂಬುದನ್ನು ಎತ್ತಿ ತೋರಿಸುತ್ತಾರೆ ಮತ್ತು ತನ್ನನ್ನು ಗ್ರೀಕ್ ದೇವರಾದ ಅಪೊಲ್ಲೊನ ಅವತಾರವೆಂದು ಹೇಳಿಕೊಳ್ಳುತ್ತಿದ್ದ ರೋಮನ್ ಚಕ್ರವರ್ತಿಯಾದ Domitianನನ್ನು ಚಾಣಾಕ್ಷ್ಯತನದಿಂದ ಲೇವಡಿ ಮಾಡುತ್ತಾನೆಂಬ ಮನವರಿಕೆ ಹೊಂದಿರುತ್ತಾರೆ. "ಯೋಹಾನನು ಇದನ್ನು ದೃಷ್ಟಿಯಲ್ಲಿಟ್ಟುಕೊಂಡಿದ್ದರೆ, ಐದನೆಯ ತುತೂರಿಯ ಕುರಿತಾದ ಆತನ ಕಡೇ ಮಾತು ವಿಪರ್ಯಾಸದ ಒಂದು ಅತ್ಯಂಥ ಚಾತುರ್ಯದ ಹೊಡೆತ ಆಗಿತ್ತು ಎಂದಾಗುತ್ತದೆ: ನರಕದ ವಿನಾಶಕಾರಿ ಸಮೂಹಕ್ಕೆ ರೋಮನ್ ಸಾಮ್ರಾಜ್ಯದ ಚಕ್ರವರ್ತಿಯನ್ನು ಅರಸನನ್ನಾಗಿ ಹೊಂದಿತ್ತು!"[17] ಅಪೊಲ್ಲೊನ ಪಾಷಂಡಮತವು ಮಿಡತೆ ಸಂಕೇತದ ಜೊತೆಯಲ್ಲಿ ಇತರ ಕೀಟಗಳ ಸಂಕೇತಗಳನ್ನು ಬಳಸುತ್ತಿತ್ತು.

ಮಿಡತೆಗಳು ಮತ್ತು "ಅಬದ್ದೋನ/ನಾಶನ ಎಂಬ ಹೆಸರಿನ ನಡುವೆ ಇರುವ ಅತ್ಯಂತ ಸ್ಪಷ್ಟವಾಗಿ ಕಾಣುವ ಸಂಬಂಧವು ನಿರ್ಲಕ್ಷಿಸಲ್ಪಟ್ಟಿರುತ್ತದೆ. "ಪ್ರಾಚೀನ ಇಬ್ರಿಯರು ಮಿಡತೆಗಳನ್ನು ಹಲವಾರು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಿದ್ದರು. ಈ ಪ್ರತಿಯೊಂದು ಹೆಸರು ಸಹ *ನಾಶನ*ವನ್ನು ಸೂಚಿಸುವವುಗಳಾಗಿದ್ದವು."[18] (ನೋಡಿರ ಯೋವೇಲ 1:4.) ಮಿಡತೆಗಳ ಅರಸನನ್ನು "ನಾಶನ" ಎಂದು ಕರೆಯುವದು ಈ ನರಕ ಸದೃಶ್ಯ ಜೀವಿಗಳ ಅಂತಿಮ ಉದ್ದೇಶವು *ನಾಶನವನ್ನು* ತರುವದೇ ಆಗಿತ್ತು ಎಂಬುದನ್ನು ಒತ್ತಿ ಹೇಳುವದಕ್ಕೆ ಪವಿತ್ರಾತ್ಮನು ಅನುಸರಿಸಿದ ದಾರಿಯಷ್ಟೆ ಆಗಿರಬಹುದಾಗಿದೆ.

ಹೇಗೂ, "ಅಬದ್ದೋನ/ಅಪೊಲ್ಲುವೋನ ಯಾರು ಅಥವಾ ಯಾವದು ಆಗಿತ್ತೆಂಬುದು ಅಷ್ಟೇನೂ ಪ್ರಾಮುಖ್ಯವಾಗಿರುವದಿಲ್ಲ. ಪ್ರಾಮುಖ್ಯವಾದದ್ದೆಂದರೆ ಪಶ್ಚಾತ್ತಾಪ ಪಡದಿರುವ ಪಾಪವು *ನಾಶನದಲ್ಲಿ ಫಲಿತಗೊಳ್ಳುವದು* ಎಂಬುದನ್ನು ಅರ್ಥಮಾಡಿಕೊಳ್ಳುವದೇ: ದೇಹ, ಮನಸ್ಸು, ಮತ್ತು ಆತ್ಮದ ನಾಶನ. ಪಾಪ ಮತ್ತು ಪಾಪಿಯ ಮೇಲಾಗುವ ಪರಿಣಾಮದ ಕುರಿತು ಅದೇ ದೇವರ ವಾಕ್ಯವಾಗಿದೆ.

ಇಷ್ಟೊತ್ತಿಗೆಲ್ಲಾ, ಪ್ರಕಟನೆ 9:1-11 ವಚನಗಳು ಮಹಮ್ಮದನ ದಂಡುಗಳ ದಾಳಿ ಅಥವಾ ಕೋಬ್ರಾ ಹೆಲಿಕ್ಯಾಪ್ಟರ್‌ಗಳ ಮೂಲಕ ನರವ್ಯೂಹ ಹಾನಿಗೊಳಿಸುವ ವಿಷಾನಿಲ ದಾಳಿಗಳಂತಹ ಐತಿಹಾಸಿಕ ಘಟನೆಗಳನ್ನು ಬಣ್ಣಿಸುವದಾಗಿರುವದಿಲ್ಲ ಎಂಬುದು ಸ್ಪಷ್ಟವಾಗಿರತಕ್ಕದ್ದು. ಗತಕಾಲದ ದಿನಗಳಲ್ಲಿ, ಮುಂದುವರೆದ-ಐತಿಹಾಸಿಕ ಅರ್ಥೈಸುವ ದಾರಿಯನ್ನು ಅನುಸರಿಸುವವರಿಗೆ ಮಹಮ್ಮದನ ದಂಡುಗಳ ದಾಳಿಯ ಕುರಿತು ಮುಕ್ತಾಯಕ್ಕೆ ಬರುವದು ನೆಚ್ಚಿನದ್ದಾಗಿರುತ್ತಿತ್ತು. ಈ ಎರಡನೆಯ ಮುಕ್ತಾಯಕ್ಕೆ ಬರುವದು ಕೆಲವು ಸಹಸ್ರವರ್ಷಪೂರ್ವಾಡಳಿತ ವಾದಿಗಳು ಮಾಡುತ್ತಿದ್ದು ಅರ್ಥನಿರೂಪಣೆಯಾಗಿತ್ತು. ಅಂಥ ವ್ಯಾಖ್ಯಾನಗಳು ಮೊದಲ ಶತಮಾನದ ವಾಚಕರಿಗೆ ಯಾವದೇ ಅರ್ಥವನ್ನು ಹೊಂದಿರುವದಕ್ಕೆ ಸಾಧ್ಯವಿರಲಿಲ್ಲ. ಅಲ್ಲದೆ, ಮಹಮ್ಮದನ ಸೈನ್ಯ ಮತ್ತು ಕೋಬ್ರಾ ಹೆಲಿಕ್ಯಾಪ್ಟರ್‌ಗಳೆರಡೂ

ಜನರನ್ನು ಕೊಂದವು - ಆದರೆ ಮಿಡತೆಗಳು ಹಾಗೆ ಕೊಲ್ಲಲಿಲ್ಲ. ಬದಲಾಗಿ, ಬಹಳಷ್ಟು ಲೇಖಕರು ಒಪ್ಪಿಕೊಳ್ಳುವದೇನೆಂದರೆ, ಮಿಡತೆಗಳು *ಪಾಪದ ಪೀಡಿಸುವ ಸ್ವಭಾವವನ್ನು* ಬಣ್ಣಿಸುತ್ತವೆ ಎಂಬುದೆ:

> . . . ನಮ್ಮ ಮುಂದೆ ಮಾನವರ ಆತ್ಮಗಳಿಗೆ ಪೀಡನೆಯನ್ನು ತರುವಂಥ ನೈತಿಕ ಹಾಗೂ ಆತ್ಮೀಕ ಅವನತಿಯ ಕುರಿತ ಒಂದು ಕಣ್ಣಿಗೆ ಕಟ್ಟಿದಂಥ ಚಿತ್ರಣವು ಇರುತ್ತದೆ . . .
>
> ಪಾಪವು ದೇವರ ನಿಯಮಕ್ಕೆ ಅವಿಧೇಯವಾಗುವದೇ ಆಗಿರುತ್ತದೆ ಮತ್ತು ಅದರ ಜೊತೆಯಲ್ಲಿ ವಂಚನೆ ಹಾಗೂ ಮಾನಸಿಕ ಅಥವಾ ಆತ್ಮೀಕ ಯಾತನೆ ಇರುತ್ತದೆ . . .[19]

> [ಈ ದೃಶ್ಯವು] ಕೆಟ್ಟತನವು ಮಾನವನ ಆತ್ಮಕ್ಕೆ ಮತ್ತು ಮಾನವನ ವ್ಯಕ್ತಿತ್ವಕ್ಕೆ ತರುವಂಥ ಪೀಡೆಯನ್ನು [ಚಿತ್ರಿಸುತ್ತದೆ]. . . . ಮನುಷ್ಯರು ಸತತವಾಗಿ ತಮ್ಮ ಕಾಮಾಭಿಲಾಷೆಗಳನ್ನು, ತಮ್ಮ ಲೋಭ ಮತ್ತು ಮಹಿಮೆಗಾಗಿ ಬಯಕೆ ಇವುಗಳನ್ನು ಅನುಸರಿಸಿರುವಾಗ, ಮತ್ತು ದೇವರನ್ನು ಹಾಗೂ ಆತನ ಮಾರ್ಗವನ್ನು ತೊರೆದು ಬಿಟ್ಟಿರುವಾಗ, ಅವರು . . . ಈ ಪೀಡೆ[ಗಳನ್ನು] ಅನುಭವಿಸಿರುತ್ತಾರೆ. . . .[20]

> ದೇವರಿಗೆ ಅವಿಧೇಯರಾಗುವದನ್ನು ಆರಿಸಿಕೊಂಡವರ ಜೀವಿತಗಳಲ್ಲಿ ಕಾಣುವ ಪಾಪದ ವಿನಾಶಕಾರಿ ಪೀಡೆಯ ವಾಸ್ತವಿಕತೆಯ ಒಂದು ದರ್ಶನವಾಗಿರುತ್ತದೆ.[21]

"ದೇವರಿಗೆ ಅವಿಧೇಯರಾಗುವದಕ್ಕೆ ಆರಿಸಿಕೊಳ್ಳುವವರ" ಕುರಿತಾಗಿ, ಯೋಹಾನನ ವಾಚಕರು ತಮ್ಮನ್ನು ಹಿಂಸಿಸುತ್ತಿದ್ದ ರೋಮನ್ ಅಧಿಕಾರಿಗಳಿಗೆ ಅದನ್ನು ಅನ್ವಯಗೊಳಿಸಿರಬಹುದಾಗಿದೆ. ರೋಮನ್ ಸಾಮ್ರಾಜ್ಯದಲ್ಲಿದ್ದ ಅವಿಶ್ವಾಸಿಗಳು ಪ್ರಕಟನೆ 9:1–12 ಬರೆಯಲ್ಪಡುವ ವೇಳೆ ಪವಿತ್ರಾತ್ಮನು ಹೊಂದಿದ್ದ ಪಾಪಿಗಳ ಪಟ್ಟಿಯೊಳಗೆ ನಿಶ್ಚಯವಾಗಿಯೂ ಅಗ್ರಸ್ಥಾನದಲ್ಲಿದ್ದರು. ಮಿಡತೆಗಳ ಉಪದ್ರವವು "ರೋಮನ್ ಸಾಮ್ರಾಜ್ಯದ ನರಕಸದೃಶ್ಯ ಕೊಳೆತಿರುವಿಕೆ, ಆಂತರೀಕ ಕ್ಷಯವನ್ನು ಸಂಕೇತಿಸುವದಾಗಿತ್ತು"[22] ಎಂದು Ray Summersನು ಅಭಿಪ್ರಾಯ ಪಡುತ್ತಾನೆ.

ಹೇಗೂ, ಅನ್ವಯಿಸುವಿಕೆಯನ್ನು ಯೋಹಾನನ ದಿನಕ್ಕೆ ಮಾತ್ರವೇ ಸೀಮಿತಗೊಳಿಸುವ ಅವಶ್ಯಕತೆಯಿರುವದಿಲ್ಲ. ಮೊದಲನೆಯ ಶತಮಾನವಿರಲಿ ಅಥವಾ ಇಪ್ಪತ್ತೊಂದನೆಯ ಶತಮಾನವೇ ಇರಲಿ, ಪಾಪದ ಕುರಿತು ಒಂದು ಅಂತರ್ಗತ ಸ್ವ-ವಿನಾಶಕಾರತೆಯು ಇರುತ್ತದೆ. Owen Crouchನು ಗಮನಕ್ಕೆ ತರುವದೇನೆಂದರೆ "ತನ್ನ ಸ್ವತಃ ಸ್ವಭಾವದಿಂದಲೇ ಪಾಪವು ತನ್ನ ಸ್ವಂತ ನೋವುಕಾರಕ ದಂಡನೆಯನ್ನು [ಕಾರ್ಯರೂಪಕ್ಕೆ ತರುತ್ತದೆ]."[23] Cairdನು ಹೀಗೆ ಬರೆದನು, ದೇವರು "ದುಷ್ಟತನದ ಸ್ವಂತ ನಾಶನವೇ ಆಗಿರುವದಕ್ಕಾಗಿ ದುಷ್ಟತ್ವವನ್ನು ಅನುಮತಿಸುತ್ತಾನೆ . . . ದುಷ್ಟತ್ವವು ತನ್ನ ಸ್ವಭಾವದಲ್ಲಿಯೇ ಸ್ವ-ವಿನಾಶಕಾರಿ ಆಗಿರುತ್ತದೆ."[24]

**ವಚನ 12.** ಯೋಹಾನನು ಹೀಗೆ ಘೋಷಿಸುವ ಮೂಲಕ ಐದನೆಯ ತುತೂರಿಯನ್ನು ಕುರಿತು ಮುಕ್ತಾಯಗೊಳಿಸುತ್ತಾನೆ, **ಮೊದಲನೆಯ ವಿಪತ್ತು ಕಳೆದು ಹೋಯಿತು; ಇಗೋ, ಇನ್ನೂ ಎರಡು ವಿಪತ್ತುಗಳು ಬರಬೇಕು**. ಮೊದಲನೆಯ ವಿಪತ್ತು ಎಂಬುದು ಐದನೆಯ ತುತೂರಿಯಿಂದ ಘೋಷಿಸಲ್ಪಟ್ಟ ಪೀಡೆಯನ್ನುಂಟು ಮಾಡುವ ಮಿಡತೆಗಳನ್ನು ಸೂಚಿಸುತ್ತದೆ. ಈ ಭಯಂಕರವಾದ "ಮಿಡತೆ-ಕುದುರೆ-ಚೇಳು-ಮಾನವ ತಳಿಗಳು"[25] ಭೂಮಿಯ ಮೇಲೆ ಬಿಚ್ಚಿ ಬಿಡುಗಡೆಗೊಳಿಸಲ್ಪಟ್ಟಿದ್ದವು. ಅವುಗಳು ಮಾನವರನ್ನು ಪೀಡಿಸಿದ್ದು ಮನುಷ್ಯರೊಳಗೆ ಯಾವದೇ ಬದಲಾವಣೆಯನ್ನು ತಂದಿರಲಿಲ್ಲ, ಆದರೆ ದೇವರು ಇನ್ನೂ ಮುಗಿಸಿರಲಿಲ್ಲ.

ಜನರನ್ನು ಪುನಃ ತನ್ನ ಕಡೆಗೆ ಸೆಳೆದುಕೊಳ್ಳಲು ದೇವರು ಸಕಲ ದಾರಿಗಳನ್ನೂ ಅನುಸರಿಸುವದಕ್ಕೆ ದೃಢಸಂಕಲ್ಪ ಮಾಡಿದ್ದನು (ಮತ್ತು ಮಾಡಿದ್ದಾನೆ). ಎರಡನೆಯ ವಿಪತ್ತು ಆರನೆಯ ತುತೂರಿಯು ಊದಲ್ಪಡುವಾಗ ಕಾಣಿಸಿಕೊಳ್ಳುವ ದೇವದೂತರ ಸೈನ್ಯವಾಗಿರುವದು (9:13–19). ಮೂರನೆಯ ಮತ್ತು ಅಂತಿಮ ವಿಪತ್ತು ಕರ್ತನು ಹಿಂದಿರುಗಿ ಬರುವಂಥ ಕಡೇ ತುತೂರಿ ಆಗಿರಲಿದೆ (11:15–19).

## ಆರನೆಯ ತುತೂರಿಯು ಊದಲ್ಪಡುತ್ತದೆ (9:13-19)

**[13]ಆರನೆಯ ದೇವದೂತನು ತುತೂರಿಯನ್ನೂದಿದಾಗ ದೇವರ ಸಮ್ಮುಖದಲ್ಲಿರುವ ಚಿನ್ನದ ವೇದಿಯ ಕೊಂಬುಗಳಿಂದ ಹೊರಟ ಒಂದೇ ಧ್ವನಿಯನ್ನು ಕೇಳಿದೆನು. [14]ಅದು ತುತೂರಿಯನ್ನು ಹಿಡಿದಿದ್ದ ಆರನೆಯ ದೇವದೂತನಿಗೆ - ಯೂಫ್ರೇಟೀಸ್ ಎಂಬ ಮಹಾ ನದಿಯ ಬಳಿಯಲ್ಲಿ ಕಟ್ಟಿರುವ ನಾಲ್ಕು ಮಂದಿ ದೇವದೂತರನ್ನು ಬಿಚ್ಚಿಬಿಡು ಎಂದು ಹೇಳಿತು. [15]ಆಗ ಮನುಷ್ಯರೊಳಗೆ ಮೂರರಲ್ಲಿ ಒಂದು ಭಾಗದ ಜನರನ್ನು ಸಂಹಾರಮಾಡುವದಕ್ಕಾಗಿ ಅದೇ ವರುಷ ಅದೇ ತಿಂಗಳು ದಿನ ತಾಸಿಗೆ ಸಿದ್ಧವಾಗಿದ್ದ ನಾಲ್ಕು ಮಂದಿ ದೇವದೂತರನ್ನು ಬಿಚ್ಚಿಬಿಟ್ಟರು. [16]ಕುದುರೇ ದಂಡಿನವರ ಸಂಖ್ಯೆಯು ಇಪ್ಪತ್ತುಕೋಟಿ ಎಂದು ನನಗೆ ಕೇಳಿಸಿತು. [17]ನಾನು ದರ್ಶನದಲ್ಲಿ ಕಂಡ ಕುದುರೆಗಳ ಮತ್ತು ಸವಾರರ ವಿವರಣೆ ಹೇಗಂದರೆ - ಸವಾರರ ಕವಚಗಳ ಬಣ್ಣವು ಬೆಂಕಿ ಹೊಗೆ ಗಂಧಕ ಇವುಗಳ ಬಣ್ಣದ ಹಾಗಿತ್ತು. ಕುದುರೆಗಳ ತಲೆಗಳು ಸಿಂಹಗಳ ತಲೆಗಳಂತಿದ್ದವು; ಅವುಗಳ ಬಾಯಿಂದ ಬೆಂಕಿ ಹೊಗೆ ಗಂಧಕ ಇವುಗಳು ಹೊರಡುತ್ತಿದ್ದವು. [18]ಅವುಗಳ ಬಾಯಿಂದ ಹೊರಟ ಆ ಬೆಂಕಿ ಹೊಗೆ ಗಂಧಕ ಎಂಬ ಮೂರು ಉಪದ್ರವಗಳಿಂದ ಮನುಷ್ಯರಲ್ಲಿ ಮೂರನೆಯ ಭಾಗವು ಹತವಾಯಿತು. [19]ಆ ಕುದುರೆಗಳ ಸಾಮರ್ಥ್ಯವು ಅವುಗಳ ಬಾಯಲ್ಲಿಯೂ ಬಾಲಗಳಲ್ಲಿಯೂ ಇತ್ತು. ಅವುಗಳ ಬಾಲಗಳು ತಲೆಗಳುಳ್ಳವುಗಳಾಗಿ ಸರ್ಪಗಳ ಹಾಗೆ ಇದ್ದವು. ಅವುಗಳಿಂದ ಕೇಡನ್ನುಂಟುಮಾಡುತ್ತವೆ.**

ಏಳು ತುತೂರಿಗಳ ಅಧ್ಯಯನ ಮಾಡುವದರಲ್ಲಿ ಒಂದು ಮುಂದುವರೆಯುವಿಕೆ ಇರುತ್ತದೆ: ಮೊದಲ ನಾಲ್ಕು ತುತೂರಿಗಳು ಪಾಪ ಒಟ್ಟಾರೆಯಾಗಿ ಜೀವನವನ್ನು ಅಸ್ತವ್ಯಸ್ತಗೊಳಿಸುತ್ತದೆಂಬುದನ್ನು ಸೂಚಿಸಿದವು. ಐದನೆಯ ತುತೂರಿಯು ಪಾಪ ಯಾತನೆ ಕೊಡುತ್ತದೆ ಮತ್ತು ಪೀಡಿಸುತ್ತದೆಂಬುದನ್ನು ಘೋಷಿಸುತ್ತದೆ. ಆರನೆಯ ತುತೂರಿಯು ಪಾಪದಿಂದ ಅನೇಕ ಸಾರಿ ಮರಣವು ಉಂಟಾಗುತ್ತದೆಂಬುದನ್ನು ಎಚ್ಚರಿಸುತ್ತದೆ. ಪಾಪವು ಪಾಪಿಗೆ ನೋವುಂಟು ಮಾಡುವದು ಮಾತ್ರವೇ ಆಗಿರುವದಿಲ್ಲ, ಆದರೆ ಬೇರೆಯವರಿಗೆ ಸಹ ಪರಿಣಾಮವನ್ನುಂಟು ಮಾಡುತ್ತದೆ.

**ವಚನ 13. ಆರನೆಯ ದೇವದೂತನು** ತನ್ನ ತುತೂರಿಯನ್ನು ಊದಿದಾಗ, ಯೋಹಾನನು **ದೇವರ ಸಮ್ಮುಖದಲ್ಲಿರುವ ಚಿನ್ನದ ವೇದಿಯ ಕೊಂಬುಗಳಿಂದ ಹೊರಟ ಒಂದೇ ಧ್ವನಿಯನ್ನು ಕೇಳಿದೆನು** ಎನ್ನುತ್ತಾನೆ. **ಚಿನ್ನದ ವೇದಿಯು** ಧೂಪವೇದಿಯಾಗಿತ್ತು (ನೋಡಿರಿ ವಿಮೋಚನಕಾಂಡ 37:25–29). ವಿಮೋಚನಕಾಂಡ 37:25ನೇ ವಚನವು ಆ ವೇದಿಯ ಕೊಂಬುಗಳ ಕುರಿತು ಮಾತಾಡುತ್ತದೆ. ಇವುಗಳು ವೇದಿಯ ಮೇಲಿನ ಭಾಗದ ಮೂಲೆಗಳಾಗಿದ್ದವು. ಅಂತ್ಯಕಾಲಿಕ ಮತ್ತು ಬೈಬಲಿನ ಇತರ ಸಾಹಿತ್ಯದ ಶೈಲಿಗಳಲ್ಲಿ, ಒಂದು ಕೊಂಬು ಸಾಮಾನ್ಯವಾಗಿ ಬಲವನ್ನು ಸೂಚಿಸುತ್ತದೆ (5:6ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಧೂಪವೇದಿಯ **ನಾಲ್ಕು ಕೊಂಬುಗಳ** ಮೇಲೆ ಕೆಲವು ಸಾರಿ ಯಜ್ಞಮಾಡಿದ

ರಕ್ತವನ್ನು ಇರಿಸಲಾಗುತ್ತಿತ್ತೆಂಬ ಕಾರಣಕ್ಕಾಗಿ ಸಹ ಮಹತ್ವಪೂರ್ಣವಾಗಿರಬಹುದಾಗಿದೆ (ಯಾಜಕಕಾಂಡ 4:7). ಮುಂಚಿನ ಅಧ್ಯಾಯದಲ್ಲಿ, ಚಿನ್ನದ ಧೂಪವೇದಿಯ ಮೇಲೆ ದೇವಜನರ ಪ್ರಾರ್ಥನೆಗಳ ಜೊತೆಯಲ್ಲಿ ಧೂಪವು ಸೇರಿಸಲ್ಪಟ್ಟಿತು (8:3ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಆ ಪ್ರಾರ್ಥನೆಗಳಿಗೆ ಪ್ರತ್ಯುತ್ತರವಾಗಿ, ನಂಬಿಗಸ್ತರಿಗಾಗಿ ಪ್ರತೀಕಾರವನ್ನು ಸಲ್ಲಿಸುವದಕ್ಕೆ ವೇದಿಯ ಮೇಲಿಂದ ಬೆಂಕಿಯು ಬೀಸಾಡಲ್ಪಡುತ್ತದೆ. ಚಿನ್ನದ ವೇದಿಯನ್ನು ಮರುಪರಿಚಯ ಮಾಡಿರುವದು ದೇವರು ತನ್ನ ಜನರ ಮನವಿಗಳನ್ನು ಆಳಿಸುತ್ತಾನೆ ಮತ್ತು ಉತ್ತರಿಸುತ್ತಾನೆ ಎಂಬುದನ್ನು ಜ್ಞಾಪಿಸುವದಾಗಿದೆ.

ನಾಲ್ಕು ಕೊಂಬುಗಳಿಂದ ಬಂದ ಆ **ಧ್ವನಿಯ** ಮೂಲ ಯಾವದೆಂದು ತಿಳಿಸಲ್ಪಟ್ಟಿರುವದಿಲ್ಲ. 16:7ರಲ್ಲಿ, ಯಜ್ಞವೇದಿ ಸ್ವತಃ ಮಾತಾಡುತ್ತದೆ, ಮತ್ತು ಇಲ್ಲಿಯೂ ಹಾಗೆಯೇ ಇರಬಹುದಾಗಿದೆ. ಮಹತ್ವಪೂರ್ಣವಾದ ವಿವರಣೆಯು ಯಾವದೆಂದರೆ ವೇದಿಯು **ದೇವರ ಸಮ್ಮುಖದಲ್ಲಿ** ಇತ್ತು ಎಂಬುದೆ. ಕೊಂಬುಗಳಿಂದ ಬಂದ ಮಾತುಗಳು ಒಂದು ದೈವಿಕ ಆಜ್ಞೆಯಾಗಿತ್ತು.

**ವಚನ 14.** ಆ ಧ್ವನಿಯು **ತುತೂರಿಯನ್ನು ಹಿಡಿದಿದ್ದ ಆರನೆಯ ದೇವದೂತನಿಗೆ - . . . ನಾಲ್ಕು ಮಂದಿ ದೇವದೂತರನ್ನು ಬಿಚ್ಚಿಬಿಡು ಎಂದು ಹೇಳಿತು**. ಈ ಏಕೈಕ ಸಂದರ್ಭದಲ್ಲಿ ಮಾತ್ರವೇ ತುತೂರಿಯನ್ನು ಊದಿದ ದೇವದೂತನು ತಾನು ಘೋಷಿಸಿದ ಘಟನೆಯಲ್ಲಿ ಭಾಗಿಯಾಗಿರುತ್ತಾನೆ.

ಬಿಡುಗಡೆಗೊಳಿಸಲ್ಪಟ್ಟ ನಾಲ್ಕು ದೇವದೂತರು **ಯೂಫ್ರೇಟೀಸ್ ಎಂಬ ಮಹಾ ನದಿಯ ಬಳಿಯಲ್ಲಿ ಕಟ್ಟಿರುವ**ವರಾಗಿದ್ದರು. ಅನಂತರ, ಆರನೆಯ ಪಾತ್ರೆಯು "ಯೂಫ್ರೇಟೀಸ್ ಎಂಬ ಮಹಾ ನದಿಯ" ಮೇಲೆ ಸುರಿಸಲ್ಪಡಲಿತ್ತು (16:12), ಆದ್ದರಿಂದ ಈ ಸ್ಥಳವು ಮಹತ್ವಪೂರ್ಣವಾಗಿದೆ.

*ಯೆಹೂದ್ಯ*ರಿಗೆ ಸಂಬಂಧ ಪಟ್ಟ ಹಾಗೆ ಯೂಫ್ರೇಟೀಸ್ ಒಂದು ವಿಶೇಷವಾದ ಅರ್ಥವನ್ನು ಹೊಂದಿತ್ತು: ಅದು ಮೂಲತಃ ಏದೆನ್ ತೋಟದಲ್ಲಿ ಹರಿಯುತ್ತಿದ್ದ ನಾಲ್ಕು ನದಿಗಳೊಳಗೆ ಒಂದಾಗಿತ್ತು (ಆದಿಕಾಂಡ 2:10, 14) - ಅದು ಮಾನವನ ಪ್ರಥಮ ನಿವಾಸ ಮತ್ತು ಮಾನವನು ಮೊದಲ ಬಾರಿಗೆ ಪಾಪ ಮಾಡಿದ್ದ ಸ್ಥಳವಾಗಿತ್ತು (ಆದಿಕಾಂಡ 3). ಅದು ಅಬ್ರಹಾಮನಿಗೆ ವಾಗ್ದಾನ ಮಾಡಿದ್ದ ಮತ್ತು ಅನಂತರ ಆತನ ಸಂತತಿಯವರಿಗೆ ಕೊಡಲ್ಪಟ್ಟ ದೇಶದ ಉತ್ತರ ದಿಕ್ಕಿನ ಗಡಿಭಾಗವಾಗಿತ್ತು (ಆದಿಕಾಂಡ 15:18; ವಿಮೋಚನಕಾಂಡ 23:31; 1 ಅರಸು 4:21). ಅದರ ಜೊತೆಯಲ್ಲಿ, ಅದು ನಿರಂತರ ಅಪಾಯದ ಮೂಲವಾಗಿತ್ತು, ಯಾಕೆಂದರೆ ಅವರ ಅತ್ಯಂಥ ಬಲಿಷ್ಠ ವೈರಿಗಳು ನದಿಯ ಆಚೆಯ ದಡದಲ್ಲಿ ಹೊಂಚು ಹಾಕಿ ತಿರುಗಾಡುತ್ತಿದ್ದರು. ಯೂಫ್ರೇಟೀಸ್ ನದಿಯು ದೇವರು ಇಸ್ರಾಯೇಲ್ಯರ ಪಾಪಗಳಿಗಾಗಿ ಅವರನ್ನು ದಂಡಿಸುವೆನೆಂದು ಹೇಳಿದ ಬೆದರಿಕೆಗಳೊಳಗೆ ಪ್ರಸ್ತಾಪಿಸಲ್ಪಟ್ಟಿತ್ತು (ನೋಡಿರಿ ಯೆಶಾಯ 8:5-8; ಯೆರೆಮೀಯ 46:10). ಅಶ್ಶೂರ್ಯರು ಮತ್ತು ಬಾಬಿಲೋನಿಯರು ಅಂತಿಮವಾಗಿ ಯೂಫ್ರೇಟೀಸ್ ನದಿಯನ್ನು ದಾಟಿಕೊಂಡು ಬಂದು ಉತ್ತರದಲ್ಲಿನ ಹಾಗೂ ದಕ್ಷಿಣದಲ್ಲಿನ ರಾಜ್ಯಗಳನ್ನು ವಶಪಡಿಸಿಕೊಂಡಿದ್ದರು - ಇದು ಯೆಹೂದ್ಯರ ಅತ್ಯಂಥ ಹೀನಾಯವಾದ ಅವಮಾನವಾಗಿತ್ತು.

ಅಲ್ಲದೆ ಯೂಫ್ರೇಟೀಸ್ ನದಿಯು *ರೋಮಾಯ*ರಿಗೆ ಸಹ ಮಹತ್ವಪೂರ್ಣತೆಯನ್ನು ಹೊಂದಿತ್ತು: ಪಾರ್ಥಿಯವು ಇನ್ನೊಂದು ದಡದಲ್ಲಿತ್ತು, ಅದು ರೋಮನ್ ಸಾಮ್ರಾಜ್ಯದ ಮುಂದಿನ ಪಡೆಯ ಮೇಲೆ ಪರಿಣಾಮವನ್ನುಂಟು ಮಾಡಬಲ್ಲ ಏಕೈಕ ಮಿಲಿಟರಿ ಶಕ್ತಿಯಾಗಿತ್ತು. ಪಾರ್ಥಿಯವು ಜಗತ್ತಿನಲ್ಲಿಯೇ ಅತ್ಯಂಥ ಭಯವನ್ನು ಹುಟ್ಟಿಸುತ್ತಿದ್ದ ರಾವುತಪಡೆಯಾಗಿತ್ತು.

ಕ್ರಿ.ಶ. 53ರಲ್ಲಿ ಪಾರ್ಥಿಯನ್ನರು ಕೈಗಳಲ್ಲಿ Crassusನು ಹೀನಾಯವಾದ ಸೋಲನ್ನು ಅನುಭವಿಸಿದ ನಂತರದಲ್ಲಿ, "ಯೂಫ್ರೇಟೀಸ್ ಎಂಬ ಮಹಾ ನದಿಯ" ಆಚೆ ದಡಲ್ಲಿ "ಮೂಡಣ ದಿಕ್ಕಿನಿಂದ ಬರುವ ರಾಜರು" (16:12) ದಾಳಿಯನ್ನು ಮಾಡುವರೆಂಬ ಯೋಚನೆಯೊಂದೇ ಸಾಕು ಅದು ಒಬ್ಬ ರೋಮನ್ ಸೇನಾಧಿಪತಿಯಲ್ಲಿ ನಡುಕುವನ್ನುಂಟು ಮಾಡುತ್ತಿತ್ತು.

Ray Summersನು ಗಮನಕ್ಕೆ ತರುವದೇನೆಂದರೆ ಮೂರು ಕಾರಣಾಂಶಗಳು ರೋಮನ್ ಸಾಮ್ರಾಜ್ಯವು ಕಿತ್ತೇಸೆಯಲ್ಪಡುವದಕ್ಕೆ ಒಂದುಗೂಡಿದ್ದವು: ಪ್ರಾಕೃತಿಕ ವಿಕೋಪ, ಆಂತರಿಕ ಕೊಳೆತ, ಮತ್ತು ಬಾಹ್ಯ ದಾಳಿ. ಮೊದಲ ನಾಲ್ಕು ತುತೂರಿಗಳು ಪ್ರಾಕೃತಿಕ ವಿಕೋಪಗಳನ್ನು ಒಳಗೊಂಡಿದ್ದವು ಎಂದು ಆತನು ಗಮನಕ್ಕೆ ತರುತ್ತಾನೆ ಮತ್ತು ಐದನೆಯ ತೂತೂರಿಯ ಮಿಡತೆಗಳು ಆಂತರಿಕ ಕೊಳೆತಕ್ಕೆ ಸಾದೃಶ್ಯವಾಗಿರುತ್ತದೆಂದು ಪ್ರಸ್ತಾಮ ಮುಂದಿಡುತ್ತಾನೆ. ಆತನು ಬಳಿಕ ಆರನೆಯ ತುತೂರಿಯು ಮೂರನೆಯ ಕಾರಣಾಂಶವನ್ನು - ಬಾಹ್ಯ ದಾಳಿ - ಪ್ರತಿನಿಧಿಸುತ್ತದೆಂದು ಘೋಷಿಸಿದನು.[26] ಈ ಅನ್ವಯಿಸುವಿಕೆಯು ಸಂಭವವಿರುತ್ತದೆ.

ಹೇಗೂ, ಇಲ್ಲಿ ಭಾಷೆಯು ಸಾಂಕೇತಿಕವಾಗಿದೆಯೇ, ಹೊರತು ಅಕ್ಷರಶಃ ಅಲ್ಲ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಿರಿ. ಅಪೊಸ್ತಲನು ಅಷ್ಟಾಗಿ ಒಂದು ನಿರ್ದಿಷ್ಟವಾದ ಭೌಗೋಳಿಕ ಸ್ಥಳವನ್ನು ಮತ್ತು ಒಂದು ನಿಖರವಾದ ದಾಳಿಯಿಡುವ ಸೈನ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆಯಲಿಲ್ಲ, ಆದರೆ ಹತ್ತಿರದಲ್ಲಿಯೇ ಒಂದು *ಅಪಾಯವು* - *ಪಾಪದ ನಿಮಿತ್ತವಾಗಿ* ಒಂದು ಸನ್ನಿಹಿತವಾಗಿರುವ ಅಪಾಯ - ನುಸುಳಾಡುತ್ತಿದೆ ಎಂಬ ಭಾವನೆಯನ್ನು ಮನಸ್ಸಿನಲ್ಲಿ ಹೊಂದಿದ್ದನು. ಯೂಫ್ರೇಟೀಸ್ ಆಚೆಯಲ್ಲಿದ್ದ ಸೈನ್ಯವು "ಯಾವದೇ ಮಾನವ ಸೈನ್ಯಕ್ಕಿಂತಲೂ ಎಷ್ಟೋ ಅಧಿಕವಾಗಿ ಭಯಾನಕವಾಗಿತ್ತು. ಅದೊಂದು ಅತಿಮಾನುಷ, ಖಂಡಿತವಾಗಿಯೂ ಒಂದು ನರಕದಂಥ ದಂಡು [ಆಗಿತ್ತು]."[27]

**ವಚನ 15.** ಆರನೆಯ ತುತೂರಿಯನ್ನು ಹೊಂದಿದ್ದ ದೇವದೂತನಿಗೆ ಕೊಡಲಾದ ಅಪ್ಪಣೆಗಳನ್ನು ಕಾರ್ಯರೂಪಕ್ಕೆ ತರಲಾಯಿತು: **ಆಗ ಮನುಷ್ಯರೊಳಗೆ ಮೂರರಲ್ಲಿ ಒಂದು ಭಾಗದ ಜನರನ್ನು ಸಂಹಾರಮಾಡುವದಕ್ಕಾಗಿ ಅದೇ ವರುಷ ಅದೇ ತಿಂಗಳು ದಿನ ತಾಸಿಗೆ ಸಿದ್ಧವಾಗಿದ್ದ ಆ ನಾಲ್ಕು ಮಂದಿ ದೇವದೂತರನ್ನು ಬಿಚ್ಚಿಬಿಟ್ಟರು.**

15ನೇ ವಚನದಲ್ಲಿ, *ಯಾವಾಗ* ವಿವರಣೆಯು ಸೂಚಕವಾಗಿರುತ್ತದೆ: ನಾಲ್ಕು ದೇವದೂತರು **ಅದೇ ವರುಷ ಅದೇ ತಿಂಗಳು ದಿನ ತಾಸಿಗೆ ಸಿದ್ಧವಾಗಿದ್ದರು.** ಈ ಪರಿಭಾಷೆಯು ಒಂದು *ನಿರ್ದಿಷ್ಟವಾದ* ಸಮಯವನ್ನು - "ದೇವರ ಮನಸ್ಸಿನಲ್ಲಿ ನಿಗದಿಯಾಗಿರುವ"[28] ಒಂದು ವಿಶೇಷವಾದ ಸಮಯ - ಕುರಿತು ಮಾತಾಡುವ ಒಂದು ನಾಟಕೀಯವಾದ ರೀತಿಯಾಗಿರುತ್ತದೆ. NIVಯಲ್ಲಿ "ಇದೇ ಗಳಿಗೆ ಮತ್ತು ದಿನ ಮತ್ತು ತಿಂಗಳು ಹಾಗೂ ವರುಷಕ್ಕಾಗಿ" ಎಂದಿರುತ್ತದೆ. SEBಯಲ್ಲಿ "*ಸರಿಯಾಗಿ* ಇದೇ ವರ್ಷದ *ಸರಿಯಾಗಿ* ಇದೇ ತಿಂಗಳಿನ *ಸರಿಯಾಗಿ* ಇದೇ ದಿನದ *ಸರಿಯಾಗಿ* ಇದೇ ತಾಸಿಗೆ" ಎಂದಿರುತ್ತದೆ. ಈ ಪದವಿನ್ಯಾಸದ ಸಂದೇಶವು ಏನೆಂದರೆ ದೇವರು ಅಧಿಕಾರದಲ್ಲಿದ್ದಾನೆ ಎಂಬುದೆ. ಆತನ ವೇಳಾಪಟ್ಟಿಯು ಆತನಿಗೆ ಮಾತ್ರವೇ ತಿಳಿದಿರುತ್ತದೆ (ನೋಡಿರಿ ಮತ್ತಾಯ 24:36; ಅಪೊಸ್ತಲರ ಕೃತ್ಯಗಳು 1:7) - ಆದರೆ ತಕ್ಕದಾದ ಸಮಯದಲ್ಲಿ, ಆತನ ಯೋಜನೆಗಳು ಜಾರಿಗೆ ತರಲ್ಪಡುತ್ತವೆ. ಆತನ ಜನರು ಅದರಲ್ಲಿ ಭರವಸವನ್ನಿಡಬಹುದು.

*ಏಕೆ* ಎಂಬುದರ ವಿವರಣೆಯು ಕುತೂಹಲ ಮತ್ತು ಕಳವಳಕಾರಿಗಳೆರಡೂ ಆಗಿರುತ್ತದೆ: **ಮನುಷ್ಯರೊಳಗೆ ಮೂರರಲ್ಲಿ ಒಂದು ಭಾಗದ ಜನರನ್ನು ಸಂಹಾರಮಾಡುವದಕ್ಕಾಗಿ** ದೇವದೂತರು ಬಿಚ್ಚಿಬಿಡಲ್ಪಟ್ಟರು. ಮೊಟ್ಟಮೊದಲ ಬಾರಿಗೆ, ಮಾನವರ ಮರಣವನ್ನು

ಒಳಗೊಂಡ ನಿರ್ದಿಷ್ಟ ಉದ್ದೇಶವುಳ್ಳ ಒಂದು ತುತೂರಿಯನ್ನು ಕಾಣುತ್ತೇವೆ. ಮೊದಲ ನಾಲ್ಕು ತುತೂರಿಗಳು ನೇರವಾಗಿ ಪ್ರಾಕೃತಿಕ ಜಗತ್ತಿನ ಕಡೆಗೆ ಗುರಿಯನ್ನು ಹೊಂದಿದ್ದವು ಮತ್ತು ಮನುಷ್ಯರು ಪರೋಕ್ಷವಾಗಿ ಬಾಧೆಯನ್ನನುಭವಿಸಿದರು. ಐದನೆಯ ತುತೂರಿಯು ಮನುಷ್ಯರನ್ನು ಗುರಿಯಾಗಿಸಿತ್ತು, ಆದರೆ ಮಿಡತೆಗಳಿಗೆ "ಕೊಲ್ಲದೆ . . . ಪೀಡಿಸುವದಕ್ಕೆ ಅಪ್ಪಣೆಯಾಯಿತು" (ವ. 5). ಅದಕ್ಕೆ ತದ್ವಿರುದ್ಧವಾಗಿ, ಸ್ಪಷ್ಟವಾಗಿ ಘೋಷಿಸಲ್ಪಟ್ಟ ಐದನೆಯ ತುತೂರಿಯ ಉದ್ದೇಶವು ಮಾನವರೊಳಗೆ ಮೂರನೆಯ ಒಂದು ಭಾಗವನ್ನು ಸಂಹಾರ ಮಾಡುವದಾಗಿತ್ತು.

ಪ್ರಕಟನೆ 8:7-12ರಲ್ಲಿ, "ಭೂಮಿಯೊಳಗೆ ಮೂರರಲ್ಲಿ ಒಂದು ಭಾಗ ಸುಟ್ಟುಹೋಯಿತು" (ಮೊದಲನೆಯ ತುತೂರಿ), "ಸಮುದ್ರದೊಳಗೆ ಮೂರರಲ್ಲಿ ಒಂದು ಭಾಗವು ರಕ್ತವಾಯಿತು" (ಎರಡನೆಯ ತುತೂರಿ), ಮತ್ತು ಸೂರ್ಯ, ಚಂದ್ರ, ನಕ್ಷತ್ರಗಳೊಳಗೆ ಮೂರರಲ್ಲಿ ಒಂದು ಭಾಗ ಹೊಡೆಯಲ್ಪಟ್ಟವು (ಮೂರನೆಯ ತುತೂರಿ). "ಮೂರರಲ್ಲಿ ಒಂದು ಭಾಗ" ವು ಭಾಗಶಃ ನ್ಯಾಯತೀರ್ಪನ್ನು ಸೂಚಿಸುತ್ತದೆಂದು ಒತ್ತಿ ಹೇಳಿದೆವು. ಮತ್ತೊಂದಾವರ್ತಿ, 9:15 ರಲ್ಲಿ, ನ್ಯಾಯತೀರ್ಪು ಭಾಗಶಃ ಆಗಿರುವದನ್ನು ಕಾಣುತ್ತೇವೆ: ಇಡೀ ಮಾನವ ಜನಾಂಗವು ನಾಶಗೊಳ್ಳಲಿಲ್ಲ, ಆದರೆ "ಕೇವಲ" ಮೂರನೆಯ ಒಂದು ಭಾಗ. ಮೂರನೆಯ ಎರಡು ಭಾಗದ ಜನರು ಯಾವದೇ ಅಪಾಯವಿಲ್ಲದೆ ಉಳಿದುಕೊಂಡರು (ವ. 20). ಈ ಮೂರನೆಯ ಎರಡು ಭಾಗದ ಜನರ ಬಗ್ಗೆಯೇ ದೇವರು ಕಳಕಳಿ ಹೊಂದಿದ್ದನು, ಇವರು ಪಶ್ಚಾತ್ತಾಪ ಪಡುವರೆಂದು ದೇವರು ನಿರೀಕ್ಷಿಸಿದ್ದನು.

ಈ ವಾಕ್ಯದಲ್ಲಿ ಅತ್ಯಂಥ ಒಗಟಿನಿಂದ ಕೂಡಿದ ಅಂಶವೆಂದರೆ *ಯಾರು* ಎಂಬುದೆ: ಆ **ನಾಲ್ಕು ಮಂದಿ ದೇವದೂತರನ್ನು ಬಿಚ್ಚಿಬಿಟ್ಟರು**. ಇವರು ನಾಶನದ ಗಾಳಿಗಳನ್ನು ಹಿಡಿದಿಟ್ಟುಕೊಂಡಿದ್ದ ಅದೇ ನಾಲ್ಕು ದೇವದೂತರಾಗಿದ್ದರು (7:1) ಎಂದು ನಂಬುವದಕ್ಕೆ ಯಾವದೇ ಕಾರಣವಿಲ್ಲವಾದರೂ, ಇವರು ಅವರಲ್ಲ ಎಂಬುದಕ್ಕೆ ಹಲವಾರು ಕಾರಣಗಳಿರುತ್ತವೆ. 7ನೇ ಅಧ್ಯಾಯದ ದೇವದೂತರು ನಿಗ್ರಹಿಸುವದನ್ನು *ಮಾಡಿದರೆ*, 9ನೇ ಅಧ್ಯಾಯದಲ್ಲಿರುವವರು ಸ್ವತಃ ನಿಗ್ರಹಿಸ*ಲ್ಪಟ್ಟಿದ್ದರು*. ಅಲ್ಲದೆ, ಎರಡು ಗುಂಪಿನವರು ಸಹ ಬೇರೆ ಬೇರೆ ಸ್ಥಳಗಳಲ್ಲಿದ್ದರು. ಹೇಗೂ, ಎರಡು ಗುಂಪುಗಳ ದೇವದೂತರು ಒಂದೇ ಆಗಿದ್ದರೋ ಅಥವಾ ಅವರು "ಒಳ್ಳೇವರು" ಇಲ್ಲವೆ "ಕೆಟ್ಟವರು" ಆಗಿದ್ದರೋ ಎಂಬುದು ಅಮುಖ್ಯವಾಗಿರುತ್ತದೆ. ಅವರು ಯಾರಾಗಿದ್ದರು ಮತ್ತು ಏನಾಗಿದ್ದರೋ, ಅವರು ದೇವರ ನಿಯಂತ್ರಣದಲ್ಲಿದ್ದರು ಮತ್ತು ಆತನ ಮಾತನ್ನು ಪಾಲಿಸುವವರಾಗಿದ್ದರು ಎಂಬದಂತೂ ನಿಜವಾಗಿರುತ್ತದೆ. *ನಾಲ್ಕು* ದೇವದೂತರು ಇದ್ದರೆಂಬ ವಾಸ್ತವಾಂಶವು ಅವರ ಕ್ರಿಯೆಯು ಇಡೀ ಭೂಮಿಯ ಕಡೆಗೆ ಆಗಿತ್ತು ಎಂಬುದನ್ನು ಸೂಚಿಸುತ್ತದಷ್ಟೆ.

**ವಚನ 16.** 16ನೇ ವಚನದಲ್ಲಿ ಒಂದು ಗೊಂದಲವನ್ನುಂಟು ಮಾಡುವ ಸ್ಥಿತ್ಯಂತರವಾಗುತ್ತದೆ. ದೇವದೂತರು ಒಂದು ವಿಶೇಷವಾದ ಕೆಲಸವನ್ನು ಮುಗಿಸುವದಕ್ಕಾಗಿ ಸಿದ್ಧವಾಗಿ ಬಂಧಿಸಿಡಲ್ಪಟ್ಟಿದ್ದರು. ಅವರಿಗೆ ಅಪ್ಪಣೆಗಳನ್ನು ಕೊಟ್ಟು ಬಿಚ್ಚಿ ಬಿಡಲಾಗಿತ್ತು. ದೇವದೂತರು ತಮಗೆ ನೀಡಲಾದ ಆದೇಶವನ್ನು ಕಾರ್ಯರೂಪಕ್ಕೆ ತರುವದರ ಕುರಿತು ಒಬ್ಬನು 16ನೇ ವಚನದಲ್ಲಿ ಓದುತ್ತೇನೆಂದು ನಿರೀಕ್ಷಿಸಿರಬಹುದಾಗಿದೆ. ಬದಲಾಗಿ, ನಮಗೆ ಅಲ್ಲಿ **ಕುದುರೇ ದಂಡಿನವರ ಸಂಖ್ಯೆಯು ಇಪ್ಪತ್ತುಕೋಟಿ ಎಂದು** ಹೇಳಲ್ಪಡುತ್ತದೆ. ಆ ಕುದುರೆ ಸವಾರರು ಎಲ್ಲಿಂದ ಬಂದರು? ದೇವದೂತರಿಗೆ ಏನು ಸಂಭವಿಸಿತು? ನಾಲ್ಕು ಮಂದಿ ದೇವದೂತರು ದೃಶ್ಯದಿಂದ ಕಾಣೆಯಾಗುತ್ತಾರೆ, ಅವರ ಕುರಿತು ಮುಂದೆಂದೂ ಪುನಃ

ಪ್ರಸ್ತಾಪಿಸಲ್ಪಡುವದಿಲ್ಲ.

ಆ ನಾಲ್ಕು ಮಂದಿ ದೇವದೂತರು ಕುದುರೆ ದಂಡಿವರಿಗೆ *ಮುಖ್ಯಸ್ಥರಾಗಿದ್ದರು* ಮತ್ತು ಅವರನ್ನು ಯೂಫ್ರೇಟೀಸ್ ನದಿಯನ್ನು ದಾಟುವಂತೆ ನಡಿಸಿದರು ಎಂದು ಬಹುಪಾಲು ವ್ಯಾಖ್ಯಾನಕಾರರು ಭಾವಿಸುತ್ತಾರೆ. ಅದು ಇರಬಹುದು, ಆದರೆ ಆ ರೀತಿಯಾಗಿಯೇ ಇರುತ್ತದೆಂಬುದಾಗಿ ವಾಕ್ಯಭಾಗದಲ್ಲಿ ಯಾವ ಸುಳಿವೂ ಇರುವದಿಲ್ಲ. ದರ್ಶನಗಳಿಗೆ ಕನಸಿನಂತಹ, ಬದಲಾಗಬಲ್ಲ ಗುಣವು ಇರುತ್ತದೆಂಬುದರ ಬೆಳಕಿನಲ್ಲಿ ಯೋಚಿಸುವದಾದರೆ, ಅಲ್ಲಿ ಇನ್ನೊಂದು ಸಾಧ್ಯತೆಯು ಇರುತ್ತದೆ. ದೇವದೂತರಿಗೆ ಕೊಡಲ್ಪಟ್ಟದ್ದ ಆದೇಶವು "ಮನುಷ್ಯರೊಳಗೆ ಮೂರನೆಯ ಒಂದು ಭಾಗದ ಜನರನ್ನು ಸಂಹಾರಮಾಡುವದು" ಆಗಿತ್ತು (ವ. 15), ಆದರೆ ಆದೇಶವನ್ನು ಯಾರು ಕಾರ್ಯರೂಪಕ್ಕೆ ತಂದರು? ಕುದುರೆ-ಸವಾರರು ಮತ್ತು ಅವರ ಕುದುರೆಗಳು (ವಚನಗಳು 16-18). ಆದದರಿಂದ, ದೇವದೂತರು ಹಾಗೂ ಸೈನ್ಯ ತದ್ರೂಪವಾಗಿರುವ ಸಾಧ್ಯತೆಯಿರುತ್ತದೆ. Robert Mulhollandನು ಹೀಗೆ ಬರೆದನು, "ದರ್ಶನಿಕ ಅನುಭವದಲ್ಲಿ ಬಹಳ ಸಾಮಾನ್ಯವಾಗಿರುವಂತಹ ಆ ಚಿತ್ರಣಗಳ ಸಮನ್ವಯಗೊಳಿಸುವಿಕೆಯಲ್ಲಿ, ನಾಲ್ಕು ಮಂದಿ ದೇವದೂತರು *ಏಕಾಏಕಿ* ಒಂದು ಅದ್ಭುತವಾದ ಕುದುರೇ ಸವಾರರಾಗಿ *ಮಾರ್ಫ್‌ಟ್ಟರು.*"[29]

ಆಧುನಿಕ ಸಿನಿಮಾ-ತಯಾರಿಕೆಯಲ್ಲಿ "morphing" ಎಂಬ ವಿಶೇಷ ಪರಿಣಾಮ ನೀಡುವ ತಂತ್ರಜ್ಞಾನವು ಬಳಸಲ್ಪಡುತ್ತದೆ, ಅದು ಒಬ್ಬ ವ್ಯಕ್ತಿಯನ್ನು (ಅಥವಾ ವಸ್ತುವನ್ನು) ದೃಶ್ಯಾತ್ಮಕವಾಗಿ ಬೇರೊಬ್ಬ ವ್ಯಕ್ತಿಯಾಗಿ (ಅಥವಾ ಯಾವದೋ ವಸ್ತುವಾಗಿ) ನಿಧಾನವಾಗಿ ರೂಪಾಂತರಗೊಳಿಸುವ ತಂತ್ರವಾಗಿರುತ್ತದೆ. "Morph" ಎಂಬುದು metamorphosis ಎಂಬ ಪದದ ಕ್ಲುಪ್ತ ರೂಪವಾಗಿದ್ದು, ಅದು "ಆಕಾರ ಅಥವಾ ರೂಪದಲ್ಲಿ ಒಂದು ಬದಲಾವಣೆ" ಎಂಬ ಅರ್ಥವನ್ನು ಕೊಡುತ್ತದೆ. "Metamorphosis" ಎಂಬುದು ಗ್ರೀಕ್ ಭಾಷೆಯ μεταμόρφωσις ಎಂಬುದರ ಲಿಪ್ಯಂತರಣವಾಗಿದೆ. ಗತಕಾಲದ ದಿನಗಳಲ್ಲಿ, ಸಿನಿಮಾ ರೂಪಾಂತರಗಳನ್ನು stop-frame ಎಂಬ ಪ್ರಕ್ರಿಯೆಯಿಂದ ಸಾಧಿಸಲಾಗುತ್ತಿತ್ತು, ಇದು ಸಂಕೋಚನದಿಂದ ಕೂಡಿರುತ್ತಿತ್ತು. ಆಧುನಿಕ "morphing" (ಆಕಾರ ರೂಪಾಂತರಣ) ವನ್ನು ಕಂಪ್ಯೂಟರಗಳ ಮೂಲಕ ಸಾಧಿಸಲ್ಪಡುತ್ತದೆ. ಒಬ್ಬನು 9ನೇ ಅಧ್ಯಾಯದಲ್ಲಿನ ನಂತರದ ಭಾಗದೊಳಗಿನ ದೃಶ್ಯವನ್ನು ಊಹಿಸಿಕೊಳ್ಳುವ ವೇಳೆ, ದೇವದೂತರ ಆಕಾರವು ಒಂದು ದೊಡ್ಡ ಸೈನ್ಯವಾಗಿ ಮಾರ್ಫಟ್ಟು ಆತನ ಮುಂದೆ ನಿಲ್ಲುವ ತನಕ ಅವರ ರೂಪವು ಅಲುಗಾಡಿ, ಬದಲಾಗಿ, ರೂಪಾಂತರಗೊಳ್ಳುವದನ್ನು ಕಾಣಬೇಕಾಗಬಹುದು.

ಯೋಹಾನನು "ಮೂಕವಿಸ್ಮಿತಗೊಳಿಸುವ, ಹಾವಿನ ಬಾಲದಂತವುಗಳನ್ನು ಹೊಂದಿದ್ದ ಕುದುರೆಗಳು ಮೆಸೋಪೊತಾಮ್ಯದಿಂದ ರಭಸವಾಗಿ ಬರುವದನ್ನು"[30] ಕಲ್ಪಿಸಿಕೊಳ್ಳುವ ವೇಳೆ, ಅಪೊಸ್ತಲನು ಮೊದಲು ಆ ಸೈನ್ಯದಲ್ಲಿ **ಇಪ್ಪತ್ತುಕೋಟಿ** ಕುದುರೆ ಸವಾರರಿದ್ದರೆಂದು ಹೇಳುತ್ತಾನೆ. ಈ ಸಂಖ್ಯೆಯು ಪ್ರಕಟನೆ ಪುಸ್ತಕದಲ್ಲಿಯೇ ಅತ್ಯಂಥ ಬೃಹತ್ ಸಂಖ್ಯೆಗಳಲ್ಲೊಂದಾಗಿದೆ. "ರೂಢಿಯಲ್ಲಿರುವ ಪ್ರಕಾರ ಸಾಲಾಗಿ ನಿಲ್ಲಿಸುವದಾದಲ್ಲಿ, ಈ ರಾವುತಪಡೆಯು ಒಂದು ಮೈಲು ಅಗಲ ಹಾಗೂ ಎಂಭತ್ತೈದು ಮೈಲುಗಳಷ್ಟು ಉದ್ದವಾಗಿ ಇರುವದಾಗಿರುತ್ತದೆ!"[31] ಅಂಥ ಬೃಹತ್ ಸಮೂಹವನ್ನು ಲೆಕ್ಕ ಮಾಡುವದು ಯೋಹಾನನಿಗೆ ಅಸಾಧ್ಯವಾಗಿರುತ್ತದೆ. ಆತನು 144,000 ಜನರನ್ನು (7:4) ಕಂಡಾಗಲೂ ಹಾಗೆಯೇ ಆಗಿತ್ತು, ಆತನು **ಅವರ ಸಂಖ್ಯೆಯು ಪ್ರಸಿದ್ಧವಾದಾಗ ಕೇಳಿದೆನು** ಎಂದು ಹೇಳುತ್ತಾನೆ. ಯಾರೋ ಒಬ್ಬರು, ಬಹುಶಃ ಒಬ್ಬ ದೇವದೂತನು ಆತನಿಗೆ ಆ ಒಟ್ಟು ಸಂಖ್ಯೆಯನ್ನು ತಿಳಿಸಿರಬಹುದು.

ಸಂಖ್ಯೆಯನ್ನು ಅಕ್ಷರಶಃ ತೆಗೆದುಕೊಳ್ಳಬಾರದು. ಮುಂದಿನ ವಚನವು ಈ ಬೃಹತ್ ಸೈನ್ಯವು *ಒಂದು ದರ್ಶನ*ದಲ್ಲಿ ಕಂಡಿತೆಂದು ಹೇಳಲ್ಪಡುತ್ತದೆ. "ಎರಡು" ಬಲವನ್ನು ಸೂಚಿಸುವ ಅಂಕೆಯಾಗಿದ್ದರೆ, ಹತ್ತರಿಂದ ದ್ವಿಗುಣಗೊಂಡಿರುವ "ಹತ್ತು" ತೀಕ್ಷ್ಣಗೊಂಡ ಪರಿಪೂರ್ಣತೆಯನ್ನು ಸೂಚಿಸುತ್ತದೆ. ಹೀಗೆ "ಇಪ್ಪತ್ತುಕೋಟಿ" *ಅಪರಾಜಿತ ಶಕ್ತಿ* ಯನ್ನು ಸೂಚಿಸುತ್ತದೆ. ಕೀರ್ತನೆ 68:17 ರಲ್ಲಿ ದೇವರ ಸೈನ್ಯವನ್ನು ಸೂಚಿಸುವಾಗ ಅದೇ ರೀತಿಯ ಸಂಖ್ಯೆಯು ಬಳಸಲ್ಪಟ್ಟಿದೆ (ನೋಡಿರಿ ದಾನಿಯೇಲ 7:10). ಅಂತಹ ಒಂದು ಅಳತೆ ಮೀರಿದ ಸಂಖ್ಯೆಯು ಬಳಸಲ್ಪಟ್ಟಿದೆ? Jim McGuigganನು ಅದಕ್ಕೆ ಉತ್ತರಿಸುತ್ತಾನೆ, "ವೈರಿಯ ಪ್ರಾಣವೇ ಅಂಜಿ ಓಡುವಂತೆ ಮಾಡುವದಕ್ಕಾಗಿಯೇ. ತಮ್ಮ ದೇವರು ತನ್ನ ಅಧೀನದಲ್ಲಿ ಅಂತಹ ಬೃಹತ್ ಸೈನ್ಯವನ್ನು ಇಟ್ಟುಕೊಂಡಿದ್ದಾನೆಂಬುದಾಗಿ ದೇವಜನರು ಸಂಭ್ರಮ ಪಡುವಂತೆ ಮಾಡುವದಕ್ಕಾಗಿಯೇ. ದೇವರು ಹತೋಟಿಯಲ್ಲಿ ಹೊಂದಿರುವ ದಿಗ್ಭ್ರಮೆಗೊಳಿಸುವ ಅಧಿಕಾರವನ್ನು ಒತ್ತಿ ಹೇಳುವದಕ್ಕಾಗಿಯೇ."[32] ಬಹುಶಃ McGuigganನ ಮೊದಲನೆಯ ಕಾರಣಕ್ಕೆ ಒಂದು ಚಿಕ್ಕ ಬದಲಾವಣೆಯನ್ನು ಮಾಡತಕ್ಕದ್ದು: "ವೈರಿಯಲ್ಲಿ *ಪಾಪಭರಿತ*ತೆಯನ್ನು ಹೆದರಿ ಓಡುವಂತೆ ಮಾಡುವದು." ತುತೂರಿಗಳ ಒಂದು ಉದ್ದೇಶವು ಭೂನಿವಾಸಿಗಳನ್ನು ಪಶ್ಚಾತ್ತಾಪಕ್ಕೆ ನಡಿಸುವದು ಆಗಿರುತ್ತದೆ.

ಈ ವಿರೋಧಿಸಲಾಗದಂಥ ಪಡೆಯ ಕುರಿತ ದರ್ಶನವು ಯೋಹಾನನ ದಿನದ ಕ್ರೈಸ್ತರಿಗೆ ಅವರ ಹಿಂಸಕರನ್ನು ದಂಡಿಸುವದಕ್ಕಾಗಿ ಸಾಕಾಗುವಷ್ಟಕ್ಕಿಂತಲೂ ಅಧಿಕವಾದ ಸಂಪನ್ಮೂಲಗಳನ್ನು ಹೊಂದಿದ್ದಾನೆಂಬುದನ್ನು ಘೋಷಿಸಿತ್ತು. ಅದು ಪ್ರತಿಯೊಂದು ಯುಗಕ್ಕೂ ಸಾರುವದೇನೆಂದರೆ ಪಾಪವು ದೇಶಗಳಿಗೆ ಮಾತ್ರವಲ್ಲದೆ ವ್ಯಕ್ತಿಗಳಿಗೆ ಸಹ ಭಯಂಕರ ಮತ್ತು ಅಧೀನಪಡಿಸಿಕೊಳ್ಳುವಂಥ ಪರಿಣಾಮಗಳನ್ನು ಉಂಟು ಮಾಡುವದಾಗಿದೆ ಎಂಬುದೆ.

**ವಚನ 17.** ಯೋಹಾನನು ಸವಾರರು ಹಾಗೂ ಅವರ ಕುದುರೆಗಳ ಬಣ್ಣನೆಯನ್ನು ಮಾಡುವದಕ್ಕೆ ಸಿದ್ಧನಿದ್ದನು. ಆತನು ಹಾಗೆ ಮಾಡುವದಕ್ಕೆ ಮುನ್ನ, ಆತನು **ನಾನು ದರ್ಶನದಲ್ಲಿ ಕಂಡ . . . ವಿವರಣೆ ಹೇಗಂದರೆ** ಎಂದು ವಿವರಿಸುತ್ತಾನೆ.

> ಪ್ರಕಟನೆ ಪುಸ್ತಕದೊಳಗೆ ಇಲ್ಲಿ ಮಾತ್ರವೇ ಯೋಹಾನನು ಈ ಪ್ರಕಟನೆಗಳು ತನಗೆ ದರ್ಶನದ ಮೂಲಕವಾಗಿ ತಿಳಿಯಪಡಿಸಲ್ಪಡುತ್ತಿವೆ ಎಂಬುದನ್ನು ನಿರ್ದಿಷ್ಟವಾಗಿ ಸೂಚಿಸುತ್ತಾನೆ. ಈ ಹೇಳಿಕೆಯು "ಅವಶ್ಯಕತೆಗಿಂತ ಅಧಿಕವಾಗಿ ಸೇರ್ಪಡೆ" ಗೊಳಿಸಿದ್ದಲ್ಲ . . . ಆದರೆ ಆತನು ನೀಡುವ ವರ್ಣನೆಗಳು ಅತ್ಯಂಥ ಸಾಂಕೇತಿಕವಾಗಿರುವದಕ್ಕೆ ಸೂಕ್ತವಾಗಿರುತ್ತವೆಂಬುದನ್ನು ಸೂಚಿಸುವದಕ್ಕಾಗಿಯೇ ಆಗಿದೆ.[33]

ಯೋಹಾನನು ತನ್ನ ದರ್ಶನದಲ್ಲಿ **ಕುದುರೆಗಳ ಮತ್ತು ಸವಾರರ** ವಿಷಯವಾಗಿ ಏನನ್ನು ಕಂಡನು? ಮೊದಲನೆಯದಾಗಿ, ಆತನು ಕಂಡದ್ದೇನೆಂದರೆ **ಸವಾರರ ಕವಚಗಳ ಬಣ್ಣವು ಬೆಂಕಿ ಹೊಗೆ ಗಂಧಕ ಇವುಗಳ ಬಣ್ಣದ ಹಾಗಿತ್ತು. ಸವಾರರ** ಎಂಬ ಪದಗುಚ್ಛವು ಅನುವಾದಕರಿಂದ ಸೇರ್ಪಡೆಗೊಳಿಸಿದ್ದಾಗಿದೆ. ಮೂಲ ವಾಕ್ಯವು ಸವಾರರೋ, ಕುದುರೆಗಳೋ, ಅಥವಾ ಇಬ್ಬರೂ **ಕವಚಗಳನ್ನು** ಹೊಂದಿದ್ದರೋ ಎಂಬುದನ್ನು ಸ್ಪಷ್ಟವಾಗಿ ತಿಳಿಸುವದಿಲ್ಲ. ಪಾರ್ಥಿಯನ್ನರ ಸೈನ್ಯದಲ್ಲಿ, ಸವಾರರು ಹಾಗೂ ಕುದುರೆಗಳಿಬ್ಬರೂ ಎದೆಕವಚಗಳನ್ನು ಧರಿಸಿರುತ್ತಿದ್ದರು.

ದರ್ಶನವು ಪ್ರಾಥಮಿಕವಾಗಿ ಮೂರು ಬಣ್ಣಗಳನ್ನು ಬಳಸುವಂತೆ ತೋರುತ್ತದೆ: ಕೆಂಪು, ಹಳದಿ, ಮತ್ತು ನೀಲಿ. **ಬೆಂಕಿ**ಯ ಬಣ್ಣವು ಕೆಂಪಾಗಿರುವದು. **ಗಂಧಕ** ಎಂಬುದು ಹಳದಿ ಬಣ್ಣದಲ್ಲಿರುವ ಸ್ಫಟಿಕಕ್ಕೆ ಬಳಸುವ ಹಳೇ ಆಂಗ್ಲದ ಪದವಾಗಿರುತ್ತದೆ. **ಹೊಗೆ** (ಹೆಯಸಿಂತ್) ಹೂ ನೀಲಿ ಬಣ್ಣದ್ದಾಗಿರುತ್ತದೆ. "ಹೆಯಸಿಂತ್" ಎಂಬುದು ὑακίνθινος (*huakinthinos*) ಎಂಬ

ಗ್ರೀಕ್ ಪದದ ಅನುವಾದಿತ ರೂಪವಾಗಿದೆ. ಅದಕ್ಕೆ ಸಂಬಂಧಿತ ಪದವಾದ ὑάκινθος (*huakinthos*) ಎಂಬುದು ನೀಲಿ ಬಣ್ಣವಿರುವ ಒಂದು ಮುತ್ತಿನ ಕಲ್ಲನ್ನು ಸೂಚಿಸುತ್ತದೆ. ಈ ಹರಳನ್ನು "ಹೆಯಸಿಂತ್" ಅಥವಾ "ನೀಲಸ್ಫಟಿಕ" ಎಂದು ಕರೆಯಲಾಗುತ್ತದೆ (ನೋಡಿರಿ 21:20). *Huakinthinos* ಎಂಬ ಪದವು ನೀಲಿಯ ಕಂದು ಬಣ್ಣವನ್ನು ಸೂಚಿಸಬಹುದಾಗಿದೆ. 17ನೇ ವಚನದ ಕಡೇ ಭಾಗವು "ಹೆಯಸಿಂತ್" ಕ್ಕೆ ಸಮಾನವಾಗಿ "ಹೊಗೆ" ಎಂಬ ಪದವನ್ನು ಬಳಸುತ್ತದೆ, ಆದ್ದರಿಂದ ಬಣ್ಣವನ್ನು ಹೊಗೆಯಿಂದ ಕೂಡಿದ ನೀಲಿ ಬಣ್ಣ ಎಂದು ತಿಳಿಯಬಹುದು. NCV ತರ್ಜುಮೆಯಲ್ಲಿ "ಅವರು ಬೆಂಕಿಯಂತೆ ಕೆಂಪು, ಕಡು ನೀಲಿ, ಮತ್ತು ಸ್ಫಟಿಕದಂತೆನ ಹಳದಿಯಾಗಿದ್ದ ಎದೆಕವಚಗಳನ್ನು ಧರಿಸಿದ್ದರು" ಎಂದಿರುತ್ತದೆ. ಹೇಗೂ, **ಬಣ್ಣ** ಎಂಬ ಪದಗುಚ್ಛವು 17ನೇ ವಚನದಲ್ಲಿ ಅನುವಾದಕರಿಂದ ಸೇರ್ಪಡೆಗೊಳಿಸಲ್ಪಟ್ಟಿದೆ ಎಂಬುದನ್ನು ಗಮನಿಸತಕ್ಕದ್ದು. ಆದ್ದರಿಂದ ಕೆಲವರು ಎದೆಕವಚನಗಳನ್ನು ಕೇವಲ "ಬೆಂಕಿ" ಹಾಗೂ ಹೊಗೆಯಂತಿದ್ದವು ಎಂದಷ್ಟೆ ಪರಿಗಣಿಸುವದಕ್ಕೆ ಇಷ್ಟಪಡುತ್ತಾರೆ.

ಸ್ವತಃ ಕುದುರೆಗಳ ಕಡೆಗೆ ಗಮನವನ್ನು ಕೊಡುವವನಾಗಿ, ಯೋಹಾನನು ಅವುಗಳ ತಲೆಗಳು **ಸಿಂಹಗಳ ತಲೆಗಳಂತಿದ್ದವು** ಎಂದು ಹೇಳುತ್ತಾನೆ. ಸಿಂಹದ ಸಂಕೇತವು ಇದಕ್ಕೆ ಮುಂಚೆ ಬಳಸಲ್ಪಟ್ಟಿದೆ (4:7; 5:5; 9:8). 9ನೇ ಅಧ್ಯಾಯದಲ್ಲಿ ಪ್ರಾಥಮಿಕ ಅರ್ಥವು ಬಲ ಎಂದಿರಬಹುದಾಗಿದೆ, ಎರಡನೆಯದಾಗಿ ದಂಡಿಸಲು ಅಥವಾ ನಾಶಪಡಿಸುವದಕ್ಕಿರುವ ಶಕ್ತಿಯನ್ನು ಸೂಚಿಸಬಹುದಾಗಿದೆ. ಸಿಂಹದ ತಲೆಗಳಿದ್ದ ಕುದುರೆಗಳು ಬಲಿಷ್ಠವಾಗಿದ್ದವು, ಮತ್ತು ಅವುಗಳು ಸಾವಿರಾರು ಮಂದಿಯನ್ನು ಕೊಲ್ಲುವದಕ್ಕೆ ಸಾಧನವಾಗಿರಲಿದ್ದವು.

ಕುದುರೆಗಳು ಬೆಂಕಿಯನ್ನು-ಊದುವಂಥವುಗಳಾಗಿದ್ದವು: **ಅವುಗಳ ಬಾಯಿಂದ ಹೊರಟ ಬೆಂಕಿ ಗಂಧಕ ಹೊಗೆ** (14:10ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಒಬ್ಬನು ಹೆಚ್ಚುಕಡಿಮೆ ತನ್ನ ಮನಸ್ಸನೊಳಗೆ ಬೆಂಕಿ ಮತ್ತು ಹೊಗೆಯನ್ನು ಕಾಣಬಹುದಿತ್ತು - ಮತ್ತು ಸ್ಫಟಿಕವನ್ನು *ವಾಸನೆ ಮಾಡಬಹುದಿತ್ತು.* ಅತಿ ಕಾರದ, ಕೊಳೆತ ಮೊಟ್ಟೆಯಂತಹ ದುರ್ಗಂಧವುಳ್ಳ ಸ್ಫಟಿಕವು ಸುಡುವದನ್ನು ವಾಸನೆ ಮಾಡಿದ ಯಾವನೇ ಆಗಲಿ ಅದನ್ನು ಮರೆಯಲಾರನು.

**ಬೆಂಕಿ ಗಂಧಕ ಹೊಗೆ** ಇವುಗಳು ಕರ್ತನಿಂದ ಬರುವ ದಂಡನೆಗೆ ಪರ್ಯಾಯ ಹೆಸರುಗಳಾಗಿದೆ. ದೇವರು ದುಷ್ಟ ಪಟ್ಟಣಗಳನ್ನು ನಾಶಗೊಳಿಸಿದ ವೇಳೆ, ಆತನು "ಸೊದೋಮ್ ಗೊಮೋರಗಳ ಮೇಲೆ ಆಕಾಶದಿಂದ ಅಗ್ನಿಗಂಧಕಗಳನ್ನು ಸುರಿಸಿ . . ." (ಆದಿಕಾಂಡ 19:24; ನೋಡಿರಿ ಕೀರ್ತನೆ 11:6; ಯೆಶಾಯ 34:9, 10; ಯೆಹೆಜ್ಕೇಲ 38:22). ಪ್ರಕಟನೆ ಪುಸ್ತಕವು ಸೈತಾನನ ಹಿಂಬಾಲಿಸುವದನ್ನು ಮುಂದುವರೆಸುವವರಿಗೆ ಕಾಯ್ದಿರಿಸಲಾಗಿರುವ ದಂಡನೆಯ ಕುರಿತು ತಿಳಿಸುತ್ತದೆ.

> [ಅವರು] ಪರಿಶುದ್ಧ ದೇವದೂತರ ಮುಂದೆಯೂ ಯಜ್ಞದ ಕುರಿಯಾದಾತನ ಮುಂದೆಯೂ ಬೆಂಕಿಯಿಂದಲೂ ಗಂಧಕದಿಂದಲೂ ಯಾತನೆಪಡುವನು. ಅಂಥವರ ಯಾತನೆಯು ಯುಗಯುಗಾಂತರಗಳಲ್ಲಿಯೂ ಏರುತ್ತಾ ಹೋಗುತ್ತದೆ; . . . ಹಗಲಿರುಳು ಉಪಶಮನವಿಲ್ಲದೆ ಯಾತನೆಪಡುವರು (14:10, 11; ನೋಡಿರಿ 19:20; 20:10; 21:8).

ಪ್ರಕಟನೆ 9ನೇ ಅಧ್ಯಾಯದ ಸಿಂಹದ ತಲೆಯಿರುವ ರಾಕ್ಷಸಗಳಂಥ ಪ್ರಾಣಿಗಳು ಬೆಂಕಿ ಮತ್ತು ಗಂಧಕಗಳ ಕೆರೆಯನ್ನು ಪ್ರತಿನಿಧಿಸುತ್ತವೆಂದು ನಾವು ಹೇಳುತ್ತಿಲ್ಲ. ಹೇಗೂ, ಅವುಗಳು *ನರಕದ ಮುನ್‌ರುಚಿಗೊಂದು* ವ್ಯಕ್ತಿರೂಪವಾಗಿರುತ್ತವೆ ಎಂದು ಹೇಳಿದರೆ ಅದು ತಪ್ಪೇನಿಸುವದಿಲ್ಲ. ಕೆಲವು ಸಾರಿ, ಆನಂದ, ಅನ್ಯೋನ್ಯತೆಯ ಕ್ಷಣಗಳಲ್ಲಿ ಜನರು ಹೀಗೆ ಹೇಳುತ್ತಾರೆ, "ಇದೊಂದು ಪರಲೋಕದ ಮುನ್‌ರುಚಿಯಂತಿದೆ." ಅದೇ ಪ್ರಕಾರವಾಗಿಯೇ, ಈ

ಭಯಾನಕವಾದ ಕುದುರೆಗಳು ನಕರ ಎಷ್ಟೊಂದು ಭಯಂಕರವಾಗಿರಲಿದೆ ಎಂಬುದರ ಒಂದು ರುಚಿಯನ್ನು ಮಾನವರಿಗೆ ತೋರಿಸುತ್ತವೆ.

ಬಹುಶಃ ಅತ್ಯಂಥ ದೊಡ್ಡ ಮಹತ್ವಪೂರ್ಣತೆಯು ಏನೆಂದರೆ ಬೆಂಕಿ ಮತ್ತು ಗಂಧಕಗಳು **ಅವುಗಳ ಬಾಯಿಂದ ಹೊರಟು** ಬರುತ್ತವೆ. 19ನೇ ವಚನವು ಹೀಗೆ ಹೇಳುತ್ತದೆ, "ಆ ಕುದುರೆಗಳ ಸಾಮರ್ಥ್ಯವು ಅವುಗಳ ಬಾಯಲ್ಲಿಯೂ ಬಾಲಗಳಲ್ಲಿಯೂ ಇತ್ತು." ಪ್ರಕಟನೆ ಪುಸ್ತಕದೊಳಗೆ ಈ ಮುಂಚೆ, ಯೇಸುವಿನ ಬಾಯಿಂದ ಹೊರಡುವ ಕತ್ತಿಯು ಆತನ ನ್ಯಾಯತೀರ್ಪಿನ *ವಾಕ್ಯ*ವನ್ನು ಪ್ರತಿನಿಧಿಸುವದಾಗಿತ್ತು ಯಾಕೆಂದರೆ ಅದು ಆತನ ಬಾಯಿಂದ ಬರುತ್ತಿತ್ತು (1:16; 2:16). ಅನಂತರದಲ್ಲಿ ಇಬ್ಬರು ಸಾಕ್ಷಿಗಳ ಬಾಯಿಂದ ಬೆಂಕಿ ಬಂದು ಅವರ ವೈರಿಗಳನ್ನು ನಾಶ ಮಾಡುವದೆಂಬುದನ್ನು ಕಾಣುತ್ತೇವೆ (11:5). ಪುನಃ, ಈ ಚಿತ್ರಣವು ಅವರು ಸಾರಿದ *ಸಂದೇಶ*ವನ್ನು ಸೂಚಿಸತಕ್ಕದ್ದು. ಇನ್ನು ಸ್ವಲ್ಪ ನಂತರದಲ್ಲಿ ಘಟಸರ್ಪದ ಬಾಯಿಂದ ನೀರಿನ ಪ್ರವಾಹವು ಹೊರಡುವದು (12:15), ಮತ್ತು ಕ್ರಿಸ್ತನ ವೈರಿಗಳ ಬಾಯಗಳೊಳಗಿಂದ ಅಶುದ್ಧಾತ್ಮಗಳು ಹೊರ ಹೊಮ್ಮುವವು (16:13). ಈ ಎರಡೂ ಕಡೇ ಘಟನೆಗಳು ಸುಳ್ಳುಗಳನ್ನು, ದೋಷಪೂರಿತ ಉಪದೇಶಗಳನ್ನು, ಮತ್ತು ಭಕ್ತಿಹೀನ ಪ್ರಚಾರವನ್ನು ಹರಡಿಸುವ ಸೈತಾನನ ಆಚಾರಗಳಿಗೆ ಸಂಬಂಧಿಸಿದ್ದಾಗಿವೆ.

ಅದೇ ರೀತಿಯಲ್ಲಿಯೇ, ಕುದುರೆಗಳ *ಬಾಯೊಳಗಿಂದ* "ಬೆಂಕಿ ಹೊಗೆ ಗಂಧಕಗಳು" ಹೊರಡುವದು ಮಾತಾಡಲ್ಪಟ್ಟ ಮಾತುಗಳು ಪ್ರಸ್ತಾಪಿಸಲ್ಪಟ್ಟಿರುವ "ನರಕದ ಮುನ್‌ರುಚಿ"ಯ ಒಂದು ಮೂಲವಾಗಿರುತ್ತವೆಂಬುದನ್ನು ಸೂಚಿಸುತ್ತದೆ. ಮೃಗಗಳ ಬಾಯಗಳೊಳಗಿಂದ ಸುರಿಯುವ ಬೆಂಕಿಯು ಸುಳ್ಳು ಸಿದ್ಧಾಂತವನ್ನು ಒಳಗೊಂಡಿರುತ್ತದೆ. Eldred Echolsನು ಕುದುರೆಗಳಿಂದ "ಮಾನವರಿಗಾಗುವ ನಿಜವಾದ ಅಪಾಯವೆಂದರೆ ಅವುಗಳ ಬಾಯಿಗಳೊಳಗಿಂದ ಬರುವಂಥದ್ದೇ - ಸುಳ್ಳು ಸಿದ್ಧಾಂತವು ಜನರನ್ನು ದೇವರಿಂದ ಬೇರ್ಪಡಿಸುವದಾಗಿದೆ"[34] ಎಂದು ಅಭಿಪ್ರಾಯ ಪಡುತ್ತಾನೆ. ಹೇಗೂ, ಒಬ್ಬನು ಮರಣವುಂಟು ಮಾಡುವ ಬೆಂಕಿಯನ್ನು ಕೇವಲ ಧಾರ್ಮಿಕ ದೋಷಕ್ಕೆ ಮಾತ್ರವೇ ಸೀಮಿತಗೊಳಿಸಬಾರದು. ಒಬ್ಬನ ಬಾಯಿಂದ ಜಾರುವಂತೆ ಬಿಡಲಾಗುವ ಕಠೋರ, ಯೋಚನೆಯಿಲ್ಲದ ಮಾತುಗಳು ದೋಷಪೂರಿತ ಉಪದೇಶದಷ್ಟೇ ಅನೇಕ ಆತ್ಮಗಳನ್ನು ಹಾಳು ಮಾಡಬಲ್ಲದು ಅಥವಾ ನಾಶಗೊಳಿಸುವದು. ಸಿಂಹದ ತಲೆಗಳಿರುವ ಮೃಗಗಳ ಬಾಯೊಳಗಿಂದ ಸುರಿಸಲ್ಪಡುತ್ತಿದ್ದ ಬೆಂಕಿ ಮತ್ತು ಹೊಗೆಗಳು ಯಾಕೋಬ 3:6ನ್ನು ಜ್ಞಾಪಕಪಡಿಸುತ್ತದೆ: "ನಾಳಿಗೆಯು ಕಿಚ್ಚೇ, ನಾಲಿಗೆಯು ಅಧರ್ಮಲೋಕದರೂಪವಾಗಿ ನಮ್ಮ ಅಂಗಗಳ ನಡುವೆ ಇಟ್ಟದೆ. ಅದು ದೇಹವನ್ನೆಲ್ಲಾ ಕೆಡಿಸುತ್ತದೆ. ತಾನೇ ನರಕದಿಂದ ಬೆಂಕಿಹತ್ತಿಸಿಕೊಳ್ಳುತ್ತಾ ಪ್ರಪಂಚವೆಂಬ ಚಕ್ರಕ್ಕೆ ಬೆಂಕಿಹಚ್ಚುತ್ತದೆ."

**ವಚನ 18.** ಕುದುರೆಗಳ ಬತ್ತಳಿಕೆಯಲ್ಲಿನ ಆಯುಧಗಳ ಪರಿಣಾಮಕಾರಿತ್ವವು **ಅವುಗಳ ಬಾಯಿಂದ ಬೆಂಕಿ ಹೊಗೆ ಗಂಧಕ ಎಂಬ ಮೂರು ಉಪದ್ರವಗಳಿಂದ ಮನುಷ್ಯರಲ್ಲಿ ಮೂರನೆಯ ಭಾಗವು ಹತವಾಯಿತು** ಎಂಬುದರಲ್ಲಿ ಕಂಡು ಬರುತ್ತದೆ. ಮೂರು ಉಪದ್ರಗಳಲ್ಲಿ ಭಿನ್ನತೆಯನ್ನು ಮಾಡುವದು ಮತ್ತ ಪ್ರತಿಯೊಂದಕ್ಕೂ ಬೇರೆ ಬೇರೆ ಅರ್ಥಗಳನ್ನು ಕಲ್ಪಿಸುವದು ಅನಾವಶ್ಯಕವಾಗಿರುತ್ತದೆ. **ಉಪದ್ರವ** ಎಂಬುದು ಪ್ರಕಟನೆ ಪುಸ್ತಕದುದ್ದಕ್ಕೂ ಬಳಸಲಾಗಿರುವ ವಿಮೋಚನಕಾಂಡದ ಭಾಷೆಯಾಗಿದ್ದರೆ, **ಮೂರು** ಎಂಬುದು ಕೇವಲ ಉಪದ್ರವಗಳು *ದೈವಿಕ* ನ್ಯಾಯತೀರ್ಪನ್ನು ಪ್ರತಿನಿಧಿಸುತ್ತವೆಂಬುದನ್ನು ಸೂಚಿಸುತ್ತದಷ್ಟೆ.

**ವಚನ 19.** ಈಗಾಗಲೇ ಗಮನಿಸಿರುವ ಪ್ರಕಾರ, ಈ ಮರಣಾಂತಿಕ ಕುದುರೆಗಳಿಗೆ

**ಸಾಮರ್ಥ್ಯವು ಬಾಯಲ್ಲಿಯೂ . . . ಇತ್ತು.** ಅವುಗಳಿಗೆ ಸಾಮರ್ಥ್ಯವು **ಬಾಲಗಳಲ್ಲಿಯೂ ಇತ್ತು. ಅವುಗಳ ಬಾಲಗಳು ತಲೆಗಳುಳ್ಳವುಗಳಾಗಿ ಸರ್ಪಗಳ ಹಾಗೆ ಇದ್ದವು. ಅವುಗಳಿಂದ ಕೇಡನ್ನುಂಟುಮಾಡುತ್ತವೆ.** ಆ ಸುರುಳಿಯಾಗುವ, ತಿರುಗಿಕೊಳ್ಳುವ, ಮತ್ತು ಹೊಡೆಯುವ ಭಯಾನಕವಾದ ಬಾಲಗಳು ವಾಚಕನಿಗೆ ಚೇಳಿನ ಕೊಂಡಿಗಳಂತೆ ಬಾಲಗಳುಳ್ಳ ಮಿಡತೆಗಳನ್ನು ಜ್ಞಾಪಿಸುತ್ತವೆ. 9ನೇ ಅಧ್ಯಾಯದ ಕುದುರೆಗಳು "ಬೆಳೆದಿರುವ ಮಿಡತೆಗಳು" ಎಂದು ಕರೆಯಲ್ಪಟ್ಟಿವೆ. ಸರ್ಪದ ಬಾಲಗಳು "ಸೈತಾನನೆಂತಲೂ ಹೆಸರುಳ್ಳ . . . ಸರ್ಪ" (12:9) ದೊಂದಿಗೆ ಒಂದು ರೀತಿಯ ಸಂಬಂಧ ಹೊಂದಿರುವದನ್ನು ಸೂಚಿಸಬಹುದಾಗಿದೆ.

ಕುದುರೆಗಳು ಎರಡೂ ಬದಿಗಳಿಂದಲೂ ಮರಣಾಂತಿಕವಾಗಿದ್ದವು; ಅವುಗಳು ಬರುತ್ತಿದ್ದರೂ ಅಥವಾ ಹೋಗುತ್ತಿದ್ದರೂ ಕೊಲ್ಲಬಲ್ಲವುಗಳಾಗಿದ್ದವು. ಪಾರ್ಥಿಯನ್ನರು ರಾವುತಪಡೆಗಳ ವ್ಯಕ್ತಿಗಳು ವೈರಿಯ ಕಡೆಗೆ ಮುನ್ನುಗ್ಗುವ ವೇಳೇ ಬಾಣಗಳ ಸುರಿಮಳೆಗೈಯುತ್ತಿದ್ದರು ಮತ್ತು ತಾವು ಹಿಂದಕ್ಕೆ ಸರಿದು ಹೋಗುವ ವೇಳೆ ತಮ್ಮ ಕುದುರೆಗಳ ಬಾಲಗಳ ಮೇಲಿನಿಂದ ಇನ್ನೊಂದು ಬಾಣಗಳ ಸುರಿಮಳೆಯನ್ನು ಗೈಯುತ್ತಿದ್ದರು ಎಂದು ಅನೇಕ ವ್ಯಾಖ್ಯಾನಕಾರರು ಗಮಗನಕ್ಕೆ ತರುತ್ತಾರೆ. ಈ ಐತಿಹಾಸಿಕ ಟಿಪ್ಪಣಿಯು 19ನೇ ವಚನದ ಚಿತ್ರಣಕ್ಕೆ ಪ್ರಭಾವವನ್ನು ಬೀರಿರಬಹುದಾಗಿದೆ.

ಸವಾರರು ಮತ್ತು ಅವರ ಕುದುರೆಗಳ ಕುರಿತು ಕೆಲಲೊಂದು ವಿವರಗಳನ್ನು ಪರಿಶೀಲಿಸಿಯಾದ ಮೇಲೆ, "ಈ ಇಪ್ಪತ್ತುಕೋಟಿ ಕುದುರೆಗಳ ಸೈನ್ಯವು ಯಾವದನ್ನು ಪ್ರತಿನಿಧಿಸುತ್ತವೆ?" ಎಂದು ಪ್ರಶ್ನೆಯನ್ನು ಕೇಳುವ ಸಮಯ ಬಂದಿರುತ್ತದೆ. ಈ ಮುಂಚೆ ಹೇಳಿದ ಪ್ರಕಾರವೇ, ಕೆಲವರು ಮಾಡುವ ನೆಚ್ಚಿನ ವ್ಯಾಖ್ಯಾನವೆಂದರೆ ಪ್ರಕಟನೆ 9ನೇ ಅಧ್ಯಾಯದ ಸೈನ್ಯವು ಒಂದು ವಾಸ್ತವಿಕವಾದ ಸೈನ್ಯವನ್ನು ಪ್ರತಿನಿಧಿಸುತ್ತದೆ ಎಂಬುದೆ: Preteristsರು ಮೊದಲ ಶತಮಾನದ ಪಾರ್ಥಿಯನ್ನರೆಂದು ಹೇಳಿದರೆ, ಮುಂದುವರೆದ-ಐತಿಹಾಸಿಕ ಅರ್ಥೈಸುವ ದಾರಿಯನ್ನು ಪ್ರತಿಪಾದಿಸುವವರು ಎಂಟನೆಯ ಹಾಗೂ ಒಂಭತ್ತನೆಯ ಶತಮಾನಗಳ ಮುಸ್ಲಿಮ್ ಕುದುರೆ ದಂಡುಗಳೆಂದು ವಾದಿಸುತ್ತಾರೆ, ಮತ್ತು ಅನೇಕ ಭವಿಷ್ಯವಾದಿಗಳು/ಸಹಸ್ರವರ್ಷಪೂರ್ವಾಡಳಿ ವಾದಿಗಳಿಗೆ ಈಗಿನ ಕಾಲದ ಸೈನ್ಯದ ಆಯ್ಕೆಗಳೆಂದರೆ ಏಶಿಯಾಕ್ಕೆ ಸೇರಿದ ಸೈನ್ಯಗಳಾಗಿವೆ. ಅನೇಕ ಸಾರಿ ಸ್ವತಃ ಕುದುರೆಗಳನ್ನೇ ಯುದ್ಧಾಯುಧಗಳೆಂದು ಭಾವಿಸಲಾಗಿರುತ್ತದೆ: ಎರಡನೆಯ ವಿಶ್ವ ಯುದ್ಧದ ವೇಳೆ, ವ್ಯಾಖ್ಯಾನಕಾರರು ಬೆಂಕಿಯನ್ನು ಉಗುಳುವ ಕುದುರೆಗಳನ್ನು ಟ್ಯಾಂಕರ್‌ಗಳು ಹಾಗೂ ಬೆಂಕಿ ಎಸೆಯುವ ಯಂತ್ರಗಳಿಗೆ ಹೋಲಿಸಿದರು. ಇಂದು, ಉದ್ರೇಕ ಪ್ರವರ್ತಕರು ಕ್ಷಿಪಣಿ ಉಡಾವಣೆಗಳಿಗೆ ಮತ್ತು ಇತರ ಸಮೂಹ ವಿನಾಶಕಗಳಿಗೆ ಹೋಲಿಕೆ ಮಾಡುವದರಲ್ಲಿ ಸಂಭ್ರಮಿಸುತ್ತಾರೆ.

ಪಾರ್ಥಿಯನ್ನರ ಚಿತ್ರಣವು ಇರಬಹುದಾದ ಸಾಧ್ಯತೆಯನ್ನು ಹೊರತು ಪಡಿಸಿದರೆ, ಮೇಲಿನ ಬಹಳಷ್ಟು ವ್ಯಾಖ್ಯಾನಗಳು ಪುಸ್ತಕರ ಶೈಲಿ ಮತ್ತು ಉದ್ದೇಶಗಳೆರಡರೊಂದಿಗೂ ಅಸಾಮಂಜಸ್ಯತೆಯಿಂದ ಕೂಡಿರುತ್ತವೆ. ಭವಿಷ್ಯದೊಳಗೆ ನೂರಾರು ವರ್ಷಗಳ ನಂತರದಲ್ಲಿ ಅಸ್ತಿತ್ವಕ್ಕೆ ಬರಲಿದ್ದ ಸೈನ್ಯಗಳಿಗೆ - ಟ್ಯಾಂಕ್, ಬೆಂಕಿ-ಎಸೆಯುವ ಯಂತ್ರಗಳು ಮತ್ತು ಕ್ಷಪಣಿ ಉಡಾವಣೆಗಳು - ನಿಗೂಢವಾಗಿ ಉಲ್ಲೇಖ ಮಾಡುವದರ ಮೂಲಕ ಮೊದಲ ಶತಮಾನದ ಕ್ರೈಸ್ತರು ಯಾವ ವಿಧವಾದ ಸಾಂತ್ವನವನ್ನು ಕಂಡುಕೊಂಡಿರುವದಕ್ಕೆ ಸಾಧ್ಯವಿರುತ್ತಿತ್ತು?

ಇನ್ನೊಂದೆಡೆಯಲ್ಲಿ, ಕುದುರೆಗಳನ್ನು ಮತ್ತು ಅವುಗಳ ಸವಾರರನ್ನು ಸಾಮಾನ್ಯ ಅರ್ಥದಲ್ಲಿ ಯುದ್ಧಕ್ಕೆ ಸಂಕೇತವೆಂದು ಯೋಚಿಸುವದರಲ್ಲಿ ತಪ್ಪೇನೂ ಇರುವದಿಲ್ಲ ಈ ಸೈನ್ಯವನ್ನು

ಎರಡನೆಯ ಮುದ್ರೆಯು ಒಡೆಯಲ್ಪಟ್ಟಾಗ ಬಿಡುಗಡೆಗೊಳಿಸಲ್ಪಟ್ಟ ಕೆಂಪು ಕುದುರೆಯೊಂದಿಗೆ ಹೋಲಿಕೆ ಮಾಡಬಹುದು (6:3, 4). ಗತಕಾಲದ ದಿನಗಳಲ್ಲಿ, ದೇವರು ತನ್ನ ಉದ್ದೇಶಗಳನ್ನು ನೆರವೇರಿಸಿಕೊಳ್ಳಲು ವಾಸ್ತವಿಕವಾದ ಸೈನ್ಯಗಳನ್ನು ಬಳಸಿಕೊಂಡನು; ಹಳೆಯ ಒಡಂಬಡಿಕೆಯು ಅಂತಹ ಉದಾಹರಣೆಗಳಿಂದ ತುಂಬಿರುತ್ತದೆ. ಅಲ್ಲದೆ ದೇವರು ಕ್ರಮೇಣದಲ್ಲಿ ಬಲಿಷ್ಠ ರೋಮನ್ ಸಾಮ್ರಾಜ್ಯವನ್ನು ಪತನಗೊಳಿಸಲು ಬಾಹ್ಯ ದಾಳಿಯನ್ನು ಬಳಸಿದನೆಂಬುದು ಸಹ ಒಂದು ಸತ್ಯವಾಗಿರುತ್ತದೆ. ದೇವರು ತನ್ನ ಯೋಜನೆಗಳನ್ನು ಸಾಧಿಸುವದಕ್ಕಾಗಿ ಆಧುನಿಕ ಕಾಲದ ಭಯಂಕರ ಯುದ್ಧಗಳನ್ನು ಸಹ ಬಳಸಿಕೊಂಡಿರುತ್ತಾನೆ. ಉದಾಹರಣೆಗೆ, ಎರಡನೆಯ ವಿಶ್ವ ಯುದ್ಧವು ಕ್ರಿಸ್ತನ ಸಭೆಯ ಸೇವಾಕಾರ್ಯದ ಪ್ರಯಾಸಗಳನ್ನು ಇನ್ನಷ್ಟು ವೇಗಗೊಳಿಸಿತ್ತು: ಅನೇಕ ಕ್ರೈಸ್ತ ಸೈನಿಕರು ತಾವು ಯುದ್ಧ ಮಾಡಿದ್ದ ಸ್ಥಳಗಳಿಗೆ ಸುವಾರ್ತೆಯೊಂದಿಗೆ ಹೋಗಬೇಕೆಂಬ ದೃಢನಿರ್ಧಾರ ಮಾಡಿಕೊಂಡವರಾಗಿ ಹಿಂದಿರುಗಿದ್ದರು. ಯುದ್ಧದ ವಿಷಯವಾಗಿ, ಪ್ರಪಂಚವು ಹುಚ್ಚು ಆವೇಶದಿಂದ ಕಾದಾಡುತ್ತದೆಂದ ಮಾತ್ರಕ್ಕೆ ದೇವರು ನಿಯಂತ್ರಣವನ್ನು ಕಳೆದುಕೊಂಡಿರುತ್ತಾನೆಂದು ಅರ್ಥವಲ್ಲ ಎಂಬುದನ್ನು ಕ್ರೈಸ್ತರು ಅರ್ಥಮಾಡಿಕೊಳ್ಳಬೇಕು. ಆತನು ತನ್ನ ಯೋಜನೆಗಳನ್ನು ಸಾಧಿಸುವದನ್ನು ಮುಂದುವರೆಸುತ್ತಾನೆ.

ಹೇಗೂ, ಒಂದೆರಡು ಎಚ್ಚರಿಕೆಯ ಮಾತುಗಳನ್ನು ಸೇರ್ಪಡೆಗೊಳುಸುವದು ಅಗತ್ಯ: ಮೊದಲನೆಯದಾಗಿ, ಸಾಂಕೇತಿಕೆಯು ಯಾವದೇ ನಿರ್ದಿಷ್ಟವಾದ ಯುದ್ಧ ಅಥವಾ ಸೈನ್ಯಕ್ಕೆ ಸೀಮಿತಗೊಳಿಸಲ್ಪಟ್ಟಿಲ್ಲ*ವಾದರೆ*, ಆ ಕುದುರೆ ಮತ್ತು ಸವಾರರನ್ನು ಸಾಮಾನ್ಯ ಅರ್ಥದಲ್ಲಿ ಕಾದಾಟಗಳ ಸಂಕೇತವೆಂದು ಯೋಚಿಸುವದರಲ್ಲಿ ಯಾವದೇ ತಪ್ಪಿರುವದಿಲ್ಲ. G. R. Beasley-Murrayರು ವ್ಯಾಖ್ಯಾಸಿದ್ದೇನೆಂದರೆ ಯೋಹಾನನು "ಅನಂತರದ ಕಾಲದ ವಾಚಕರು ಆತನ ಕುದುರೆಗಳ ಹಾಗೂ ಸವಾರರ ಚಿತ್ರಣವನ್ನು . . . ಗಾಂಭೀರ್ಯವಾದ ವಾಸ್ತವಿಕತೆಯೆಂದು ಭಾವಿಸಿಕೊಳ್ಳುವರೆಂಬುದನ್ನು ತಿಳಿದುಕೊಂಡರೆ . . . ಆಶ್ಚರ್ಯಚಕಿತಗೊಂಡಿರುತ್ತಿದ್ದನು, ಮತ್ತು ಸಾಧ್ಯವಾದರೆ ವಿನೋದವಾಗಿ ಕಾಣುತ್ತಿದ್ದನು."[35] Warren Wiersbeನು ಹೀಗೆ ಬರೆದನು,

> ಬಣ್ಣನೆಯು ನಮಗೆ ಗೊತ್ತಿರುವಂತೆ ಯುದ್ಧ-ಕುದುರೆಗಳಿಗೆ ಸರಿಹೊಂದಿಕೆಯಾಗುವದಿಲ್ಲ, ಹಾಗೆ ನೋಡಿದರೆ ಟ್ಯಾಂಕ್‌ಗಳಂತ ಆಧುನಿಕ ಯುದ್ಧದ ಸಾಧನಗಳಿಗೆ ಸರಿಹೊಂದಿಕೆಯಾಗುವದಿಲ್ಲ. ಮತ್ತು ಇದೊಂದು ಅಕ್ಷರಶಃ ಸೈನ್ಯವಾಗಿದೆ ಎಂದು ವಾದಿಸುವದು, ಮತ್ತು ಅದನ್ನು ಇಪ್ಪತ್ತು ಕೋಟಿ ಸೈನಿಕರಿದ್ದಾರೆಂದು ಹೇಳಿಕೊಳ್ಳುವ ಒಂದು ದೇಶ (ಚೀನಾದಂತಹ) ಎಂದು ಹೇಳುವದು ಯೋಹಾನನು ತಿಳಿಸಲು ಪ್ರಯತ್ನಿಸುತ್ತಿರುವ ಸಂದೇಶವನ್ನು ತಪ್ಪಿಸಿಕೊಂಡ ಹಾಗಾಗುತ್ತದೆ.[36]

ಎರಡನೆಯದಾಗಿ, ಸಾಂಕೇತಿಕೆಯು ಯಾವದೇ ಶಾರೀರಿಕ ಯುದ್ಧಕ್ಕೆ ಸೀಮಿತಗೊಳಿಸಲ್ಪಟ್ಟಿಲ್ಲ*ವಾದರೆ*, ಆ ಕುದುರೆ ಮತ್ತು ಸವಾರರನ್ನು ಸಾಮಾನ್ಯ ಅರ್ಥದಲ್ಲಿ ಕಾದಾಟಗಳ ಸಂಕೇತವೆಂದು ಯೋಚಿಸುವದರಲ್ಲಿ ಯಾವದೇ ತಪ್ಪಿರುವದಿಲ್ಲ. ಶಾರೀರಿಕ ಕಾದಾಟಗಳು *ಮನುಷ್ಯನು ಮತ್ತೊಬ್ಬ ಮನುಷ್ಯನಿಗೆ ಅಮಾನವೀಯತೆಯಿಂದ ನಡೆದುಕೊಳ್ಳುವ* ವೈಶಿಷ್ಟ್ಯತೆಯನ್ನು ಹೊಂದಿವೆ. ಅನೇಕ ಸಾರಿ, ಯುದ್ಧದಲ್ಲಿ, ನಿರಪರಾಧಿಗಳೇ ಬಾಧೆಯನ್ನು ಅನುಭವಿಸುತ್ತಾರೆ, ಅದು ಸಾಮಾನ್ಯವಾಗಿ ಜೀವನದ ವಿಷಯದಲ್ಲಿ ಸತ್ಯವಾಗಿರುತ್ತದೆ.

ಆ ಸೈನ್ಯವು ಯಾವದೆಂದು ಕಂಡು ಹಿಡಿಯುವದಕ್ಕೆ ಹೆಣಗಾಡುವುದು "ದೊಡ್ಡ ಚಿತ್ರಣ"

ವನ್ನು ತಪ್ಪಿಸಿಕೊಳ್ಳುವಂತೆ ಮಾಡಲು ಅವಕಾಶ ಕೊಡದಿರಿ: ದೇವರ ತುತೂರಿಗಳು ಪಾಪಿಗಳನ್ನು ಎಚ್ಚರಿಸುವದಕ್ಕಾಗಿಯೇ ಆಗಿದ್ದವು ಎಂಬುದೆ ಆ ದೊಡ್ಡ ಚಿತ್ರಣ. ಮೊದಲ ನಾಲ್ಕು ತುತೂರಿಗಳು ಊದಲ್ಪಟ್ಟಾಗ, ದೇವರು ಪ್ರಾಕೃತಿಕ ವಿಕೋಪಗಳನ್ನು ಬಳಸಿ ಜನರು ಪರಿಸ್ಥಿತಿಯ ಕುರಿತು ಮುನ್ನೆಚ್ಚರಿಕೆಗೊಳ್ಳುವಂತೆ ಮಾಡಿದನು. ಐದನೆಯ ತುತೂರಿಯು ಊದಲ್ಪಟ್ಟಾಗ, ಪೈಶಾಚಿಕ ಮಿಡತೆಗಳು ಮಾನವರನ್ನು ಪಾಪದಿಂದ ಬರುವಂತಹ ಯಾತನೆಯಿಂದ ಪೀಡಿಸಿದವು. ಪಾಪಿಗಳಿಗೆ ಬುದ್ಧಿ ಬರುವಂತೆ ಮಾಡುವದಕ್ಕೆ ಪ್ರಯತ್ನಿಸಲು ಆರನೆಯ ತುತೂರಿಯು "ನರಕದಿಂದ ಬಂದ ಕುದುರೆ-ಸವಾರರನ್ನು" ಹೊರ ಹಾಕಿತು. ರೋಮನ್ ಸಾಮ್ರಾಜ್ಯದ ಕುರಿತು ಅನ್ವಯಿಕೆಯನ್ನು ಮಾಡಬಹುದಾಗಿದೆ: ದೇವರು ಅವರ ಗಮನವನ್ನು ಸೆಳೆದುಕೊಳ್ಳಲು ಶಾರೀರಿಕ ಯುದ್ಧಗಳನ್ನು ಬಳಸಿದನು. ಹೇಗೂ, ಅನ್ವಯಿಕೆಯು ಅದಕ್ಕಿಂತಲೂ ವಿಶಾಲವಾಗಿರುತ್ತದೆ: ಯಾವದೇ ದುರಂತವು ಸಂಭವಿಸಿ ಮರಣವು ಉಂಟಾಗುವದಾದರೆ, ತಮಗೆ ಕರ್ತನ ಹಾಗೂ ಆತನ ಬಲದ ಅಗತ್ಯವಿದೆ ಎಂಬುದನ್ನು ಗ್ರಹಿಸಿಕೊಳ್ಳುವಂತೆ ಮನುಷ್ಯರಲ್ಲಿ ಕಾರಣವಾಗತಕ್ಕದ್ದು.

ದೇವರು ಪಾಪಿಗಳನ್ನು ಪ್ರೀತಿಸುತ್ತಾನೆ ಮತ್ತು ಎಲ್ಲರೂ ಪಶ್ಚಾತ್ತಾಪ ಪಡಬೇಕೆಂದು ಬಯಸುವವನಾಗಿದ್ದಾನೆ. ನಾಶನ ಮಾರ್ಗದಲ್ಲಿರುವವರ ವಿಷಯವಾಗಿ ಆತನಿಗಿರುವ ಮನೋಭಾವವು 2 ಪೇತ್ರ 3:9, 10ರಲ್ಲಿ ವ್ಯಕ್ತಪಡಿಸಲ್ಪಟ್ಟಿದೆ:

> ಕರ್ತನು ತನ್ನ ವಾಗ್ದಾನವನ್ನು ನೆರವೇರಿಸುವದಕ್ಕೆ ತಡಮಾಡುತ್ತಾನೆಂಬದಾಗಿ ಕೆಲವರು ಅರ್ಥಮಾಡಿಕೊಳ್ಳುವ ಪ್ರಕಾರ ಆತನು ತಡಮಾಡುವವನಲ್ಲ. ಯಾವನಾದರೂ ನಾಶವಾಗುವದರಲ್ಲಿ ಆತನು ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪೇಕ್ಷಿಸುವವನಾಗಿದ್ದು ನಿಮ್ಮ ವಿಷಯದಲ್ಲಿ ದೀರ್ಘಶಾಂತಿಯುಳ್ಳವನಾಗಿದ್ದಾನೆ. ಆದರೂ ಕರ್ತನ ದಿನವು ಕಳ್ಳನು ಬರುವಂತೆ ಬರುತ್ತದೆ. ಆ ದಿನದಲ್ಲಿ ಆಕಾಶಮಂಡಲವು ಮಹಾ ಘೋಷದಿಂದ ಇಲ್ಲದೆ ಹೋಗುವದು, ಸೂರ್ಯ ಚಂದ್ರ ನಕ್ಷತ್ರಗಳು ಉರಿದು ಲಯವಾಗಿ ಹೋಗುವವು, ಭೂಮಿಯೂ ಅದರಲ್ಲಿರುವ ಕೆಲಸಗಳೂ ಸುಟ್ಟುಹೋಗುವವು.

ಈ ವಾಕ್ಯಭಾಗವು ಹಲವಾರು ಪ್ರಾಮುಖ್ಯವಾದ ಸತ್ಯಗಳನ್ನು ಕಲಿಸುತ್ತದೆ: (1) ಕರ್ತನು ತನ್ನ ಬರೋಣವನ್ನು ತಡಮಾಡುತ್ತಾನೆ - ಯಾಕೆಂದರೆ ಜನರು ನಾಶವಾಗುವದು ಆತನಿಗೆ ಇಷ್ಟವಿಲ್ಲ. (2) ಪಾಪಿಗಳು ಪಶ್ಚಾತ್ತಾಪ ಪಡಬೇಕೆಂದು ಕರ್ತನು ಬಯಸುತ್ತಾನೆ, ಯಾಕೆಂದರೆ ಪಶ್ಚಾತ್ತಾಪದ ಮೂಲಕವಾಗಿ ಮಾತ್ರವೇ ಅವರು ಆತನ ಬಳಿಗೆ ಹಿಂದಿರುಗಬಲ್ಲರು. (3) ಯಾವದೋ ಒಂದು ಹಂತದಲ್ಲಿ, ಕರ್ತನ ತಾಳ್ಮೆಯು ತೀರಿ ಹೋಗುವದು, ಮತ್ತು ಕರ್ತನ ದಿನವು ಬರುವದು. ಬಳಿಕ ಆತನ ಎಚ್ಚರಿಕೆಗಳನ್ನು ನಿರ್ಲಕ್ಷ್ಯ ಮಾಡಿದವರು ಆತನ ಕೋಪದ ಪೂರ್ಣ ಪರಿಣಾಮವನ್ನು ಎದುರಿಸುವರು. ಈ ಪ್ರತಿಯೊಂದು ಪ್ರಮುಖ ಚರ್ಚೆಯಾಂಶಗಳು ಏಳು ತುತೂರಿಗಳೊಳಗೆ ಕ್ರಮೇಣ ಮುಂದುವರೆಯುತ್ತಾ ಸಾಗುತ್ತವೆ.

ಮೊದಲ ನಾಲ್ಕು ತುತೂರಿಗಳು ವಿಶ್ವದ ಮೇಲೆ ಪಾಪದ ಪರಿಣಾಮವನ್ನು ಪ್ರತಿನಿಧಿಸುತ್ತದೆ ಎಂದು, ಐದನೆಯ ತುತೂರಿಯು ಪಾಪವು ಸ್ವತಃ ಪಾಪಿ ಮೇಲೆ ಬೀರುವ ಪರಿಣಾಮವನ್ನು ಪ್ರತಿನಿಧಿಸುತ್ತದೆಂದು, ಮತ್ತು ಆರನೆಯ ತುತೂರಿಯು ಹೆಚ್ಚಾಗಿ ಪಾಪದಿಂದ ಇತರರ ಮೇಲಾಗುವ ಪರಿಣಾಮಕ್ಕೆ ಸಂಬಂಧಿಸಿದೆ ಎಂದು ಅಭಿಪ್ರಾಯ ಪಡಲಾಗುತ್ತದೆ. ಇದೆಲ್ಲವೂ "ಮನುಷ್ಯನ ಸ್ವಸಂತೃಪ್ತಿ ಹಾಗೂ ಗರ್ವದ ಭದ್ರಗೋಡೆಯನ್ನು ತೂರಿಕೊಂಡು ಹೋಗುವದಕ್ಕೆ ದೇವರು ಮಾಡುವ ಪ್ರಯತ್ನಗಳನ್ನು"[37] ಪ್ರತಿನಿಧಿಸುತ್ತದೆ. Morrisನು ಹೀಗೆ ಬರೆದನು,

> ನಮ್ಮನ್ನು ಪಶ್ಚಾತ್ತಾಪಕ್ಕೆ ಕರೆಯುವದಕ್ಕೆ ದೇವರು ನಮ್ಮ ಪಾಪದ ಕೆಟ್ಟ ಫಲಿತಗಳನ್ನು ಬಳಸಿಕೊಳ್ಳುತ್ತಾನೆ. ಯೋಹಾನನು ಪೈಶಾಚಿಕ ಶಕ್ತಿಗಳು ಬಿಡುಗಡೆಗೊಳಿಸಲ್ಪಡುವದನ್ನು ಒಂದು ದೃಷ್ಟಿಕೋನದಿಂದ ನಮ್ಮ ಮಾನವ ಪಾಪದ ಫಲಿತವೆಂಬುದಾಗಿ ಕಾಣುತ್ತಾನೆ. ಆದರೆ ಇನ್ನೊಂದು ದೃಷ್ಟಿಕೋನದಿಂದ ನೋಡುವಾಗ ಅದು ದೇವರ ಶಿಕ್ಷಿಸುವಿಕೆಯಾಗಿದೆ ಮತ್ತು ದೇವರ ಶಿಕ್ಷಿಸುವಿಕೆಯು ಗುರಿಯಿಲ್ಲದ್ದಾಗಿರುವದಿಲ್ಲ. ಸರಿಯಾಗಿ ಸ್ವೀಕರಿಸಿಕೊಂಡರೆ ಅದು ತಿದ್ದುಪಾಟಿಗೆ ನಡಿಸತಕ್ಕದ್ದು.[38]

ಪ್ರತಿಯೊಬ್ಬರೂ ಪಶ್ಚಾತ್ತಾಪ ಪಡಬೇಕೆಂದು ದೇವರು ಬಯಸುತ್ತಾನೆ (2 ಪೇತ್ರ 3:9). ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ (ಯೆಶಾಯ 59:1, 2), ಮತ್ತು ನಾವು ಆ ಪಾಪದಿಂದ ತಿರುಗಿಕೊಂಡು ಆತನ ಬಳಿಗೆ ಹಿಂದಿರುಗಿ ಬರಬೇಕೆಂದು ಆತನು ಇಷ್ಟ ಪಡುತ್ತಾನೆ. Daniel Russellನು ಹೀಗೆ ಹೇಳುತ್ತಾನೆ,

> ಆ ಕಾರಣದಿಂದಲೇ ಬೈಬಲ್ ಪಶ್ಚಾತ್ತಾಪಕ್ಕೆ ಬರುವಂತೆ ಒಂದು ಸುದೀರ್ಘವಾದ ವಿನಂತಿಯಾಗಿರುತ್ತದೆ. ಮೋಶೆಯು ಜನರನ್ನು ಪಶ್ಚಾತ್ತಾಪಕ್ಕೆ ಕರೆಯುತ್ತಾನೆ. ಪ್ರವಾದಿಗಳು "ನೀವು ತಿರುಗಿಕೊಳ್ಳಿರಿ, ನೀವು ತಿರುಗಿಕೊಳ್ಳಿರಿ, ನೀವು ಸಾಯುವದೇಕೆ?" ಎಂದು ಕೂಗಿದರು. ಸ್ನಾನಿಕನಾದ ಯೋಹಾನನು ಪಶ್ಚಾತ್ತಾಪ ಪಡುವಂತೆ ಕೇಳುವವನಾಗಿ ಅರಣ್ಯದೊಳಗಿಂದ, ಕಾಡಿನೊಳಗಿಂದ, ಒರಟು ಧ್ವನಿಯಲ್ಲಿ ಹೊರ ಬರುತ್ತಾನೆ. ಸ್ವತಃ ಯೇಸುವಿನ ಉಪದೇಶದಲ್ಲಿ ಆತನೇ ಪದೇ ಪದೇ ಪಶ್ಚಾತ್ತಾಪಕ್ಕೆ ಕರೆಯುತ್ತಾನೆ. "ನಾನು ನೀತಿವಂತರನ್ನು ಅಲ್ಲ, ಆದರೆ ಪಾಪಿಗಳನ್ನೇ ಕರೆಯುವದಕ್ಕೆ ಬಂದಿದ್ದೇನೆ" ಎಂದನು. . . . ಪೇತ್ರನು ಹೀಗೆ ಹೇಳುತ್ತಾನೆ: "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು . . . ದೀಕ್ಷಾಸ್ನಾನಮಾಡಿಸಿಕೊಳ್ಳಿರಿ." ಪೌಲನು ಅಥೇನೆಯ ಮಾರ್ಸ್ ಬೆಟ್ಟದಲ್ಲಿ ದೇವರು ಮನುಷ್ಯನ ಅಜ್ಞಾನದಿಂದ ಆತನ ಪಾಪವನ್ನು ಲೆಕ್ಕಕ್ಕೆ ಎಣಿಸದಿರುವ ಕಾಲವು ಇದ್ದದ್ದೇ ಆದಲ್ಲಿ ಅದು ಈಗ ಮುಕ್ತಾಯಗೊಂಡಿದೆ; "ಈಗಲಾದರೋ ಆತನು ನಾಲ್ಕು ದಿಕ್ಕುಗಳಲ್ಲಿರುವ ಮನುಷ್ಯರೆಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪ್ಪಣೆಕೊಡುತ್ತಾನೆ" ಎಂದು ಘೋಷಿಸಿದನು. . . . ಬೈಬಲ್ ಒಂದು ಮೂಲಭೂತ ಸ್ವರೂಪದ ಪುಸ್ತಕವಾಗಿದ್ದು ಮೂಲಭೂತವಾಗಿ ಮಾನವ ನಡವಳಿಕೆಯಲ್ಲಿ ಬದಲಾವಣೆಯಾಗಬೇಕೆಂದು ಕರೆ ಕೊಡುತ್ತದೆ; ಮತ್ತು ಅದು ಸ್ಪಷ್ಟಪಡಿಸುವದೇನೆಂದರೆ . . . ಒಬ್ಬ ಕೆಟ್ಟ ಮನುಷ್ಯನನ್ನು ಒಳ್ಳೇಯ ಮನುಷ್ಯನಾಗಿ ಮಾರ್ಪಡಿಸುವದರಲ್ಲಿ ಅಗತ್ಯವಿರುವ ಮೊಟ್ಟಮೊದಲ ಮತ್ತು ಮೂಲಭೂತವಾದ ಹಾಗೂ ಅತ್ಯಾವಶ್ಯಕ ಅಗತ್ಯತೆಯೆಂದರೆ ಅದು ಮನುಷ್ಯನು ಪಶ್ಚಾತ್ತಾಪ ಪಡುವನು ಎಂಬುದೆ.[39]

ದೇವರು ಮಾನವರನ್ನು ಪಶ್ಚಾತ್ತಾಪಕ್ಕೆ ನಡಿಸುವದಕ್ಕೆ ತನಗೆ ಸಾಧ್ಯವಾದದ್ದನ್ನೆಲ್ಲಾ ಮಾಡಿದ್ದಾನೆ (ಮತ್ತು ಮಾಡುತ್ತಿದ್ದಾನೆ) ಎಂಬುದನ್ನು ಏಳು ತುತೂರಿಗಳು ಘೋಷಿಸುತ್ತವೆ.

## ಉಳಿದ ಜನರು ಪಶ್ಚಾತ್ತಾಪ ಪಡಲಿಲ್ಲ (9:20, 21)

**[20]ಉಪದ್ರವಗಳಿಂದ ಸಾಯದೆ ಉಳಿದ ಜನರನು ತಾವೇ ಮಾಡಿಕೊಂಡ ವಿಗ್ರಹಗಳನ್ನು ಬಿಟ್ಟು ದೇವರ ಕಡೆಗೆ ತಿರುಗಲಿಲ್ಲ; ಅವರು ದೆವ್ವಗಳ ಪೂಜೆಯನ್ನೂ ಬಂಗಾರ ಬೆಳ್ಳಿ ತಾಮ್ರ ಕಲ್ಲು ಮರ ಇವೇ ಮುಂತಾದವುಗಳಿಂದ ಮಾಡಲ್ಪಟ್ಟು ನೋಡಲಾರದೆ ಕೇಳಲಾರದೆ ನಡೆಯಲಾರದೆ ಇರುವ ವಿಗ್ರಹಗಳ ಪೂಜೆಯನ್ನೂ ಬಿಡಲಿಲ್ಲ. [21]ಇದಲ್ಲದೆ ತಾವು ನಡಿಸುತ್ತಿದ್ದ ಕೊಲೆ ಮಾಟ ಜಾರತ್ವ ಕಳ್ಳತನ ಇವುಗಳೊಳಗೆ ಒಂದನ್ನೂ ಬಿಟ್ಟು ಮಾನಸಾಂತರಮಾಡಿಕೊಳ್ಳಲಿಲ್ಲ.**

**ವಚನ 20.** ಮನುಷ್ಯರನ್ನು ತನ್ನ ಕಡೆಗೆ ಹಿಂದಿರುಗಿ ಕರೆ ತರುವದಕ್ಕಾಗಿ ದೇವರು ಸಾಧ್ಯವಾದದ್ದನ್ನೆಲ್ಲಾ ಮಾಡಿದಾಗ್ಯೂ, ಬಹಳಷ್ಟು ಮಟ್ಟಿಗೆ ಮಾನವರು ಪಶ್ಚಾತ್ತಾಪವಿಲ್ಲದವರಾಗಿ ಉಳಿದರು. **ಉಪದ್ರವಗಳಿಂದ ಸಾಯದೆ ಉಳಿದ ಜನರು . . . ದೇವರ ಕಡೆಗೆ ತಿರುಗಲಿಲ್ಲ**.

20 ಮತ್ತು 21 ವಚನಗಳಲ್ಲಿ, ಅವರು ಯಾವ ಪಾಪಗಳನ್ನು ಬಿಟ್ಟು ಪಶ್ಚಾತ್ತಾಪ ಪಡಲಿಲ್ಲ ಎಂಬುದನ್ನು ಯೋಹಾನನು ನಿರ್ದಿಷ್ಟವಾಗಿ ತಿಳಿಸುತ್ತಾನೆ. ಜನರು ತಮ್ಮನ್ನು ನಾಶ ಮಾಡುತ್ತಿದ್ದ ಅದೇ ಕಾರ್ಯಗಳನ್ನು ಹಾಗೂ ಮನೋಭಾವಗಳಿಗೆ ಅಂಟಿಕೊಂಡವರಾಗಿ ಮುಂದುವರೆದರು. ಮೊದಲನೆಯದಾಗಿ *ಹೃದಯದ ಪಾಪಗಳು* ಇದ್ದವು - ನಿರ್ದಿಷ್ಟವಾಗಿ ವಿಗ್ರಹಾರಾಧನೆಯ ಪಾಪ. ಅವರು **ತಾವೇ ಮಾಡಿಕೊಂಡ ವಿಗ್ರಹಗಳನ್ನು ಬಿಟ್ಟು . . . ದೆವ್ವಗಳ ಪೂಜೆಯನ್ನೂ . . . ಬಿಡಲಿಲ್ಲ.** KJVಯಲ್ಲಿ "ಸೈತಾನಗಳ ಪೂಜೆಯನ್ನು" ಎಂದಿರುತ್ತದೆ, ಆದರೆ ಇರುವದು ಒಂದೇ ಒಂದು ಸೈತಾನ. Δαιμόνια (*daimonia*) ಎಂಬುದರ ಹೆಚ್ಚು ನಿಖರವಾದ ಅನುವಾದವೆಂದರೆ **ದೆವ್ವಗಳು** ಎಂಬುದೆ. ಹಳೆಯ ಹಾಗೂ ಹೊಸ ಒಡಂಬಡಿಕೆಗಳೆರಡರಲ್ಲೂ, ಅನ್ಯದೇವಾರಾಧನೆಯನ್ನು ದೆವ್ವಗಳ ಆರಾಧನೆಯೆಂದು ಪರಿಗಣಿಸಲಾಗಿರುತ್ತದೆ (ಧರ್ಮೋಪದೇಶಕಾಂಡ 32:17; ಕೀರ್ತನೆ 106:37; 1 ಕೊರಿಂಥ 10:20). ಸುಳ್ಳು ಉಪದೇಶವು "ದೆವ್ವಗಳ ಬೋಧನೆಗಳು" ಎಂದು ಪರಿಗಣಿಸಲ್ಪಟ್ಟಿದೆ (1 ತಿಮೊಥೆ 4:1). ಅಲ್ಲದೆ ಅವರು **ಬಂಗಾರ ಬೆಳ್ಳಿ ಕಲ್ಲು ಮರ ಇವೇ ಮುಂತಾದವುಗಳಿಂದ ಮಾಡಲ್ಪಟ್ಟು ನೋಡಲಾರದೆ ಕೇಳಲಾರದೆ ನಡೆಯಲಾರದೆ ಇರುವ ವಿಗ್ರಹಗಳ ಪೂಜೆಯನ್ನೂ ಬಿಡಲಿಲ್ಲ. ವಿಗ್ರಹಗಳ** ಕುರಿತಾದ ಇದೇ ರೀತಿಯ ಬಣ್ಣನೆಗಳನ್ನು ಬೈಬಲಿನುದ್ದಕ್ಕೂ ಕಾಣಬಹುದಾಗಿದೆ (ನೋಡಿರಿ ಧರ್ಮೋಪದೇಶಕಾಂಡ 4:28; ಕೀರ್ತನೆ 115:4-8; 135:15-18; ಯೆಶಾಯ 44:12-20; ಯೆರೆಮೀಯ 1:16; ಮೀಕ 5:13; ಅಪೊಸ್ತಲರ ಕೃತ್ಯಗಳು 7:41).

**ವಚನ 21.** ಮಾನವರ ಪಶ್ಚಾತ್ತಾಪವಿಲ್ಲದ ಪ್ರತಿಕ್ರಿಯೆಯ ಕುರಿತು ಪುನಃ ಪ್ರಸ್ತಾಪಿಸಿದ ಬಳಿಕ, ಯೋಹಾನನು ಮಾನವ ಜನಾಂಗದವರು *ಶರೀರಾಭಿಲಾಷೆಯ ಪಾಪಗಳನ್ನು* ಸಹ ಬಿಡದೆ ಅಂಟಿಕೊಂಡಿದ್ದರೆಂಬುದನ್ನು ಒತ್ತಿ ಹೇಳುತ್ತಾನೆ. ವಿಗ್ರಹಾರಾಧನೆಯು ಬೇರು ಆಗಿದ್ದಲ್ಲಿ ಅದರ ಫಲವು ಭಕ್ತಿಹೀನತೆಯೇ ಆಗಿರುವದು. ಮಾನವರ ಅವನತಿಯನ್ನು ವಿವರಣೆಯೊಂದಿಗೆ ತಿಳಿಸುವವನಾಗಿ, ಪೌಲನು ಮೊದಲನೆಯದಾಗಿ ಗಮನಕ್ಕೆ ತಂದಿದ್ದೇನೆಂದರೆ, "ಅವರು ಸತ್ಯದೇವರನ್ನು ಬಿಟ್ಟು ಅಸತ್ಯವಾದದ್ದನ್ನು ಹಿಡಿದುಕೊಂಡು ಸೃಷ್ಟಿಕರ್ತನನ್ನು ಪೂಜಿಸದೆ ಸೃಷ್ಟಿವಸ್ತುಗಳನ್ನೇ ಪೂಜಿಸಿ ಸೇವಿಸುವವರಾದರು" (ರೋಮಾ 1:25). ಅವರ ವಿಗ್ರಹಾರಾಧನೆಯು ನಂತರದಲ್ಲಿ ಈ ಕೆಳಗಿನ ಜೀವನಶೈಲಿಯಲ್ಲಿ ಫಲಿತಗೊಂಡಿತ್ತು:

> [ಅವರು] ಸಕಲವಿಧವಾದ ಅನ್ಯಾಯ ದುರ್ಮಾರ್ಗತನ ಲೋಲುಪ್ತಿ ದುಷ್ಟತ್ವಗಳಿಂದಲೂ ಹೊಟ್ಟೇಕಿಚ್ಚು ಕೊಲೆ ಜಗಳ ಮೋಸ ಹಗೆತನಗಳಿಂದಲೂ ತುಂಬಿದವರಾದರು.ಅವರು ಕಿವಿ ಊದುವವರೂ ಚಾಡಿಹೇಳುವವರೂ ದೇವರನ್ನು ದ್ವೇಷಿಸುವವರೂ ಸೊಕ್ಕಿನವರೂ ಅಹಂಕಾರಿಗಳೂ ಬಡಾಯಿಕೊಚ್ಚುವವರೂ ಕೇಡನ್ನು ಕಲ್ಪಿಸುವವರೂ ತಂದೆತಾಯಿಗಳ ಮಾತನ್ನು ಕೇಳದವರೂ ವಿವೇಕವಿಲ್ಲದವರೂ ಮಾತಿಗೆ ತಪ್ಪುವವರೂ ಮಮತೆಯಿಲ್ಲದವರೂ ಕರುಣೆಯಿಲ್ಲದವರೂ ಆದರು (ರೋಮಾ 1:29-31).

21ನೇ ವಚನವು ಶರೀರಭಾವದ ನಾಲ್ಕು ನಿರ್ದಿಷ್ಟವಾದ ಪಾಪಗಳ ಪಟ್ಟಿಯನ್ನು ಮಾಡುವ ಮೂಲಕ ಯೋಹಾನನ ದಿನದಲ್ಲಿದ್ದ ನೈತಿಕ ವಾತಾವರಣವನ್ನು ಕುರಿತು ನಮಗೊಂದು ತಿಳುವಳಿಕೆಯನ್ನು ಒದಗಿಸುತ್ತದೆ: **ಇದಲ್ಲದೆ ತಾವು ನಡಿಸುತ್ತಿದ್ದ ಕೊಲೆ ಮಾಟ ಜಾರತ್ವ ಕಳ್ಳತನ**

**ಇವುಗಳೊಳಗೆ ಒಂದನ್ನೂ ಬಿಟ್ಟು ಮಾನಸಾಂತರಮಾಡಿಕೊಳ್ಳಲಿಲ್ಲ.** ಪಟ್ಟಿ ಮಾಡಲ್ಪಟ್ಟಿರುವ ನಾಲ್ಕರೊಳಗೆ ಮೂರು ಪಾಪಗಳು ದಶಾಜ್ಞೆಗಳಲ್ಲಿ ಖಂಡಿಸಲ್ಪಟ್ಟಿರುತ್ತವೆ: ಆರನೆಯ, ಏಳನೆಯ, ಮತ್ತು ಎಂಟನೆಯ ಆಜ್ಞೆಗಳಾವವೆಂದರೆ "ನೀವು ನರಹತ್ಯೆ ಮಾಡಬಾರದು," "ವ್ಯಭಿಚಾರ ಮಾಡಬಾರದು," ಮತ್ತು "ಕದಿಯಬಾರದು" (ವಿಮೋಚನಕಾಂಡ 20:13-15). ಹಾಗೆಂದು ನೋಡಿದರೆ ಕ್ರೈಸ್ತರು ಇನ್ನು ಮೇಲೆ ದಶಾಜ್ಞೆಗಳಿಗೆ ಅಧೀನರಾಗಿರುವದಿಲ್ಲ, ಆದರೆ ಹತ್ತು ಆಜ್ಞೆಗಳೊಳಗೆ ಒಂಭತ್ತು ಆಜ್ಞೆಗಳು ಹೊಸ ಒಡಂಬಡಿಕೆಯಲ್ಲಿ ಪುನರಾವರ್ತಿಸಲ್ಪಟ್ಟಿವೆ, ಅವುಗಳಲ್ಲಿ 21ನೇ ವಚನದಲ್ಲಿ ಪಟ್ಟಿ ಮಾಡಲಾಗಿರುವ ಪಾಪಗಳನ್ನು ಖಂಡಿಸುತ್ತವೆ (ನೋಡಿರಿ ರೋಮಾ 13:9). ಹೊಸ ಒಡಂಬಡಿಕೆಯಲ್ಲಿ ಪುನರಾವರ್ತಿಸಲ್ಪಡದ ಏಕೈಕ ಆಜ್ಞೆಯೆಂದರೆ ಅದು ನಾಲ್ಕನೆಯ ಆಜ್ಞೆ: "ಸಬ್ಬತ್ ದಿನವನ್ನು ದೇವರ ದಿನವೆಂದು ಆಚರಣೆಗೆ ತರುವದಕ್ಕೆ ಜ್ಞಾಪಕದಲ್ಲಿಟ್ಟುಕೊಳ್ಳಬೇಕು."

ಸಾಮಾನ್ಯವಾಗಿರುವ, **ಕೊಲೆ**ಯನ್ನು ನಿಷೇಧಿಸಿರುವದು ಜೀವವನ್ನು ಕಾಪಾಡುವದಕ್ಕಾಗಿ ಆಗಿರುತ್ತದೆ (ನೋಡಿರಿ ಆದಿಕಾಂಡ 9:6; ಅರಣ್ಯ 35:33). **ಜಾರತ್ವ**ದ ವಿರುದ್ಧ ನಿಷೇಧವನ್ನು ಮಾಡಿರುವ ಒಂದು ಉದ್ದೇಶವೆಂದರೆ ದೇಹವನ್ನು ಕಾಪಾಡುವದಕ್ಕಾಗಿಯೇ ಆಗಿತ್ತು (ನೋಡಿರಿ 1 ಕೊರಿಂಥ 6:18; ಎಫೆಸ 5:3; 1 ಥೆಸಲೋನಿಕ 4:3). "ಜಾರತ್ವ" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು πορνεία (*porneia*) ಎಂಬ ಪದದಿಂದ ಬಂದದ್ದಾಗಿದ್ದು, ಅದು ಹಾದರಕ್ಕೆ ಬಳಸುವ ಪದವಾಗಿರುತ್ತದೆ (KJV). ಪ್ರಕಟನೆ 9:21ರಲ್ಲಿ, ಈ ಪದವು ಸಾಮಾನ್ಯ ಅರ್ಥದಲ್ಲಿ ಲೈಂಗಿಕ ಪಾಪವನ್ನು ಸೂಚಿಸುವದಾಗಿದೆ. NIVಯಲ್ಲಿ "ಲೈಂಗಿಕ ಅನೈತಿಕತೆ" ಎಂದಿರುತ್ತದೆ. ಈ ನಿಷೇಧವು ದಾಂಪತ್ಯವನ್ನು ಮತ್ತು ಮನೆಯನ್ನು ಕಾಪಾಡುವದಕ್ಕಾಗಿ ಆಗಿತ್ತು. **ಕಳ್ಳತನ** ವಿರುದ್ಧದ ನಿಷೇಧವು ಆಸ್ತಿಯನ್ನು ಕಾಪಾಡುವದಕ್ಕಾಗಿ ಆಗಿತ್ತು (ನೋಡಿರಿ ಜ್ಞಾನೋಕ್ತಿ 30:9; ಜೆಕರ್ಯ 5:3; ಎಫೆಸ 4:28).

ಪಟ್ಟಿಯಲ್ಲಿರುವ ಎರಡನೆಯ ಪಾಪವು - **ಮಾಟ** - ಉಳಿದ ಮೂರು ಪಾಪಗಳಷ್ಟು ಪರಿಚಿತವಾಗಿರುವದಿಲ್ಲ. "ಮಾಟ" ಎಂಬುದು φαρμακεία (*pharmakeia*) ಎಂಬ ಪದದಿಂದ ಅನುವಾದಿಸಲ್ಪಟ್ಟಿದ್ದು, ಈ ಪದದಿಂದಲೇ "pharmacy" (ಔಷಧಶಾಲೆ) ಎಂಬ ಪದವು ಬಂದಿರುತ್ತದೆ. ಈ ಪದವು "ಪ್ರಾಥಮಿಕವಾಗಿ 'ಔಷಧ' [ಅಥವಾ] 'ಮದ್ದುಗಳ' ಬಳಕೆಯನ್ನು ಸೂಚಿಸುವದಾಗಿತ್ತು"[40] ಎಂದು W. E. Vine ವಿವರಿಸುತ್ತಾನೆ. ಈ ಎರಡನೆಯ ಬಳಕೆಯ ಕುರಿತಾಗಿ Vineನು ಹೀಗೆ ಬರೆದನು,

> ಮಾಟದಲ್ಲಿ, ಮದ್ದುಗಳ ಬಳಕೆಯ ಜೊತೆಯಲ್ಲಿ . . . ಸಾಮಾನ್ಯವಾಗಿ ಮಾಂತ್ರಿಕ ಶಕ್ತಿಗಳ ಆವಾಹನೆ ಮಾಡುವದು ಮತ್ತು ಮಂತ್ರಪಠನಗಳನ್ನು, ಯಂತ್ರ, ತಾಯಿತ ಇತ್ಯಾದಿಗಳನ್ನೂ ಬಳಸಲಾಗುತ್ತಿತ್ತು. ಇದೆಲ್ಲವೂ ರೋಗಿಯನ್ನು ದೆವ್ವಗಳ ಗಮನ ಮತ್ತು ಶಕ್ತಿಯಲ್ಲಿಯೇ ಇರುವಂತೆ ಮಾಡುವದಕ್ಕಾಗಿ ರಚಿಸಲ್ಪಟ್ಟಿದ್ದೇವೆಂದು ತೋರುತ್ತದೆ, ಆದರೆ ವಾಸ್ತವದಲ್ಲಿ ರೋಗಿಯನ್ನು ನಿಗೂಢವಾದ ಸಂಪನ್ಮೂಲಗಳಿಂದ ಮತ್ತು ಮಾಟಗಾರನ ಶಕ್ತಿಗಳಿಂದ ಆಕರ್ಷಿತನಾಗುವಂತೆ ಮಾಡುವದಕ್ಕಾಗಿಯೇ ಆಗಿತ್ತು.[41]

ಗ್ರೀಕ್ ಭಾಷೆಯ *pharmakeia* ಎಂಬ ಪದವು ಹೊಸ ಒಡಂಬಡಿಕೆಯಲ್ಲಿ ಮೂರು ಸಾರಿ ಕಾಣಿಸಿಕೊಳ್ಳುತ್ತದೆ: ಪ್ರಕಟನೆ 9:21; 18:23; ಮತ್ತು ಗಲಾತ್ಯ 5:20. KJVಯು ಆ ಪದವನ್ನು ಗಲಾತ್ಯ 5:20ರಲ್ಲಿ "ಮಾಟಮಂತ್ರ" ಎಂದು ಅನುವಾದಿಸುತ್ತದೆ ಆದರೆ NKJVಯು "ಮಂತ್ರವಿದ್ಯೆ" ಎಂದು ಅನುವಾದಿಸುತ್ತದೆ. NIVಯು ಪ್ರಕಟನೆ 9:21ರಲ್ಲಿ "ಮಾಂತ್ರಿಕ ಕಲೆಗಳು" ಎಂದು ಅನುವಾದಿಸುತ್ತದೆ, ಆದರೆ ಪ್ರಕಟನೆ 18:3ರಲ್ಲಿ "ಮಾಂತ್ರಿಕವಾದ ಮಂತ್ರ"

ಎಂದು ಅನುವಾದಿಸುತ್ತದೆ. "ಇಂದ್ರಜಾಲ" ಮತ್ತು "ಮಂತ್ರವಿದ್ಯೆ" ನಡುವಿನ ವ್ಯತ್ಯಾಸವನ್ನು ಗಮನಕ್ಕೆ ತಂದರೆ ಪ್ರಯೋಜನಕರವಾಗಿರಬಹದಾಗಿದೆ: ಖ್ಯಾತಿಯ ಇಂದ್ರಜಾಲಕಾರರು ("ವೇದಿಕೆಯ ಜಾದೂಗಾರರು") ತಮ್ಮ ತಂತ್ರಗಳನ್ನು ಯಾವದೋ ಒಂದು ನಿಗೂಢ ಶಕ್ತಿಯ ಸಹಾಯದಿಂದ ಮಾಡುವಂತೆ ನಟಿಸು*ವದಿಲ್ಲ*; ಅವರ "ಜಾದೂ ಕ್ರಿಯೆಗಳು" ಒಗಟಿಗಿಂತಲೂ ಸ್ವಲ್ಪ ಅಧಿಕವಾಗಿದ್ದು ಅವುಗಳನ್ನು ಬಿಡಿಸುವದಕ್ಕೆ ಪ್ರಯತ್ನಿಸುವದರಲ್ಲಿ ಪ್ರೇಕ್ಷಕರು ಆನಂದಿಸುವವರಾಗಿದ್ದಾರೆ.

ಒಬ್ಬ ಕಟ್ಟುನಿಟ್ಟಿನ preteristನು (ಅಂತ್ಯಕಾಲದ ಪ್ರವಾದನೆಗಳು ನೆರವೇರಿ ಬಿಟ್ಟಿವೆ ಎಂದು ನಂಬುವವನು) ಪ್ರಕಟನೆ 9:21 ರಲ್ಲಿರುವ ಕೊಲೆಗಳು, ಮಂತ್ರವಿದ್ಯೆ, ಜಾರತ್ವಗಳು, ಮತ್ತು ಕಳ್ಳತನಗಳ ಕುರಿತು ಓದಿ, ಅವುಗಳೆಲ್ಲಾ ಯೋಹಾನನ ದಿನದಲ್ಲಿದ್ದ ಮನುಷ್ಯರಿಗಷ್ಟೆ ವಿಶಿಷ್ಟವಾಗಿದ್ದ ಸ್ಥಿತಿಯಾಗಿತ್ತು ಎಂದು ವಾದಿಸುತ್ತಾನೆ. ಒಬ್ಬ ಭವಿಷ್ಯವಾದಿ/ಸಹಸ್ರವರ್ಷಪೂರ್ವಾಡಳಿತ ವಾದಿಯು ವಾಕ್ಯಭಾಗವು ಭವಿಷ್ಯದಲ್ಲಿ ಏಳು ವರ್ಷಗಳ ಒಂದು ಕಾಲಾವಧಿಯಲ್ಲಿ ಸಂಭವಿಸುತ್ತವೆಂದು ವಾದ ಮಾಡುತ್ತಾನೆ. ಇವೆರಡರಲ್ಲಿ ಯಾವದೇ ನಿಲುವನ್ನು ಬೆಂಲಿಸುವವರು ಒಂದು ಕ್ಷಣವನ್ನು ತೆಗೆದುಕೊಂಡು ಅವುಗಳ ಸುತ್ತಲು ಒಮ್ಮೆ ನೋಡಬೇಕು. ಈ ಪಾಪಗಳು ಇದ್ದವು, ಇದ್ದಾವೆ, ಮತ್ತು ಕರ್ತನು ಬರುವ ತನ ಪಶ್ಚಾತ್ತಾಪವಿಲ್ಲದ ಜಗತ್ತಿನ ಗುಣಲಕ್ಷಣವಾಗಿರಲಿದೆ.

20 ಮತ್ತು 21 ವಚನಗಳಲ್ಲಿ, ಯೋಹಾನನು ಹೃದಯದ ಪಾಪಗಳನ್ನು ಮತ್ತು ಶರೀರಾಭಿಲಾಷೆಯ ಪಾಪಗಳ ಪಟ್ಟಿಯನ್ನು ಮಾಡಿದನು. ದೇವರು ಇವೆರಡ ವಿಷಯದಲ್ಲಿ ಚಿಂತೆ ಹೊಂದಿದ್ದಾನೆ. ಪಶ್ಚಾತ್ತಾಪದಲ್ಲಿ ಒಬ್ಬ ವ್ಯಕ್ತಿಯ ಅಂತರಂಗ ಮತ್ತು ಬಹಿರಂಗ, ಹೃದಯ ಹಾಗೂ ಶರೀರಾಧೀನಸ್ವಭಾವ, ಒಬ್ಬನ ಯೋಚನೆಗಳು ಹಾಗೂ ಕ್ರಿಯೆಗಳು ಎರಡೂ ಭಾಗಿಯಾಗಿರುತ್ತವೆ. ನಿಜವಾದ ಪಶ್ಚಾತ್ತಾಪವು "ಜೀವಿತದಲ್ಲಿ ಬದಲಾವಣೆಯನ್ನು ತರುವಂತಹ ಮನಸ್ಸಿನಲ್ಲಿ ಆಗುವ ಬದಲಾವಣೆಯೇ" (ನೋಡಿರಿ ಅಪೊಸ್ತಲರ ಕೃತ್ಯಗಳು 26:20). Mulhollandನ ಮಾತುಗಳಲ್ಲಿ, ನಮಗೆ "ಒಂದು ಆಂತರೀಕ ಬದಲಾದ ದೃಷ್ಟಿ" ಮತ್ತು "ಬಹಿರಂಗದ ಪುನರಾರಚನೆ" ಅಗತ್ಯವಿರುತ್ತದೆ.[42]

ಏಳನೆಯ (ಮತ್ತು ಕಡೇ) ತುತೂರಿಯು 11ನೇ ಅಧ್ಯಾಯದ ತನಕ ಊದಲ್ಪಡುವದಿಲ್ಲ, ಆದರೆ ಈ ಸತ್ಯಗಳು ಈಗಾಗಲೇ ತುತೂರಿಗಳ ಕುರಿತ ನಮ್ಮ ಅಧ್ಯಯನದಿಂದ ಗ್ರಹಿಸಿಕೊಳ್ಳಬಲ್ಲವುಗಳಾಗಿವೆ:

1. ಪಾಪವು ಭಯಂಕರವಾದದ್ದು.
2. ಪಾಪವು ತಾನು ಮುಟ್ಟುವ ಎಲ್ಲವನ್ನೂ ನಾಶಗೊಳಿಸುತ್ತದೆ.
3. ಪಾಪವು ದೇವರಿಗೆ ಒಂದು ಅಪಮಾನವಾಗಿರುತ್ತದೆ.
4. ದೇವರು ಕರುಣೆಯುಳ್ಳವನು ಮತ್ತು ನಾವು ಪಾಪ ಮಾಡುವಾಗ ನಮ್ಮ ವಿಷಯದಲ್ಲಿ ದೀರ್ಘಶಾಂತಿಯಿಂದಿರುತ್ತಾನೆ.
5. ನಾವು ದೇವರ ಕರುಣೆಯಿಂದ ಪ್ರಯೋಜನವನ್ನು ಹೊಂದಿಕೊಳ್ಳಬೇಕಾದರೆ, ನಾವು ಪಶ್ಚಾತ್ತಾಪ ಪಡಬೇಕು.
6. ನಿಜವಾದ ಪಶ್ಚಾತ್ತಾಪವು ನಮ್ಮನ್ನು ಒಳಗೆ ಮತ್ತು ಹೊರಗೆ ಬದಲಾಯಿಸುವದಾಗಿದೆ.
7. ಸಮಯವು ಕ್ಲುಪ್ತ ಹಾಗೂ ಅನಿಶ್ಚಿತವಾಗಿದೆ. ನಾವು ಪಶ್ಚಾತ್ತಾಪ ಪಡಲಿಚ್ಛಿಸಿದರೆ, ನಾವು ಈಗಲೇ ಅದನ್ನು ಮಾಡತಕ್ಕದ್ದು!

# ಅನ್ವಯಿಸುವಿಕೆ

## ಐದನೆಯ ತುತೂರಿಯು ಊದಲ್ಪಡುತ್ತದೆ (9:1-11)

9:9-11ರ ಕುರಿತಾದ ಒಂದು ಪ್ರಸಂಗಕ್ಕೆ "ಪಾಪದ ಪೀಡೆ" ಎಂದು ಶಿರ್ಷೀಕೆಯನ್ನು ಕೊಡಬಹುದು. ಒಂದು ನಾಟಕೀಯವಾದ ಶಿರ್ಷೀಕೆ ಬೇಕೆಂದರೆ, ನೀವು "ಅಧೋಲೋಕದಿಂದ ಬಂದ ಮಿಡತೆಗಳು" ಎಂದು ಆರಿಸಿಕೊಳ್ಳಬಹುದು. ಒಂದು *ನಿರ್ದಿಷ್ಟವಾದ* ಪಾಪದ ಪರಿಣಾಮಗಳ ಮೇಲೆ ಒತ್ತು ಹೊಂದಿರುವ ಒಂದು ಸಂದೇಶವಾಗಿ ಈ ವಾಕ್ಯಭಾಗವನ್ನು ಬಳಸಬಹುದಾಗಿದೆ, ಉದಾಹರಣೆಗೆ ಚೆನ್ನಾಗಿ ಪ್ರಚಾರ ಮಡಲ್ಪಟ್ಟ ಪರಿಣಾಮಗಳನ್ನು, ಏಡ್ಸ್ ಉಂಟು ಮಾಡುವ ಸಲಿಂಗಕಾಮ.

## ನಿಮ್ಮನ್ನು ದರ್ಶನದಲ್ಲಿಟ್ಟುಕೊಳ್ಳುವದು (9:13-19)

ಪಾಪವು ಹೆಚ್ಚುಕಡಿಮೆ ಹಾನಿಕಾರಕವಲ್ಲ ಮತ್ತು ಅದು ಜೀವನ ಗುಣಮಟ್ಟವನ್ನು ಹೆಚ್ಚಿಸುವದಾಗಿದೆ ಎಂದು ಲೋಕವು ಹೇಳುತ್ತದೆ. ಅದನ್ನು ಖಂಡಿಸುತ್ತಾ, ದೇವರು ತತ್ಪರಿಣಾಮವಾಗಿ ಹೀಗೆ ಹೇಳುತ್ತಾನೆ, "ಪಾಪವು ಏನು ಮಾಡುತ್ತದೆಂಬುದನ್ನು ತಿಳಯುವದಾದರೆ, ನೋಡಿ ಕಲಿತುಕೊಳ್ಳುವಿರಿ" - ಮತ್ತು ಬಳಿಕ ಆತನು ಅಧೋಲೋಕದಿಂದ ಹೊರ ಬರುವ ಕೊಳ್ಳೆ ಹೊಡೆಯುವ ಜೀವಿಗಳ ಭಯಂಕರವಾದ ಚಿತ್ರಣವನ್ನು ಮುಂದಿಡುತ್ತಾನೆ. ದೇವರ ಸಂದೇಶಕ್ಕೆ ಒಂದು ಭಾವವನ್ನು ಪಡೆದುಕೊಳ್ಳಬೇಕಾದರೆ, ನಿಮ್ಮನ್ನು ಈ ದರ್ಶನದೊಳಗೆ ಇಟ್ಟುಕೊಳ್ಳಿರಿ. ದೇವರು ಸ್ನೇಹಕ್ಕಾಗಿ ನೀಡಿದ ಪ್ರಥಮ ಸೂಚನೆಗಳನ್ನು ತಿರಸ್ಕರಿಸಿರುವ ಒಬ್ಬ ಪುರುಷ ಅಥವಾ ಸ್ತ್ರೀಯಾಗಿ ನಿಮ್ಮನ್ನು ಊಹಿಸಿಕೊಳ್ಳಿರಿ:

ನೀವೊಂದು ಹಸುರಾದ ಹುಲ್ಲುಗದ್ದೆಯನ್ನಿ ನಡೆದು ಸಾಗುತ್ತಿರುವಿರಿ, ಮೇಲೆ ಆಕಾಶವು ನೀಲಿಯಾಗಿದೆ, ಮತ್ತು ಸೂರ್ಯನು ನಿಮ್ಮ ಬೆನ್ನನ್ನು ಬೆಚ್ಚಗೆ ಮಾಡುತ್ತಾನೆ. ಯಾವ ಎಚ್ಚರಿಕೆಯನ್ನು ಕೊಡದೆ ಏಕಾಏಕಿ ಒಂದು ಬೃಹತ್ ರಂದ್ರವು ನಿಮ್ಮ ಕಾಲುಗಳ ಕೆಳಗೆ ಬಾಯಿ ತೆರೆದುಕೊಳ್ಳುತ್ತದೆ, ಮತ್ತು ಹೊಲಸಾದ ನೀಲಿ ಬಣ್ಣದ ಹೊಗೆಯು ಹೊರಹೊಮ್ಮುತ್ತದೆ, ಸೂರ್ಯನನ್ನು ಮೊಬ್ಬಾಗಿಸುತ್ತದೆ ಮತ್ತು ನಿಮ್ಮ ಜಗತನ್ನು ಮಂಕು ಕವಿಯುವಂತೆ ಮಾಡುತ್ತದೆ. ನೀವೊಂದು ಗಿರ್ರನೆ ಶಬ್ದವನ್ನು ಕೇಳಿಸಿಕೊಳ್ಳುವಿರಿ, ಆ ಗುಯ್ಯೆನ್ನುವ ಶಬ್ದವು ಅಧಿಕಗೊಳ್ಳುತ್ತಾ ನಿಮ್ಮ ಕಿವಿಪೊರೆಗಳು ಹರಿದು ಹೋಗುವಷ್ಟು ತೀಕ್ಷ್ಣಗೊಳ್ಳುತ್ತದೆ. ಒಮ್ಮೆಲೇ, ನಿಮ್ಮ ಕಗ್ಗತ್ತಲಿನಲ್ಲಿನ ದುಸ್ವಪ್ನದ ಜೀವಿಗಳು ನಿಮ್ಮನ್ನು ಸುತ್ತುವರೆದಿವೆ, ಪೈಶಾಚಿಕ ಜೀವಿಗಳು ಗಾಳಿಯಲ್ಲೆಲ್ಲಾ ಹಾರಾಡುತ್ತಿವೆ.

ಅವುಗಳ ಬೃಹತ್ತಾಕಾರದ ಮಿಡತೆಗಳಂತಿರುತ್ತವೆ, ಆದರೆ ಅವುಗಳು ನೀವು ನೋಡಿರಬಹುದಾದ ಯಾವದೇ ಮಿಡತೆಗಳಂತೆಯೂ ಇರುವದಿಲ್ಲ. ಅವುಗಳು ಚೇಳುಗಳಂತೆ ಆಯುಧ ಹೊಂದಿವೆ, ಕುದುರೆಯ ಆಕಾರದಲ್ಲಿದ್ದು ಅರಸರಂತೆ ಕಿರೀಟ ಧರಿಸಿರುತ್ತವೆ. ಅವುಗಳಿಗೆ ಮನುಷ್ಯರಂಥ ಮುಖಗಳಿವೆ, ಸ್ತ್ರೀಯರಂತೆ ಕೂದಲುಗಳಿವೆ, ಮತ್ತು ಸಿಂಹಗಳಂತೆ ಹಲ್ಲುಗಳಿವೆ. ಅವುಗಳು ರಕ್ಷಾಕವಚ ಲೇಪಿತವಾಗಿವೆ ಮತ್ತು ರೆಕ್ಕೆಗಳನ್ನು ಹೊಂದಿವೆ, ಹಾಗೂ ಕಿವಿಗಳನ್ನು ಕಿವುಡುಗೊಳಿಸುವಷ್ಟು ಶಬ್ದದಿಂದ ಚಲಿಸುತ್ತವೆ.[43]

ಇನ್ನಷ್ಟು ಕಳವಳಗೊಳಿಸುವ ಸಂಗತಿಯೆಂದರೆ ಅವುಗಳು ಕ್ಷೇತ್ರದಲ್ಲಿರುವ ಹುಲುಸಾದ ಗಿಡಮರಗಳನ್ನು ಲಕ್ಷ್ಯಿಸುವದಿಲ್ಲ; ಅವುಗಳು ನಿಮಗೆ ಸಮೀಪವಾಗಿಯೇ ಬರುತ್ತಿರುತ್ತವೆ. ಅವುಗಳ ಮನುಷ್ಯ-ರೀತಿಯ ಮುಖಗಳ ಮೇಲೆ ಒಂದು ಅಶುದ್ಧವಾದ ಹಿಗ್ಗು ಕಾಣಿಸುತ್ತದೆ.

ನಿಮ್ಮ ಹಣೆಯ ಮೇಲಿಂದ ಬೆವರು ಹುಟ್ಟಿಕೊಳ್ಳುತ್ತದೆ. ನಿಮ್ಮ ಹೃದಯವು ನಿಮ್ಮ ಎದೆಯಿಂದ ಹೊರಗೆ ಜಿಗಿದು ಬಿಡುವದೋ ಎಂಬಂತೆ ಅನ್ನಿಸುವದು. ನೀವು ಆ ಕಡೆಗೆ ಮತ್ತು ಈ ಕಡೆಗೆ ತಿರುಗಿಕೊಳ್ಳುವಿರಿ, ಆದರೆ ನೀವು ಕದಲಲಾಗದಂತೆ ಸುತ್ತುವರೆಯಲ್ಪಟ್ಟಿದ್ದೀರಿ. ತಪ್ಪಿಸಿಕೊಳ್ಳಲು ದಾರಿಯೇ ಇರುವದಿಲ್ಲ.

ಜೀವಿಗಳೊಳಗೆ ಒಂದು ಮುಂದೆ ಬಾಗಿ ತನ್ನ ವಿಷದ ತುದಿಯುಳ್ಳ ಬಾಲದಿಂದ ಚುಚ್ಚುತ್ತದೆ. ನೀವು ವೇದನೆಯಿಂದ ತುಂಬಿ ಹೋಗುವಿರಿ. ನಿಮ್ಮ ನರನಾಡಿಗಳ ಮೂಲಕ ವಿಷವು ನಿಮ್ಮ ದೇಹದ ಪ್ರತಿಯೊಂದು ಅಂಗಗಳಿಗೆ ಕೊಂಡೊಯ್ಯಲ್ಪಡುವದು ನಿಮ್ಮ ಅನುಭವಕ್ಕೆ ಬರುತ್ತದೆ. ಆಗ ಇನ್ನೊಂದು ಮಿಡತೆಯು ದಾಳಿ ಮಾಡುತ್ತದೆ, ಮತ್ತು ಅದಾದ ಮೇಲೆ ಮತ್ತೊಂದು ದಾಳಿ ಮಾಡುತ್ತದೆ. ನೀವು ಕುಸಿದು ಮೊಣಕಾಲುಗಳ ಮೇಲೆ ಬೀಳುವಿರಿ. ಶೀಘ್ರದಲ್ಲಿಯೇ ಅವುಗಳು ನಿಮ್ಮನ್ನು ಸುತ್ತಿವರೆದು ನಿಮ್ಮ ಬಾಹುಗಳು, ಕೈಗಳು, ಕಾಲುಗಳು, ಪಾದ, ಮುಂಡ, ನಿಮ್ಮ ಕುತ್ತಿಗೆ, ನಿಮ್ಮ ತಲೆ, ಮುಖ ಎಲ್ಲವನ್ನು ಕೊಂಡಿಯಿಂದ ಚುಚ್ಚುವವು. ನೀವು ಒದ್ದಾಡುವ, ಪೀಡಿಸುವ ದೇಹಗಳ ಭಾರದ ಕೆಳಗೆ ಕುಸಿದು ಬೀಳುವಿರಿ. ಅಲ್ಲಿ ನೀವು ನೆಲದ ಮೇಲೆ ಉರಿಯುವ ನೋವಿನಿಂದ ವಿಲವಿಲವೆಂದು ಒದ್ದಾಡುತ್ತಾ ಬಿದ್ದಿರುವಿರಿ, ಅರೆಬರೆ ನೆನಪಿರುವ ಮಾತುಗಳು ನಿಮ್ಮ ಯೋಚನೆಗಳ ಮೂಲಕ ಮಿನುಗುವವು: “ಪಾಪವು ಕೊಡುವ ಸಂಬಳ ಮರಣ” (ರೋಮಾ 6:23).

ಪಾಪವು ಪಾಪಿಗೆ *ಇದನ್ನೇ* ಮಾಡುತ್ತದೆ ಎಂಬುದನ್ನು ನಾವು ತಿಳಿದುಕೊಳ್ಳಬೇಕೆಂದು ದೇವರು ಬಯಸುತ್ತಾನೆ! ನಾವು ಇದನ್ನು ತಿಳಿಯಬೇಕೆಂದು ಆತನು ಏಕೆ ಬಯಸುತ್ತಾನೆ? ಆತನು ಕೇವಲ ನಮ್ಮನ್ನು ಭಯಪಡಿಸುವದಕ್ಕೇ ಮಾತ್ರವೇ ಬಯಸುವದಿಲ್ಲ, ಆದರೆ ನಮ್ಮ ಪಾಪಗಳಿಂದ ವಿಮುಖರಾಗಿ ಆತನ ಕಡೆಗೆ ತಿರುಗಿಕೊಳ್ಳುವಂತೆ ನಮ್ಮನ್ನು ಸ್ಫೂರ್ತಿಗೊಳಿಸಲು ಇಚ್ಛಿಸುತ್ತಾನೆ. ಹಳೆಯ ಒಡಂಬಡಿಕೆಯಲ್ಲಿ, ಯೋವೇಲನ ಪುಸ್ತಕದಲ್ಲಿ ಮಿಡತೆಗಳ ದಾಳಿಯ ಬಳಿಕ ಪಶ್ಚಾತ್ತಾಪ ಪಡುವಂತೆ ಕರೆಯೊಂದು ಕೊಡಲ್ಪಡುತ್ತದೆ:

> ಯೇಹೋವನು ಇಂತೆನ್ನುತ್ತಾನೆ - ಈಗಲಾದರೋ ನೀವು ಮನಃಪೂರ್ವಕವಾಗಿ ನನ್ನ ಕಡಗೆ ತಿರುಗಿಕೊಂಡು ಉಪವಾಸಮಾಡಿರಿ, ಅಳಿರಿ, ಗೋಳಾಡಿರಿ; . . . ನಿಮ್ಮ ದೇವರಾದ ಯೆಹೋವನ ಕಡೆಗೆ ತಿರುಗಿಕೊಳ್ಳಿರಿ; ಆತನು ದಯೆಯೂ ಕನಿಕರವೂ ದೀರ್ಘಶಾಂತಿಯೂ ಮಹಾಕೃಪೆಯೂ ಉಳ್ಳವನಾಗಿ ಮಾಡಬೇಕೆಂದಿದ್ದ ಕೇಡಿಗೆ ಮನಮರುಗುತ್ತಾನೆ (ಯೋವೇಲ 2:12, 13).

ಯೋಹಾನನ ದಿನದಲ್ಲಿ ದೇವರಿಂದ ಎಚ್ಚರಿಸಲ್ಪಟ್ಟವರು ಕಿವಿಗೊಡಲಿಲ್ಲ (ಪ್ರಕಟನೆ 9:20). ನೀವು ಅವರ ದುರಂತಮಯ ಹೆಜ್ಜೆಗಳನ್ನೇ ಅನುಸರಿಸುವಿರೋ, ಅಥವಾ ನೀವು ಪಶ್ಚಾತ್ತಾಪ ಪಡುವಂತೆ ಕರ್ತನು ನೀಡುವ ಕರೆಗೆ ಕಿವಿಗೊಟ್ಟು ಸುವಾರ್ತೆಗೆ ವಿಧೇಯರಾಗುವಿರೋ? ನೀವು ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಅಥವಾ ನಿಮ್ಮ ಮೊದಲಿನ ಪ್ರೀತಿಗೆ ಪುನಃ ಹಿಂದಿರುಗುವ ಅಗತ್ಯವಿರುವದಾದರೆ, ಅದನ್ನು ಇಂದೇ ಮಾಡಿರಿ!

## ಪಾಪದ ಪರಿಣಾಮಗಳು (9:13-19)

1998ರ ಜನವರಿ ತಿಂಗಳಿನ *Christian Chronicle ಮ್ಯಾಗಜಿನ್ ಒಂದು ಪ್ರಮುಖ ಕಥೆಯನ್ನು ಪ್ರಕಟಿಸಿತ್ತು, ಅದು ಒಬ್ಬ ದೊಂಬಿಗಾರನು* Oklahoma ಕ್ರೈಸ್ತ ವಿಶ್ವವಿದ್ಯಾಲಯಕ್ಕೆ ಬೆಂಕಿ ಹಚ್ಚಿ 1.5 ಮಿಲಿಯನ್ ಡಾಲರಗಳಷ್ಟು ನಷ್ಟವನ್ನುಂಟು ಮಾಡಿದ್ದರ ಕುರಿತಾದ ಕಥೆಯಾಗಿತ್ತು. ಸರಿಯಾಗಿ ಅದಕ್ಕೆ ಕೆಳಗಿನ ಭಾಗದಲ್ಲಿ ಒಬ್ಬ ಯುವಕನು Kentuckyಯ

Paducah ಎಂಬಲ್ಲಿನ ಒಂದು ಶಾಲೆಯಲ್ಲಿ ಪ್ರಾರ್ಥನೆಗೆ ಕೂಡು ಬಂದಿದ್ದ ವಿದ್ಯಾರ್ಥಿಗಳ ಮೇಲೆ ಗುಂಡು ಹಾರಿಸುವದಕ್ಕೆ ಪ್ರಾರಂಭಿಸಿದ ಕಥೆಯು ಬರೆಯಲ್ಪಟ್ಟಿತ್ತು. ಆ ಗುಂಪಿನಲ್ಲಿದ್ದ ಮೂವರು ಸಭೆಯ ಸದಸ್ಯರಾಗಿದ್ದರು.

ಮೇಲಿನ ರೀತಿಯ ಘಟನೆಗಳು ಪ್ರಮುಖ ಸುದ್ದಿಗಳಾದವು, ಆದರೆ ಪ್ರತಿ ದಿನವೂ ಬೇರೆಯವರ ಜೀವಿತಗಳ ಮೇಲೆ ಪಾಪವು ಪರಿಣಾವನ್ನು ಬೀರುತ್ತಿದೆ: ಒಬ್ಬ ಪುರುಷನು ಬೇರೊಬ್ಬ ಸ್ತ್ರೀಯ ಹಿಂದೆ ಹೋಗುವದಕ್ಕಾಗಿ ಹೆಂಡತಿಯನ್ನು ತೊರೆದು ಬಿಡುತ್ತಾನೆ ಮತ್ತು ತನ್ನ ಕುಟುಂಬದ ಪ್ರತಿಯೊಬ್ಬ ಸದಸ್ಯನ ಜೀವಿತವನ್ನು ನಾಶನಕ್ಕೀಡು ಮಾಡುತ್ತಾನೆ. ಒಬ್ಬ ಕುಡುಕ ಚಾಲಕನು ಒಬ್ಬ ಪುರುಷ ಮತ್ತು ಆತನ ಹೆಂಡತಿಯನ್ನು ಕೊಲ್ಲುತ್ತಾನೆ, ಹೀಗೆ ಮೂವರು ಮಕ್ಕಳನ್ನು ಅನಾಥಗೊಳಿಸುತ್ತಾನೆ. ಸಭೆಯೊಳಗೆ ತನ್ನಿಷ್ಟದಂತೆ ನಡಿಸಬೇಕೆಂದು ಉದ್ದೇಶಿಸಿ ಒಬ್ಬನು ಸಭೆಯನ್ನು ಒಡೆಯುತ್ತಾನೆ ಮತ್ತು ಜನರನ್ನು ಕರ್ತನಿಂದ ದೂರಕ್ಕೆ ಓಡಿಸುತ್ತಾನೆ. ಬೆಂಕಿಯು ಧಹಿಸಿ ಬಿಡುವಂತೆ, ಹೊಗೆಯು ಕವಿದುಕೊಳ್ಳುವಂತೆ, ಮತ್ತು ಗಂಧಕವು ಸುಡುವಂತೆಯೇ, ನಮ್ಮ ಪಾಪಗಳು ಬೇರೆಯವರಿಗೆ ನೋವುಂಟು ಮಾಡುತ್ತವೆ ಮತ್ತು ನಾಶಗೊಳಿಸುತ್ತವೆ.

Owen Crouchನು ಹೀಗೆ ಬರೆದನು, "ಅಪರಾಧದ ಭಾರ, ಮನಸ್ಸಾಕ್ಷಿಯ ಪೀಡೆ, ಜ್ಞಾಪಕವಾಗುವ ಸುಳ್ಳುಗಳ ವೇದನೆ, ವ್ಯಭಿಚಾರ ಸಮಾನವಾದ ವಿಶ್ವಾಸದ್ರೋಹದ ಕಿರಿಕಿರಿಯುಂಟು ಮಾಡುವ ರಕ್ತಸ್ರಾವ, ಒಬ್ಬನ ಅಂತರಾತ್ಮವು ಎಡೆಬಿಡದೆ ಚುಚ್ಚುತ್ತಿರುವದು ಇತ್ಯಾದಿಗಳು . . . ಒಬ್ಬನ ಜೀವಿತವನ್ನು ನರಕವಾಗಿಸುತ್ತವೆ."[44] ಈ ವಿಧವಾದ ಪೀಡೆಯು ಯೂದನು ತಾನು ಯೇಸುವಿಗೆ ದ್ರೋಹಗೈದು ಏನು ಮಾಡಿದ್ದೇನೆಂಬುದನ್ನು ಗ್ರಹಿಸಿಕೊಂಡಾಗ ಆತನು ಅನುಭವಿಸಿದ ನೋವನ್ನು ಇದನ್ನು ನಮಗೆ ನೆನಪಿಸುತ್ತದೆ. ಮನಸ್ಸಾಕ್ಷಿಯು ಯಾತನೆ ಪಡುವದರ ಫಲಿತಗಳನ್ನು ನೀವು ಕಾಣಬೇಕೆಂದರೆ, ಮದ್ಯಾಹ್ನದ ಬಿಸಿಲಿನಲ್ಲಿ ಒಣಗುತ್ತಾ, ಮರದ ಮೇಲೆ ನೇತಾಡುತ್ತಿರುವದನ್ನು ಯೂದನ ದೇಹವನ್ನು ನೋಡಿರಿ (ನೋಡಿರಿ ಮತ್ತಾಯ 27:5; ಅಪೊಸ್ತಲರ ಕೃತ್ಯಗಳು 1:16–18).

ಖಂಡಿತವಾಗಿಯೂ, ಕೆಲವರು ತಮ್ಮ ಮನಸ್ಸಾಕ್ಷಿಗಳನ್ನು ಕಠಿಣಪಡಿಸಿಕೊಳ್ಳುವರು, ಆದರೆ ಅವರು ದೇವರಿಂದ ಬೇರ್ಪಟ್ಟು ಜೀವಿಸುವದರಿಂದಾಗುವ ಪರಿಣಾಮಗಳನ್ನು ಅನುಭವಿಸಬೇಕಾಗುತ್ತದೆ. ಲೋಕವು ಕೊಡುವ ಸಮಸ್ತವನ್ನೂ ಹುಡುಕುತ್ತಾ ಹೋಗಿ ದೇವರನ್ನು ನಿರ್ಲಕ್ಷ್ಯ ಮಾಡುವದಕ್ಕೆ ಸೊಲೊಮೋನನು ಒಂದು ಉದಾಹರಣೆಯಾಗಿದ್ದಾನೆ. ಸೊಲೊಮೋನನು ಕಲಿಯತಕ್ಕ ಸಮಸ್ತವನ್ನೂ ಕಲಿತುಕೊಳ್ಳಬೇಕೆಂದು "ಮನಸ್ಸಿಟ್ಟಾಗ" (1:13), ಆತನಿಗೆ ಕಂಡು ಬಂದದ್ದೇನೆಂದರೆ "ಬಹು ಜ್ಞಾನವಿದ್ದಲ್ಲಿ ಬಹು ಸಂಕಟ, ಹೆಚ್ಚು ತಿಳುವಳಿಕೆಯನ್ನು ಪಡೆದವನಿಗೆ ಹೆಚ್ಚ ವ್ಯಥೆ" (1:18) ಎಂದು ಪ್ರಸಂಗಿ ಪುಸ್ತಕವು ತೋರಿಸುತ್ತದೆ. ಬಳಿಕ ಆತನು ಭೋಗಗಳನ್ನು ಅನುಭವಿಸಬೇಕೆಂದು ತನ್ನನ್ನು ಒಪ್ಪಿಸಿಕೊಂಡಾಗ, ಅಂತಿಮವಾಗಿ ಆತನು "ಇದು ಸಾಧಿಸಿದ್ದಾದರೂ ಏನು?" ಎಂದು ಪ್ರಶ್ನಿಸಿದನು (2:1, 2). ಆತನ ಮಹಾ ಸಾಧನೆಗಳ ಬಳಿಕ, ಆತನು ಬರೆದಿದ್ದೇನೆಂದರೆ "ಗಾಳಿಯನ್ನು ಹಿಂದಟ್ಟಿದ ಹಾಗೆ ಸಮಸ್ತವೂ ವ್ಯರ್ಥವಾಯಿತು" (2:11). ಆತನು ಅತ್ಯಧಿಕವಾದ ಆಸ್ತಿಯನ್ನು ಸಂಪಾದಿಸಿಕೊಂಡಾದ ಮೇಲೆ, ಆತನು ಈ ಮುಕ್ತಾಯಕ್ಕೆ ಬಂದನು, "ಬೆಳ್ಳಿಯನ್ನು [ಹಣವನ್ನು] ಆಶಿಸುವವನಿಗೆ [ಬಯಸುವವನಿಗೆ] ಎಷ್ಟು ಬೆಳ್ಳಿಯಿಂದಲೂ ತೃಪ್ತಿಯಾಗದು; ಸಮೃದ್ಧಿಯನ್ನು ಬಯಸುತ್ತಲೇ ಇರುವವನಿಗೆ ಆದಾಯವೆಷ್ಟಾದರೂ ಸಾಲದು" (5:10).

ಅನೇಕ ಆಧುನಿಕ ಉದಾಹರಣೆಗಳು ನೆನಪಿಗೆ ಬರುತ್ತವೆ: ಆಸ್ತಿಪಾಸ್ತಿಗಳನ್ನು

ಕೂಡಿಸಿಟ್ಟುಕೊಳ್ಳಲು ತನ್ನ ಜೀವಿತ ಕಾಲಗಳನ್ನೆಲ್ಲಾ ಕಳೆಯುವವರು ಇದ್ದಾರೆ ಮತ್ತು ಬಳಿಕ ಅವರ ಸ್ವತ್ತುಗಳು ಆತ್ಮವನ್ನು ತೃಪ್ತಿ ಪಡಿಸಲಾಗದೆಂಬುದನ್ನು ಕಂಡುಕೊಳ್ಳುತ್ತಾರೆ. ಕೆಲವು ಸಾರಿ ಲೋಕದ ದೃಷ್ಟಿಯಲ್ಲಿ ಸಾಧಕರೆಂದು ಪರಿಗಣಿಸಲ್ಪಟ್ಟಿದ್ದವರು ಅಧೋಗತಿಗೊಳಗಾಗುತ್ತಾರೆ ಮತ್ತು ಭ್ರಮನಿರಸಗೊಳ್ಳುತ್ತಾರೆ. ತಾವು ಮನುಷ್ಯರ ಕಾನೂನುಗಳಿಗಿಂತ ಉನ್ನತರೆಂದು ಎಣಿಸಿಕೊಳ್ಳುವವರಿದ್ದಾರೆ ಆದರೆ ಅವರು "ದ್ರೋಹಿಯ ಮಾರ್ಗವು ನಾಶಕರ" ಎಂಬ ಹೇಳಿಕೆಯ ಕಠೋರ ವಾಸ್ತವಿಕತೆಯನ್ನು ಕಲಿತುಕೊಳ್ಳುವರು (ಜ್ಞಾನೋಕ್ತಿ 13:15; KJV).

ತುತೂರಿಗಳ ಕುರಿತಾಗಿ ಜ್ಞಾಪಕದಲ್ಲಿಟ್ಟುಕೊಳ್ಳಬೇಕಾದ ಪ್ರಾಥಮಿಕ ಸತ್ಯವು ಏನೆಂದರೆ "ತುತೂರಿಗಳು ಎಚ್ಚರಿಸುತ್ತವೆ" ಎಂಬುದೆ: ದೇವರು ನಮ್ಮನ್ನು ಪ್ರಾಕೃತಿಕ ವಿಕೋಪಗಳ ಮುಖಾಂತರ, ಪಾಪಿಗೆ ಸಂಭವಿಸುವ ಭಯಂಕರ ಸಂಗತಿಗಳ ಮುಖಾಂತರ ಎಚ್ಚರಿಸುವದಕ್ಕೆ ಪ್ರಯತ್ನಿಸುತ್ತಿದ್ದಾನೆ. ಯಾರೋ ಒಬ್ಬನು ನ್ಯಾಯತೀರ್ಪಿನ ವೇಳೆ ಹೀಗೆ ಮೊರೆಯಿಡುತ್ತಿರುವದನ್ನು ಕಲ್ಪಿಸಿಕೊಳ್ಳಬಹುದು, "ಕರ್ತನೇ, ನೀನು ನನ್ನನ್ನು ಏಕೆ ಎಚ್ಚರಿಸಲಿಲ್ಲ?" ಮತ್ತು ಆಗ ಕರ್ತನ ಈ ಪ್ರತ್ಯುತ್ತರವನ್ನು ಕೇಳಿಸಿಕೊಳ್ಳುತ್ತಾನೆ: "ನಾನು ಎಚ್ಚರಿಸಿದೆನು! ನಿನ್ನ ಪ್ರಾಂತ್ಯದಲ್ಲಿ ಮನೆಗಳನ್ನು ಛಿದ್ರಗೊಳಿಸಿದ ಆ ಸುಂಟರಗಾಳಿಯು ನಿನಗೆ ನೆನಪಿಲ್ಲವೇ? ನೀನು ಸುಳ್ಳು ಹೇಳಿದ ಬಳಿಕ ರಾತ್ರಿಯೆಲ್ಲಾ ನಿದ್ದೆ ಮಾಡದೆ ಇದ್ದದ್ದು ನಿನಗೆ ನೆನಪಿಲ್ಲವೋ? ಆ ಛಿದ್ರಗೊಂಡ ದೇಹಗಳಿಂದ ಕೂಡಿದ ಅಪಘಾತದ ದೃಶ್ಯವನ್ನು ನೋಡಿದ್ದು ನಿನಗೆ ನೆನಪಿಲ್ಲವೋ? ನಾನು ಕಾಲದಿಂದ ಕಾಲಕ್ಕೆ ನಿನ್ನನ್ನು ಎಚ್ಚರಿಸುವದಕ್ಕೆ ಪ್ರಯತ್ನಿಸಿದೆನು. ನೀನಂತೂ ಕಿವಿಗೊಡಲೇ ಇಲ್ಲ!"

## ದೇವರ ಎಚ್ಚರಿಕೆಯನ್ನು ನಿರ್ಲಕ್ಷ್ಯ ಮಾಡುವದರ ಮೂರ್ಖತನ (9:20, 21)

Saint Helens ಪರ್ವತವು Washington ಪಟ್ಟಣದ ಆಕಾಶಗಳಲ್ಲಿ ನೂರಾರು ಮೈಲುಗಳಷ್ಟು ಎತ್ತರಕ್ಕೆ ಕಂದು ಬಣ್ಣದ ಹೊಗೆಯ ಗರಿಗಳನ್ನು ಉಗುಳಿತು. ಶೀಘ್ರದಲ್ಲಿಯೇ ಒಂದು ಜ್ವಾಲಾಮುಖಿಯು ಸ್ಫೋಟಿಸುವದೆಂಬುದು ವೈಜ್ಞಾನಿಕ ಸಾಕ್ಷಿಯ ಮೂಲಕ ಸ್ಪಷ್ಟವಾಗಿತ್ತು. "ಎಚ್ಚರಿಕೆ!" ಎಂದು ಶಬ್ದವು ಗಸ್ತಿನಲ್ಲಿದ್ದ ಕಾರು, ಹೆಲಿಕ್ಯಾಪ್ಟರ್ ಮೇಲಿದ್ದ ಧ್ವನಿವರ್ಧಕಗಳಿಂದ ಬಿತ್ತರಿಸಲ್ಪಡುತ್ತಿತ್ತು, ಅಲ್ಲಲ್ಲಿ ಪ್ರಮುಖ ಅಡ್ಡ ರಸ್ತೆಗಳಲ್ಲಿ ಬ್ಯಾಟರಿ-ಚಾಲಿತ ಫಲಕಗಳಲ್ಲಿ ಪ್ರದರ್ಶಿಸಲಾಗುತ್ತಿತ್ತು, ರೆಡಿಯೋ ಹಾಗೂ ಟಿವಿಗಳಲ್ಲಿ ಪ್ರಕಟಿಸಲಾಗಿತ್ತು, ನಾಗರಿಕರು ನಡಿಸುವ ರೆಡಿಯೋಗಳ ಮೂಲಕ ತಿಳಿಸಲಾಗಿತ್ತು. ಜನರು ತಮ್ಮ ಪ್ರಾಣಗಳನ್ನು ಉಳಿಸಿಕೊಳ್ಳಲು ಓಡಿ ಹೋಗಿದ್ದರಿಂದಾಗಿ ಕೆರೆ ಬದಿಯ ಗ್ರಾಮಗಳು, ಪ್ರವಾಸಿ ಶಿಬಿರಗಳು, ಹಾಗೂ ಬೆಟ್ಟ ಹತ್ತುವ ಕ್ರೀಡೆಗಳು ಎಲ್ಲಾ ಜನವಿಲ್ಲದೆ ಬಿಕೋ ಎನ್ನುತ್ತಿದ್ದವು.

ಎಚ್ಚರಿಕೆಗಳನ್ನು ಕೊಟ್ಟಿದ್ದಾಗ್ಯೂ, ಹ್ಯಾರಿ ಎಂಬವನು ಸ್ವಲ್ಪವೂ ಬಗ್ಗಲಿಲ್ಲ. ಹ್ಯಾರಿಯು Spirit Lakeನಲ್ಲಿದ್ದ ಒಂದು ವಸತಿಗೃಹವನ್ನು ನೋಡಿಕೊಳ್ಳುವವನಾಗಿದ್ದನು, ಅದು Saint Helens ಪರ್ವತದಿಂದ ಐದು ಮೈಲುಗಳಷ್ಟು ದೂರದಲ್ಲಿತ್ತು. ವನಪಾಲಕರು ಆತನನ್ನು ಎಚ್ಚರಿಸಿದರು, ತಮ್ಮೊಂದಿಗೆ ಹೊರಟು ಬರುವಂತೆ ನೆರೆಯವರು ಆತನನ್ನು ಬೇಡಿಕೊಂಡರು, ಮತ್ತು ಹ್ಯಾರಿಯ ಸಹೋದರಿಯು ಮಾತನಾಡಿ ಈ ವೃದ್ಧನ ತಲೆಗೆ ಏನಾದರೂ ಅರ್ಥವಾಗುವಂತೆ ಪ್ರಯತ್ನಿಸಿದಳು - ಆದರೆ ಹ್ಯಾರಿ ಅವರ ಮಾತುಗಳನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಲಿಲ್ಲ. ಆತನು ರಾಷ್ಟ್ರೀಯ ಟಿವಿಗಳತ್ತ ಹಲ್ಲು ಕಿರಿಯುತ್ತಾ, "ಈ ಪರ್ವತದ ಬಗ್ಗೆ ಹ್ಯಾರಿಯಷ್ಟು ಉತ್ತಮವಾಗಿ ಬೇರೆ ಇನ್ನಾರಿಗೂ ತಿಳಿದಿಲ್ಲ, ಮತ್ತು ಅದಕ್ಕೆ ಆತನ ಮೇಲೆ ಸ್ಫೋಟಗೊಳ್ಳುವ ಹುಚ್ಚು ಧೈರ್ಯವಿಲ್ಲ" ಎಂದು ಹೇಳಿದನು.

ಮೇ 18, 1980 ರಂದು, ಪರ್ವತದ ಅಡಿಯಲ್ಲಿನ ಕುದಿಯುವ ಅನಿಲಗಳು ಉಬ್ಬಿಕೊಂಡು ಭೂಮಿಯನ್ನು ಮುದುರಿಸಿದ್ದರೆ, ಹ್ಯಾರಿಯು ಮೊಟ್ಟೆಯನ್ನು ಮತ್ತು ಬೇಕನ್ ಬೇಯಿಸಿ ತಿಂದು ಉಳಿದ್ದನ್ನು ತನ್ನ ಹದಿನಾರು ಬೆಕ್ಕುಗಳಿಗೆ ಆಹಾರವನ್ನು ಹಾಕಿದ್ದನು, ಹೊಸದಾಗಿ ಕಟಾವು ಮಾಡಿದ್ದ ತನ್ನ ಹುಲ್ಲುಗಾವಲಿನ ಗಡಿಯಲ್ಲೆಲ್ಲಾ ಪಿಟುನಿಯ ಗಿಡಗಳನ್ನು ನೇಡುವದಕ್ಕೆ ಆರಂಭಿಸಿದ್ದನು. ಬೆಳಿಗ್ಗೆ 8:30 ರ ಹೊತ್ತಿಗೆ ಪರ್ವತವು ಸ್ಫೋಟಗೊಂಡಿತ್ತು.

ಜ್ವಾಲಾಮುಖಿಯು ಹಿರೋಶಿಮಾದ ಮೇಲೆ ಹಾಕಲಾಗಿದ್ದ ಅಣುಬಾಂಬ್‌ಗಿಂತ ಐನ್ನೂರು ಪಟ್ಟು ಹೆಚ್ಚು ಶಕ್ತಿಯೊಂದಿಗೆ ಸ್ಫೋಟಗೊಂಡಿತ್ತು. ಲಕ್ಷಾಂತರ ಟನ್‌ಗಳಷ್ಟು ಬಂಡೆಗಳನ್ನು ಒಡೆದು ಮೇಘಗಳಲ್ಲಿ ಕಣ್ಮರೆಯಾಗಿ ನೂರಾರು ಮೈಲುಗಳಷ್ಟು ಎತ್ತರಕ್ಕೆ ಹೋಗಿದ್ದವು. ಶಬ್ದಕ್ಕಿಂತಲೂ ವೇಗವಾಗಿ ಚಲಿಸುತ್ತಿದ್ದ ಕಂಪನದ ಅಲೆಗಳು, 150 ಸ್ವೇರ ಮೈಲುಗಳಷ್ಟು ದೂರದ ವರೆಗೂ ಸಮಸ್ತವನ್ನು ಸಮತಟ್ಟುಗೊಳಿಸಿದ್ದವು. 50 ಅಡಿಗಳಷ್ಟು ಎತ್ತರದ ಕೆಸರು ಮತ್ತು ಬೂದಿಯ ಗೋಡೆಯೊಂದು ಪರ್ವತದಿಂದ ಹರಿದು ಬರುತ್ತಿತ್ತು.

ಆತನು ಒಂದು ಕಾಲದಲ್ಲಿ ಜೀವಿಸಿದ್ದ Washingtonನ ಮೂಲೆಯಲ್ಲಿ, ಲಾವಣಿ ಹಾಡುಗಾರರು ಈಗ ಹ್ಯಾರಿ ಕುರಿತು ಹಾಡುತ್ತಾರೆ, ಎಚ್ಚರಿಕೆಗಳಿಗೆ ಕಿವಿಗೊಡಲು ನಿರಾಕರಿಸಿದ ಮೊಂಡು ಮುದುಕನು.[45]

## ವಿಗ್ರಹಗಳು - ಆಗ ಮತ್ತು ಈಗ (9:20)

ಬಹಳ ಕಾಲದ ಹಿಂದೆ ದೇವರು ಹೀಗೆ ಹೇಳಿದನು,

> ಯಾವ ಮೂರ್ತಿಯನ್ನೂ ಮಾಡಿಕೊಳ್ಳಬಾರದು. ಆಕಾಶದಲ್ಲಾಗಲಿ ಭೂಮಿಯಲ್ಲಾಗಲಿ ಭೂಮಿಯ ಕೆಳಗಣ ನೀರಿನಲ್ಲಾಗಲಿ ಇರುವ ಯಾವದರ ರೂಪವನ್ನೂ ಮಾಡಿಕೊಳ್ಳಬಾರದು. ಅವುಗಳಿಗೆ ಅಡ್ಡಬೀಳಲೂ ಬಾರದು ಪೂಜೆಮಾಡಲೂ ಬಾರದು . . . (ವಿಮೋಚನಕಾಂಡ 20:3-5)

ಯಾವದೇ ಪಾಪದ ಹೃದಯಭಾಗವೆಂದರೆ ದೇವರ ಬದಲಾಗಿ ಬೇರೊಬ್ಬನನ್ನು ಅಥವಾ ಬೇರೊಂದನ್ನು ನೆಲೆಗೊಳಿಸಿಕೊಳ್ಳುವದೇ ಆಗಿರುತ್ತದೆ. ಯೋಹಾನನ ವಾಚಕರು ಪ್ರಕಟನೆ 9:20ನ್ನು ಓದಿದಾಗ, ಅವರು ಬಹುಶಃ "ಆಸ್ಯ ಸೀಮೆಯಲ್ಲಿದ್ದ ಅಸಂಖ್ಯಾತ ಅನ್ಯದೇವಾರಾಧಕರ ದೇವಾಲಯಗಳ" ಕುರಿತು ಮತ್ತು "ಚಕ್ರವರ್ತಿಯ ಪಾಷಂಡಮತಕ್ಕಾಗಿ ಪ್ರತ್ಯೇಕವಾಗಿ ಸ್ಥಾಪಿಸಲಾಗಿದ್ದ ಹೆಚ್ಚೆಚ್ಚು ಸಂಖ್ಯೆಯ ದೇವಾಲಯಗಳ"[46] ಕುರಿತು ಯೋಚಿಸಿರಬಹುದಾಗಿದೆ. ಇಂದು "ಆ ಪ್ರಾಚೀನ ಅನ್ಯದೇವಾರಾಧಕರ ದೇವಾಲಯಗಳಲ್ಲಿನ ವಿಗ್ರಹಗಳು . . . ಮ್ಯೂಸಿಯಮ್‌ಗಳಲ್ಲಿ ಪ್ರದರ್ಶನ ವಸ್ತುಗಳಾಗಿವೆ,"[47] ಆದರೆ ಹೀಗಂದ ಮಾತ್ರಕ್ಕೆ ಜನರು ವಿಗ್ರಹಗಳ ಆರಾಧನೆಯನ್ನು ನಿಲ್ಲಿಸಿದ್ದಾರೆಂದು ಅರ್ಥವಲ್ಲ. ಕೆಲವು ಸಮಾಜಗಳಲ್ಲಿ, ವಿಗ್ರಹವು ಆಕಾರವಿಲ್ಲದ ಬಂಡೆಯ ಒಂದು ಸಮೂಹವಾಗಿರಬಹುದು ಅಥವಾ ಒಂದು ಮರದ ರೆಂಬೆಯಾಗಿರಬಹುದು. ಕೆಲವು ಧಾರ್ಮಿಕವಾದಿಗಳು ಮರಿಯಳ, ಯೇಸು, ಮತ್ತು ತಾವು "ಸಂತರು" ಎಂದು ಬಿರುದು ಕೊಟ್ಟಿರುವ ಇತರರ ಮೂರ್ತಿಗಳ ಮುಂದೆ ಶಿರ ಬಾಗುತ್ತಾರೆ. ಈ ಆಚರಣೆಯ ವಿಷಯವಾಗಿ, Echolsನು ಈ ವ್ಯಾಖ್ಯೆಗಳನ್ನು ಮಾಡುತ್ತಾನೆ:

> ಆರಾಧನೆಯ ಯಾವದೇ ಮಿತ್ಯ ವಸ್ತು - ಒಬ್ಬ ಸಂತನ ಮೂರ್ತಿ, ಕನ್ಯೆ ಮರಿಯಳ, ಅಥವಾ ನಿತ್ಯವಾದ ಬಾಲ ಯೇಸುವಿನ ಮೂರ್ತಿ ಸಹ - ಒಂದು ಸುಳ್ಳು ದೇವರು ಹಾಗೂ ಒಂದು ದೆವ್ವ ಆಗಿರುತ್ತದೆ. ನಾವು ಬಂಗಾರ ಅಥವಾ ಸಿಮೆಂಟಿನ ಮೂರ್ತಿಗೆ

> ಮಾಂತ್ರಿಕ ಶಕ್ತಿಗಳಿವೆ ಎಂದು ಹೇಳುವಾಗ, ಮಾಟಮಂತ್ರಕ್ಕೆ ಸಮಾನವಾದದ್ದನ್ನು ಆಚರಿಸುವವರಾಗಿದ್ದೇವೆ . . . ವಿಗ್ರಹಗಳನ್ನು ಆರಾಧಿಸುವವರು ತಾವು ಸ್ವತಃ ಶಾರೀರಿಕ ವಿಗ್ರಹಕ್ಕೇ ಪೂಜೆ ಮಾಡುವದಿಲ್ಲ, ಆದರೆ ಆ ಮೂರ್ತಿಯು ಯಾವ ವ್ಯಕ್ತಿಯನ್ನು ಪ್ರತಿನಿಧಿಸುತ್ತದೋ ಆತನನ್ನೇ ಪೂಜಿಸುತ್ತೇವೆಂದು ಹೇಳಿಕೊಳ್ಳುತ್ತಾರೆ. ಅದು ಅವರಿಂದ ನಿರ್ವಹಿಸುವದಕ್ಕೆ ಕಠಿಣವಾದ ನಿಲುವು ಆಗಿರುತ್ತದೆ, ಯಾಕೆಂದರೆ ಅವರು ಅನೇಕ ಸಾರಿ ಕನ್ಯೆ ಮರಿಯಳ ಪ್ರತಿಮೆಗಳು ಅದ್ಭುತಗಳನ್ನು ಮಾಡಿದವೆಂದು ಹೇಳುತ್ತಾರೆ, ಅಥವಾ ಒಂದು ನಿರ್ದಿಷ್ಟವಾದ ಮೂರ್ತಿ ಮುಂದೆ ಪ್ರಾರ್ಥಿಸುವದಕ್ಕಾಗಿ ಪ್ರಪಂಚವನ್ನೆಲ್ಲಾ ಯಾತ್ರೆ ಮಾಡುತ್ತಾರೆ.[48]

ಹೇಗೂ, ನಾವು ಅತಿಯಾಗಿ ಸ್ವ-ನೀತಿಯುಳ್ಳವರೆಂದು ಭಾವಿಸಿಕೊಳ್ಳುವದಕ್ಕೆ ಮುನ್ನ, ನಮ್ಮಲ್ಲಿ ಅನೇಕರು ಅಧಿಕ ಗ್ರಹಿಸಲಾಗದಷ್ಟು ಸೂಕ್ಷ್ಮವಾಗಿದ್ದರೂ ವಾಸ್ತವಿಕದಂತೆಯೇ ಇರುತ್ತವೆಂಬುದನ್ನು ಗ್ರಹಿಸಿಕೊಳ್ಳಬೇಕಾಗಿರುತ್ತದೆ:

> [ನಮ್ಮಲ್ಲಿ ಬಹಳಷ್ಟು ಮಂದಿ] ಬಂಡೆಯಿಂದ ಕೆತ್ತಿದ ಬೃಹತ್ತಾಕಾರದ ಪಕ್ಷಿಗಳ ಮುಂದೆ ಅಥವಾ ಕಲ್ಲಿನ ಕಣ್ಣುಗಳುಳ್ಳ ಕಟ್ಟಿಗೆಯ ವಿಗ್ರಹಗಳ ಮುಂದೆ ಬಾಗುವದಿಲ್ಲ . . . ಆದರೆ ಯೆಹೋವನಿಗೆ ಪೈಪೋಟಿ ನೀಡುವ ಇತರ ದೇವರುಗಳನ್ನು ಈಗಲೂ ಹೊಂದಿದ್ದೇವೆ.
>
> ನಾವು ಎಂದಿಗೂ ಬಸವ ದೇವರ ಮುಂದೆ ಶಿರ ಭಾಗಿಸದೆ ಇರಬಹುದು, ಆದರೆ ನಾವು ಈಗಲೂ ಬಂಗಾರವನ್ನು ಆರಾಧಿಸುತ್ತಿರಬಹುದಾಗಿದೆ. ನಾವು ಬಾಳ್ ದೇವರ ಕೆತ್ತಿದ ಪ್ರತಿಮೆಯ ಮುಂದೆ ಎಂದಿಗೂ ಮೊಣಕಾಲೂರಿಲ್ಲದೆ ಇರಬಹುದು, ಆದರೆ ಡಾಲರ್ ನೋಟಿನಲ್ಲಿ ಸಹ ಒಂದು ಕೆತ್ತಿತ ಪ್ರತಿಮೆ ಇರುತ್ತದೆ. ನಮ್ಮಲ್ಲಿ ಯಾವನಾದರೂ ನಾನು ಎಂದಿಗೂ ದೇವರ ಆರಾಧನೆಗಿಂತಲೂ ಆಕಾಂಕ್ಷೆ, ವ್ಯರ್ಥತ್ವ ಅಥವಾ ಸ್ವಾರ್ಥವನ್ನು ಮುಖ್ಯವೆಂದು ಎಣಿಸಿರುವದೇ ಇಲ್ಲ ಎಂದು ಹೇಳುವದಕ್ಕೆ ಸಾಧ್ಯವೋ? ಈ ಜೀವಿತದಲ್ಲಿ *ಒಳ್ಳೇವುಗಳೆಂದು* ಹೇಳುವಂಥ ಅನೇಕ ಸಂಗತಿಗಳಿರುತ್ತವೆ, ಆದರೆ ಅವುಗಳು *ದೇವರು* ಅಲ್ಲ.[49]

ಕೊಲೊಸ್ಸೆ 3:5ರಲ್ಲಿ, "ವಿಗ್ರಹಾರಾಧನೆಗೆ ಸಮವಾದ ಲೋಭ" ("ದುರಾಶೆ," KJV) ಎಂದು ಹೇಳಿದನು. ನಮ್ಮ ಜೀವಿತದಲ್ಲಿ ನಾವು ಯಾವುದಕ್ಕೆಲ್ಲಾ *ಪ್ರಥಮ* ಸ್ಥಾನವನ್ನು ಕೊಡುತ್ತೇವೋ ಅದು ನಮ್ಮ ದೇವರು.

## ಮಾದಕದ್ರವ್ಯಗಳು ಮತ್ತು ಅತೀಂದ್ರಿಯತೆ (9:21)

ಅತೀಂದ್ರಿಯ ಧರ್ಮಗಳಲ್ಲಿ ಈಗಲೂ ಮಾದಕದ್ರವ್ಯಗಳ ಬಳಕೆಯಾಗುತ್ತಿದೆ. ಅಮೆರಿಕದಲ್ಲಿ, ನೇಟಿವ್ ಅಮೆರಿಕನ್ ಚರ್ಚ್ ಸದಸ್ಯರು ಪೇಯೋಟಿ ಎಂಬುದನ್ನು ಬಳಸುತ್ತಾರೆ. "ಪೇಯೋಟಿ" ಎಂಬುದು ನೈಋತ್ಯ ಅಮೆರಿಕ ಮತ್ತು ಉತ್ತರ ಮೆಕ್ಸಿಕೋದಲ್ಲಿ ಸಿಕ್ಕುವ ಒಂದು ಬಗೆಯ ಕಳ್ಳಿ ಗಿಡದ ಸಾಮಾನ್ಯ ಹೆಸರಾಗಿರುತ್ತದೆ. ಇದರಲ್ಲಿ ಭ್ರಮಾಜನಕ ಕ್ಷಾರಭವಿದ್ದು ಅದು ಅಮಲೇರುವಂತೆ ಮಾಡಿ ವಿವಿಧ ಬಣ್ಣಗಳು ಗೋಚರವಾಗುತ್ತವೆ ಮತ್ತು ಅಂತರೀಕ್ಷದಲ್ಲಿರುವಂತೆ ಅನಿಸಿಕೆ ಉಂಟಾಗುತ್ತದೆ. ಅಜ್ಞಾನಿಗಳು ಈ ಅಮಲೇರುವಿಕೆಯನ್ನು "ದರ್ಶನಗಳು" ಎಂದು ಭಾವಿಸಿಕೊಳ್ಳುತ್ತಾರೆ. ನೇಟಿವ್ ಅಮೆರಿಕನ್ ಚರ್ಚ್ ಕೆಲವು ಅಮೆರಿಕನ್ ಭಾರತೀಯರನ್ನು, ಮುಖ್ಯವಾಗಿ ನೈಋತ್ಯ ಅಮೆರಿಕದಲ್ಲಿರುವ ಹಲವಾರು ಬುಡಕಟ್ಟುಗಳಿಗೆ ಸೇರಿದವರನ್ನು ಒಳಗೊಂಡ ಒಂದು ಧಾರ್ಮಿಕ ಸಂಘವಾಗಿರುತ್ತದೆ. ಈ ಸಭೆಯು ಕ್ರೈಸ್ತತ್ವದ ಕೆಲವು ಬೋಧನೆಗಳನ್ನು ಪೇಯೋಟಿ

ಮಾದಕದ್ರವ್ಯದ “ಸಂಸ್ಕಾರಿಕ” ಬಳಕೆಯೊಂದಿಗೆ ಸಮ್ಮಿಲನಗೊಳಿಸುತ್ತದೆ. ತಮ್ಮ ಅತೀಂದ್ರಿಯ ಆಚರಣೆಗಳ ಜೊತೆಯಲ್ಲಿ ಮಾದಕದ್ರವ್ಯಗಳನ್ನು ಬಳಸುವ ಉದಾಹರಣೆಗಳು ಪ್ರಚಂಚದುದ್ದಕ್ಕೂ ಸಾಕಷ್ಟು ಸಿಕ್ಕಬಲ್ಲವು.

---

## ಅಡಿಟಿಪ್ಪಣಿಗಳು

[1]Karl Menninger, *Whatever Happened to Sin?* (New York: Hawthorn Books, 1973). [2]Jimmy Allen, *“What Is Hell Like?” and Other Sermons* (Dallas: Christian Publishing Co., 1965), 22–40. [3]Robert H. Mounce, *The Book of Revelation*, The New International Commentary on the New Testament, ed. F. F. Bruce (Grand Rapids, Mich.: Wm. B. Eerdmans Publishing Co., 1977), 195. [4]Jim McGuiggan, *The Book of Revelation*, Looking Into The Bible Series (Lubbock, Tex.: International Biblical Resources, 1976), 94. [5]William Hendriksen, *More Than Conquerors* (Grand Rapids, Mich.: Baker Book House, 1954), 145. [6]Alfred Plummer, *Revelation*, Pulpit Commentary, ed. H. D. M. Spence and Joseph S. Exell, vol. 22 (Grand Rapids, Mich.: Wm. B. Eerdmans Publishing Co., 1950), 263. [7]ಈ ಪರಿಚ್ಛೇದದಲ್ಲಿನ ಬಹಳಷ್ಟು ಭಾಗವು Merrill C. Tenney, *The Book of Revelation*, Proclaiming the New Testament (Grand Rapids, Mich.: Baker Book House, 1963), 46 ದಿಂದ ಆಯ್ದುಕೊಳ್ಳಲಾಗಿದೆ. [8]Allen, 33. [9]Leon Morris, *Revelation*, rev. ed., The Tyndale New Testament Commentaries, ed. Leon Morris (Grand Rapids, Mich.: Wm. B. Eerdmans Publishing Co., 1987), 100. [10]Bruce M. Metzger, *Breaking the Code: Understanding the Book of Revelation* (Nashville: Abingdon Press, 1993), 58.

[11]Charles Caldwell Ryrie, *Revelation* (Chicago, Ill.: Moody Press, 1968), 61. [12]Mounce, 196. [13]Ibid. [14]G. B. Caird, *A Commentary on the Revelation of St. John the Divine*, Harper’s New Testament Commentaries, ed. Henry Chadwick (London: Adam & Charles Black, 1966), 120. [15]T. F. Glasson, *The Revelation of John*, The Cambridge Bible Commentary on the New English Bible, ed. P. R. Ackroyd, A. R. C. Leaney, and J. W. Packer (Cambridge: Cambridge University Press, 1965), 60. [16]Caird, 120. [17]G. R. Beasley-Murray, *The Book of Revelation*, The New Century Bible Commentary, ed. Matthew Black (Grand Rapids, Mich.: Wm. B. Eerdmans Publishing Co., 1974), 162–63. [18]*The World Book Encyclopedia*, 1962 ed., s.v. “Grasshoppers” (emphasis added). [19]Homer Hailey, *Revelation* (Grand Rapids, Mich.: Baker Book House, 1979), 233. [20]Frank Pack, *Revelation,* Part 1 (Austin, Tex.: R. B. Sweet Co., 1965), 77–78.

[21]M. Robert Mulholland, Jr., *Revelation: Holy Living in an Unholy World*, Francis Asbury Press Commentary, ed. M. Robert Mulholland, Jr. (Grand Rapids, Mich.: Francis Asbury Press, 1990), 196. [22]Ray Summers, *Worthy Is the Lamb* (Nashville: Broadman Press, 1951), 158. [23]Owen L. Crouch, *Expository Preaching and Teaching: Revelation* (Joplin, Mo.: College Press Publishing Co., 1985), 167. [24]Caird, 118, 120. [25]Earl F. Palmer, *1, 2, 3 John & Revelation*, The Communicator’s Commentary, ed. Lloyd J. Ogilvie, vol. 12 (Dallas: Word Publishing, 1982), 188. [26]See Summers, 159. [27]Beasley-Murray, 164. [28]Hailey, 235. [29]Mulholland, 198 (emphasis added). [30]Michael Wilcock, *The Message of Revelation: I Saw Heaven Opened*, The Bible Speaks Today, ed. John R. W. Stott (Downers Grove, Ill.: Intervarsity Press, 1975), 98–99.

[31]Summers, 158–59. [32]McGuiggan, 143. [33]Mounce, 202. [34]Eldred Echols, *Haven’t You Heard? There’s a WAR Going On!: Unlocking the Code to Revelation* (Fort Worth, Tex.: Sweet Publishing, 1995), 180. [35]Beasley-Murray, 166–67. [36]Warren W. Wiersbe, *The Bible Exposition Commentary*, vol. 2 (Wheaton, Ill.: Victor Books, 1989), 595. [37]Caird, 123. [38]Morris, 124. [39]Daniel Russell, *Preaching the Apocalypse* (New York: Abingdon Press, 1935), 143–44. [40]W. E. Vine, *The Expanded Vine’s Expository Dictionary of New Testament Words*, ed. John R. Kohlenberger III with James A. Swanson (Minneapolis, Minn.: Bethany House Publishers,

1984), 1064–65.

[41]Ibid., 1065. [2]Mulholland, 199. [43]ಈ ಪರಿಚ್ಛೇದವು Wilcock, 97ರಿಂದ ಆಯ್ದುಕೊಳ್ಳಲ್ಪಟ್ಟಿದೆ. [44]Crouch, 167. [45]The story of Harry is adapted from Billy Graham, *Approaching Hoofbeats: The Four Horsemen of the Apocalypse* (New York: Avon Books, 1985), xi–xii. [46]Martin Kiddle, *The Revelation of St. John*, The Moffatt New Testament Commentary, ed. James Moffatt (New York: Harper & Brothers, Publishers, 1940), 165. [47]Burton Coffman, *Commentary on Revelation* (Austin, Tex.: Firm Foundation Publishing House, 1979), 216. [48]Echols, 180.[49]David Roper, *"The Day Christ Came (Again)" and Other Sermons* (Dallas: Christian Publishing Co., 1964), 65.